# ಅಧ್ಯಯನ 13 Study XIII

# ನೂತನ ಸೃಷ್ಟಿಯ ತಂದೆ ತಾಯಿಗಳ ಅವಶ್ಯಕ ಕರ್ತವ್ಯಗಳು

## PARENTAL OBLIGATIONS OF THE NEW CREATION

**ಸೃಷ್ಟಿಪರ ಶಕ್ತಿಯನ್ನು ಕಾರ್ಯಗೊಳಿಸುವಲ್ಲಿ ಅಂಟಿಕೊಂಡಿರುವ ಹೆಚ್ಚಿನ ಅವಶ್ಯಕ ಕರ್ತವ್ಯಗಳು – ಜನನ ಪೂರ್ವದಲ್ಲಿನ ಪ್ರಭಾವಗಳು – "ಮಗುವು ಸಾಗಬೇಕಾದ ಮಾರ್ಗದಲ್ಲಿಯೇ ಆತನನ್ನು ತರಬೇತುಗೊಳಿಸು!"– ಭಾನುವಾರ ಶಾಲೆಗಳ ಪ್ರಭಾವ – ಮಕ್ಕಳ ಆತ್ಮವಿಶ್ವಾಸ – ಮಕ್ಕಳ ತರಬೇತಿಯ ಸಲಹೆಗಳ ಶಕ್ತಿ – ಮಹಾಸಂಕಟ ಕಾಲದಲ್ಲಿ ನಮ್ಮ ಮಕ್ಕಳು – ಸೂಕ್ತವಾದ ಮತ್ತು ಸೂಕ್ತವಲ್ಲದ ಮೋಜುಗಳು – ನೂತನ ಸೃಷ್ಟಿಗಳ ಮಕ್ಕಳ ವಿವಾಹಗಳು.**

ತಂದೆತಾಯಿಗಳ ಅವಶ್ಯಕ ಕರ್ತವ್ಯಗಳು ಮಾನವ ಜಾತಿಯ ವಿಷಯಗಳಲ್ಲಿನ ಮಹತ್ವವಾದ ವಿಚಾರಗಳಾಗಿವೆ. ಮಾನವಜಾತಿಯನ್ನು ಅವಕ್ಕೆ ಅಂಟಿಕೊಂಡಿರುವ ಎಲ್ಲಾ ಸಾಧ್ಯತೆಗಳೊಂದಿಗೆ ಹೆಚ್ಚಿಸಿ ಅಸ್ತಿತ್ವಕ್ಕೆ ತರುವ ಶಕ್ತಿಯು ಅದ್ಭುತವಾದುದು – ಇದು ಮಾನವರನ್ನು ದೈವಿಕ ಶಕ್ತಿಯ ಸಮೀಪಕ್ಕೆ ತರುವಂಥದ್ದಾಗಿದೆ. ನಿಜವಾಗಿಯೂ ಇದು ಮಾನವರು ದೇವರ ನಿಯೋಗಿಯಾಗಿ ದೈವಿಕಶಕ್ತಿಯನ್ನು ಕಾರ್ಯಗತ ಮಾಡುವುದಾಗಿದೆ. ಪ್ರತಿಯೊಂದು ಮಗುವಿನ ಜನನದ ಸಾಧ್ಯತೆಯು ಅನುಕೂಲತೆ, ಅನಾನುಕೂಲತೆ; ಒಳ್ಳೆಯವು, ಕೆಟ್ಟವು; ಗೌರವ ಅಗೌರವ ಇವೇ ಮುಂತಾದ ದೆಸೆಗಳಲ್ಲಿ ಅದ್ಭುತವಾದ ಅತಿರೇಕಗಳಲ್ಲಿ ವಿಸ್ತ್ರುತಿಗೊಳ್ಳುತ್ತದೆ. ನಿಜವಾಗಿ ಮಾನವಜಾತಿಯು ಈ ಸಂಗತಿಗಳನ್ನು ಅದರ ಸತ್ವದ ನೆಲೆಯಲ್ಲಿ ಗ್ರಹಿಸಿಕೊಂಡದ್ದೇ ಆದರೆ ಅದು ಮಕ್ಕಳ ಹುಟ್ಟುವಿಕೆಯನ್ನು ಮೋಹದ ಸಮತಲದಿಂದ ಎತ್ತಿ, ಬೌದ್ಧಿಕ ಮತ್ತು ನೈತಿಕ ತತ್ವಗಳನ್ನು ಸಡಿಲಗೊಳಿಸಿ ಒಂದು ಪ್ರತಿಷ್ಠಿಸಲ್ಪಟ್ಟ ನೆಲೆಯನ್ನಾಗಿ ಮಾಡುತ್ತದೆ. ಇದರಲ್ಲಿ ಪಿತೃತ್ವ ಮತ್ತು ಮಾತೃತ್ವಗಳ ಜವಾಬ್ದಾರಿಗಳು ಇನ್ನೂ ಕೆಲವರಷ್ಟೇ ತಲುಪಿರುವ ಮಟ್ಟದಲ್ಲಿ ಸಾಧಿಸಲ್ಪಡುವುದು. ಕರ್ತವ್ಯ ಬಗೆಗಿನ ಈ ಆಲೋಚನೆಗಳು ಮಾನಸಿಕ, ದೈಹಿಕ ಮತ್ತು ನೈತಿಕವಾಗಿ ತಂದೆತಾಯಿಯಗಳ ಮೇಲೆ ಆತುಕೊಂಡ ಮಗುವಿಗೆ ಮಾತ್ರವೇ ಅಲ್ಲ, ಈ ಹೆಚ್ಚಿಸುವ ಅದ್ಭುತ ಶಕ್ತಿಯನ್ನು ದಯಪಾಲಿಸಿದ ಸೃಷ್ಟಿಕರ್ತನಿಗೂ, ಮತ್ತು ಈ ಶಕ್ತಿಯನ್ನು ಉಪಯೋಗಿಸುವ ಬಗ್ಗೆ ಉತ್ತರಿಸಬೇಕಾಗಿರುವ ಆತನ ಮನೆವಾರ್ತೆಯವರಿಗೂ ವಿಸ್ತಾರಗೊಳಿಸಬೇಕು.

ಈ ಜವಾಬ್ದಾರಿಯುತವಾದ ಭಾವನೆಗಳನ್ನು ದೈವೀಕ ವ್ಯವಸ್ಥೆಯ ಪ್ರಕಾರ ನಾವು ಗ್ರಹಿಸಿಕೊಳ್ಳಲು ಪ್ರಾರಂಭಿಸುವಾಗ ತಂದೆತಾಯಿಗಳು ಮುಂಬರುವ ಮಕ್ಕಳ ಗುಣಲಕ್ಷಣಗಳ ಮೇಲೆ ಅವನ್ನು ಪಡಕೊಳ್ಳುವ ಕ್ಷಣದಲ್ಲಿ ಮಾತ್ರವಲ್ಲ ಗರ್ಭಧಾರಣಾ ಅವಧಿಯಲ್ಲಿಯೂ ಸಹಾ ತಮ್ಮ ಪ್ರಭಾವವನ್ನು ಬೀರುತ್ತಾರೆ. ಆ ಸಮಯದಲ್ಲಿ ತಾಯಿಯ ಮನಸ್ಸು, ಆಕೆಯ ಭಾವನೆಗಳು, ಆಕೆಯ ಮಾನಸಿಕ ಸ್ಥಿತಿಗಳು, ಆಕೆಯ ಚಿತ್ತವೃತ್ತಿಗಳು ಇವೆಲ್ಲವೂ ಭ್ರೂಣಾವಸ್ಥೆಯಲ್ಲಿರುವ ಮಗುವಿನ ಮೇಲೆ ಪ್ರಭಾವವನ್ನು ಬೀರುತ್ತವೆ; ಅಷ್ಟು ಮಾತ್ರವಲ್ಲ, ಅಂತಹ ಸಮಯದಲ್ಲಿ ಎಲ್ಲರೂ ಅಲ್ಲವಾದರೂ ಹೆಚ್ಚಿನವರು, ಗಂಡಂದಿರ ಸಮರ್ಪಕವಾದ ನಿಗಾದಲ್ಲಿರುವ ತಾಯಂದಿರು ಸಹಾ ವಿಶೇಷವಾಗಿ ತನ್ನ ಸುತ್ತಲಿನ ಪ್ರಭಾವಗಳಿಗೆ ಪರಿಣಾಮಕಾರಿಯಾಗಿ ತುತ್ತಾಗುತ್ತಾರೆ. ತಾಯಿಯು ಮನಸ್ಸನ್ನು ಪ್ರಭಾವಯುತವಾಗಿಯೂ, ಉಲ್ಲಾಸಕರವಾಗಿಯೂ ಇಡುವುದಾದರೆ ಮತ್ತು ಆಕೆಯ ಹೃದಯವನ್ನು ಸಂತೋಷಪಡಿಸುವುದಾದರೆ, ಅವುಗಳು ಭ್ರೂಣದ ಮೇಲೆ ಅನುಕೂಲಕರ ಪರಿಣಾಮಗಳನ್ನು ಬೀರುತ್ತವೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಆಕೆಗೆ ಕಿರುಕುಳ ನೀಡಿದರೆ, ಚಿಂತೆಯನ್ನುಂಟುಮಾಡಿದರೆ, ತೊಂದರೆ ನೀಡಿದರೆ, ವಾದವಿವಾದಗಳೂ, ಕಳವಳಗಳು ಆಕೆಯನ್ನು ಸುತ್ತುವರೆದರೆ, ಈ ಕೊರತೆಗಳು ಖಂಡಿತವಾಗಿ ಭ್ರೂಣದ ಮೇಲೆ ದುಷ್ಪರಿಣಾಮಗಳನ್ನು ಬೀರುವುದಲ್ಲದೆ ಅದಕ್ಕೆ ಸಿಡುಕಿನ ಅಥವಾ ದುಃಖಕರವಾದ ಅಥವಾ ಕೆಟ್ಟ ಸ್ವಭಾವದ ಜೀವನ ಪ್ರವೃತ್ತಿಯನ್ನುಂಟು ಮಾಡುತ್ತದೆ. ತಂದೆತಾಯಿಗಳ ಸುತ್ತಲಿನ ಪರಿಸ್ಥಿತಿಗಳು ಸದ್ವರ್ತನೆಯಿಲ್ಲದ ಮತ್ತು ಸ್ವಾರ್ಥತೆಗಳಿಂದ, ಕೀಳು ಸಂಗತಿಗಳಿಂದ ಕೂಡಿದ್ದಾದಲ್ಲಿ, ಆ ರೀತಿಯ ಪ್ರಭಾವಗಳಿಗೆ ತುತ್ತಾದ ಭ್ರೂಣವು ಮಗುವಾಗಿ ಜನಿಸಿದ ಮೇಲೆ ಕೀಳುಮಟ್ಟದ್ದೂ, ತುಚ್ಛವೂ, ಲಂಪಟಾಸಕ್ತವೂ, ಸ್ವಾರ್ಥವೂ ಇವೇ ಮುಂತಾದ ನೀಚಗುಣಗಳಲ್ಲಿ ಬೆಳೆಯುವುದರಲ್ಲಿ ಆಶ್ಚರ್ಯವೇನು?

ಪ್ರಪಂಚದಲ್ಲಿರುವ ಎಲ್ಲಾ ಕೆಟ್ಟತನಗಳೂ ತಂದೆತಾಯಿಗಳ ಎಲ್ಲಾ ಪಾಪ ಮತ್ತು ಬಲಹೀನತೆಗಳು ಮಕ್ಕಳ ಮೇಲೆ ಗರ್ಭಧಾರಣೆಯ ಸಮಯದಲ್ಲಿ ನೇರವಾಗಿ ಹರಿದು ಬರುತ್ತದೆಂದು ಅಥವಾ ಈ ಎಲ್ಲಾ ಕೆಟ್ಟ ಲಕ್ಷಣಗಳು ಮಗುವಿನಲ್ಲಿ ಕಂಡುಬಂದಿದ್ದು ನಂತರದಲ್ಲಿ ಅವುಗಳನ್ನು ಸ್ತ್ರೀ ಅಥವಾ ಪುರುಷರನ್ನಾಗಿ ಪಾಲನೆ ಮಾಡುವಾಗಿನ ತರಬೇತಿಯಲ್ಲಿ ಅವು ಹೆಚ್ಚುತ್ತಾ ಹೋಗುತ್ತವೆಂದು ನಾವು ಹೇಳುತ್ತಿದ್ದೇವೆಂದು ಯಾರೂ ಭಾವಿಸಕೂಡದು. ಕೆಲವು ಕೆಟ್ಟ ಹೆಂಗಸರು ಮತ್ತು ಕೆಟ್ಟ ಗಂಡಸರು ತುಲನಾತ್ಮಕವಾಗಿ ಒಳ್ಳೆಯವರಾಗಿಯೇ ಹುಟ್ಟಿದವರು, ಒಳ್ಳೆಯ ಪರಿಪಾಲನೆಯಲ್ಲಿಯೇ ಬೆಳೆದುಬಂದವರು ಆಗಿರಬಹುದೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಸೈತಾನನು ಸಹಾ ಒಳ್ಳೆಯವನಾಗಿಯೇ ಸೃಷ್ಟಿಸಲ್ಪಟ್ಟವನಾಗಿದ್ದು ಸೃಷ್ಟಿಕರ್ತನ ತರಬೇತಿ ಸಮಯದಲ್ಲಿಯೇ ತಾನಾಗಿಯೇ ಸ್ವಯಿಚ್ಛೆಯಿಂದ ಪಾಪಮಾಡಿದನು. ಹೀಗಿದ್ದರೂ ನಾವು ಹೆಚ್ಚಾದ ದುರ್ಗುಣಗಳು ಎಂದಾದರೂ ಈ ಎರಡು ಮುಖ್ಯವಾದ ಸಹಾಯಗಳನ್ನು ಸತ್ಯತೆಯ ದೆಸೆಯಲ್ಲಿ ಹೊಂದಿಕೊಂಡಿದ್ದವೋ ಎಂದು ಗಂಭೀರವಾದ ರೀತಿಯಲ್ಲಿ ಅನುಮಾನಿಸುವ ಒಲವಿನವರಾಗಿರುತ್ತೇವೆ. ನಾವು ದೇವರ ವಾಕ್ಯದಲ್ಲಿ–"ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು

ಶಿಕ್ಷಿಸು; ಮುಪ್ಪಿನಲ್ಲಿಯೂ ಓರೆಯಾಗನು" (ಜ್ಞಾನೋಕ್ತಿ 22:6) ಎಂಬ ಸತ್ಯವೇದದ ಸಾಮಾನ್ಯ ಹೇಳಿಕೆಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ಎಷ್ಟುಮಂದಿ ತಂದೆತಾಯಿಗಳು ದೇವರ ವಾಕ್ಯದ ಸತ್ಯತೆಯ ಬಗ್ಗೆ ಪ್ರಶ್ನಿಸಲು ಒಲವು ತೋರುತ್ತಿದ್ದಾರೆ? ಒಂದು ಮಗುವನ್ನು ತರಬೇತುಗೊಳಿಸುವ ಸಮಯ ಅದನ್ನು ಪಡಕೊಂಡ ಕ್ಷಣದಿಂದಲೇ ಆರಂಭಗೊಳ್ಳುತ್ತದೆ ಎಂಬುದನ್ನು ಎಷ್ಟುಮಂದಿ ನೆನಪಿನಲ್ಲಿಟ್ಟುಕೊಂಡಿದ್ದಾರೆ? ಬಲಹೀನತೆಗಳಲ್ಲಿ ಪಡಕೊಂಡ ಮಗುವಿಗೆ ಅದು ಹುಟ್ಟುವ ಮೊದಲೇ ಅದರ ಮೇಲೆ ಆಚ್ಛೊತ್ತಿರುವ ಬಲಹೀನತೆಗಳಿಂದ, ಮೂರ್ಖತನಗಳಿಂದ ಮತ್ತು ಪಾಪಗಳಿಂದ ಹೊರತರುವ ತರಬೇತಿ ಬೇಕಾಗುತ್ತದೆ ಎಂದು ತಿಳಿದಿರುತ್ತಾರೆ?

ಪತನಗೊಂಡ ಕಾಲ ಹಾಗೂ ಅಸಮರ್ಪಕವಾದ ಇಂದಿನ ಪರಿಸ್ಥಿತಿಯಲ್ಲಿ ನಾವು ಸಂಪೂರ್ಣವಾಗಿ ಸಮರ್ಪಕವಾದ ಒಂದು ಮಗುವಿನ ಜನನದ ಬಗ್ಗೆ ತಿಳಿಸುವುದನ್ನು ಬಯಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಾವು "ಅಶುದ್ಧತ್ವದಿಂದ ಶುದ್ಧತ್ವವು ಉಂಟಾದೀತೇ? ಎಂದಿಗೂ ಇಲ್ಲ" (ಯೋಬ 14:4) ಎಂಬ ಕರ್ತನ ನುಡಿಕಟ್ಟೊಂದನ್ನು ನೆನಪುಮಾಡುತ್ತೇವೆ. "ಹುಟ್ಟಿದಂದಿನಿಂದ ನಾನು ಪಾಪಿಯೇ; ಮಾತೃಗರ್ಭವನ್ನು ಹೊಂದಿದ ದಿನದಿಂದಲೂ ದ್ರೋಹಿಯೇ"(ಕೀರ್ತನೆ 51:5) ಎಂಬುದು ಸತ್ಯವೆಂದು ನಾವು ಗ್ರಹಿಸುತ್ತೇವೆ. ಈ ಲೋಕವು ಈ ವಿಷಯದಲ್ಲಿ ಏನು ಬೇಕಾದರೂ ನೋಡಲಿ, ಇಲ್ಲವೇ ನೋಡದಿರಲಿ, ಪತನಗೊಂಡ ಜನಾಂಗಕ್ಕೆ ಸೇರಿದ ಕಳಂಕಗಳು ಮತ್ತು ಬಲಹೀನತೆಗಳನ್ನು ಸ್ವಲ್ಪ ಮಟ್ಟಿಗಾದರೂ ಉಪಶಮನಗೊಳಿಸುವ ಸಾಧ್ಯತೆಗಳನ್ನು ನೂತನ ಸೃಷ್ಟಿಯ ದೇವಜನರು ಗ್ರಹಿಸಿಕೊಳ್ಳತಕ್ಕದ್ದು. ದೇವರ ವ್ಯವಸ್ಥೆಯಲ್ಲಿ ಅವರು ದಯಪಾಲಿಸಬಹುದಾದ ಉದಾತ್ತ ಗುಣಗಳನ್ನು ಧರಿಸಿಕೊಂಡವರಾಗಿ ಅವರಂತೆ ಅವರ ಮಕ್ಕಳು ಜನಿಸುವಂತೆಯಾದರೂ ಅವರು ನೋಡಿಕೊಳ್ಳಬೇಕು. ಅವರಿನ್ನೂ ಪತನಗೊಂಡೇ ಇರುತ್ತಾರೆ. ಅವರಿಗೊಬ್ಬ ರಕ್ಷಕನು ನಿಶ್ಚಯವಾಗಿ ಬೇಕಾಗಿದ್ದಾನೆ, ರಕ್ಷಕನಿಲ್ಲದೆ ಅವರು ಸಮರ್ಪಕತೆಯನ್ನಾಗಲೀ, ನಿತ್ಯಜೀವಿತಕ್ಕೆ ಅರ್ಹತೆಯನ್ನಾಗಲೀ ಹೊಂದಿಕೊಳ್ಳಲಾರರು. ಸ್ವಾಭಾವಿಕ ಮಾನವನು ಸ್ವಲ್ಪಮಟ್ಟಿಗೆ ಈ ಸತ್ಯವನ್ನು ಗ್ರಹಿಸಬಹುದು ಮತ್ತು ಇಂಥಹ ಸಲಹೆಗಳಿಂದ ಪ್ರಯೋಜನ ಗಳಿಸಿಕೊಳ್ಳಬಹುದು ಆದರೆ ಅದು ನೂತನ ಸೃಷ್ಟಿಗಳು ಗಳಿಸಿಕೊಳ್ಳುವಷ್ಟು ಅಲ್ಲ.

ಸ್ವಾಭಾವಿಕ ಮನುಷ್ಯನು ಎಷ್ಟೇ ಹೆಣಗಿದರೂ ಆತನು ಇನ್ನೂ ಸ್ವಾಭಾವಿಕವಾಗಿ ಸೈತಾನನಲೋಕಕ್ಕೆ ಸಂಬಂಧಪಟ್ಟವನು, ಲೌಕಿಕನು – ಆದಕಾರಣ ಆತನು ತನ್ನ ಪತ್ನಿಯ ಮೇಲೆ ಮತ್ತು ಆಕೆಯು ತನ್ನ ಭ್ರೂಣದ ಮೇಲೆ ಪರಿಣಾಮ ಬೀರಬಹುದು. ಅವರು ಹೊಂದಿರುವ ಅಲೋಚನೆಗಳು, ಚಿತ್ತವೃತ್ತಿಗಳನ್ನೂ ಅಚ್ಚೊತ್ತಬಹುದು. ಆದರೆ ಇವುಗಳು ಆತ್ಮೀಕವಾದ ಉನ್ನತ ಮನೋಭಾವದ ಕೊರತೆಯುಳ್ಳವು ಗಳಾಗಿರುತ್ತವೆ. ಅದೇ ಸಮಯದಲ್ಲಿ ನೂತನ ಸೃಷ್ಟಿಯು ಅವರೇ ಹೊಂದಿರುವ ಆತ್ಮೀಕ ನಿರೀಕ್ಷೆಗಳನ್ನು, ವಾಗ್ದಾನಗಳನ್ನು ಮತ್ತು ಆದರ್ಶಗಳನ್ನು ಗ್ರಹಿಸುತ್ತಿರುವರು. ಮತ್ತು ಇವುಗಳು ಯೋಗ್ಯರೀತಿಯಲ್ಲಿ ಅನೇಕರಿಗೆ ಪರಿಣಾಮ ಬೀರಲು ಬಯಸುವರು. ನಮ್ಮ ಕರ್ತನಾದ ದೇವರು ವಿಶೇಷವಾಗಿ ತನ್ನ ಸತ್ಯ ಮತ್ತು ಕೃಪೆಯ ದೆಸೆಯಿಂದ ಕರೆದು – ದೇವರ ಮಕ್ಕಳನ್ನು ಅಭಿವೃದ್ಧಿಪಡಿಸಲು ಬಯಸುತ್ತಾನೆ. – ಪರಂತು ಅವರು ಯಾವುದೇ ಕಾರಣದಿಂದ ವೈವಾಹಿಕ ಜೀವಿತಕ್ಕೆ ಒಳಗಾದರೆ ಮತ್ತು ಮಾನವ ಕುಟುಂಬವನ್ನು ಪ್ರಸರಿಸಲು ಬಯಸಿದರೆ, ಅವರು ಈ ವಿಷಯದಲ್ಲಿ ಸ್ವಾಭಾವಿಕ ಸ್ತ್ರೀ ಪುರುಷರಿಗಿಂತ ಹೆಚ್ಚಿನ ಅನುಕೂಲತೆಗಳನ್ನು ಹೊಂದಿರುತ್ತಾರೆ. ಅವರಲ್ಲಿ ಉದಾತ್ತವಾದ ಆದರ್ಶಗಳು, ಭವ್ಯವಾದ ನಿರೀಕ್ಷೆಗಳು, ಶ್ರೇಷ್ಠವಾದ ವಾಂಛೆಗಳು ಮತ್ತು ಶುದ್ಧವಾದ ಆನಂದವು ಇರುತ್ತವೆ; ಇವುಗಳು ಇವರ ಭ್ರೂಣ ಶಿಶುವಿನ ಮೇಲೆ ಪ್ರಭಾವ ಬೀರುವಂತವುಗಳಾಗಿ ತಮ್ಮ ಆಲೋಚನೆಗಳ, ಮನೋದ್ವೇಗಗಳ ಮತ್ತು ಚಿತ್ತವೃತ್ತಿಗಳ ಪ್ರಭಾವವನ್ನು ಗ್ರಹಿಸಿದವರಾಗಿದ್ದು ಅಂಥಹ ತಂದೆತಾಯಿಗಳು ಇತರ ತಂದೆತಾಯಿಗಳಿಗಿಂತ ಬಹಳ ಹೆಚ್ಚಾಗಿ ತಮ್ಮ ಸಂತಾನಕ್ಕೆ ಮಾಡಬಲ್ಲ ಸ್ಥಿತಿಯಲ್ಲಿರುತ್ತಾರೆ.

ಈ ದೆಸೆಯಲ್ಲಿರುವ ಪ್ರಪಂಚವು ಒಂದು ರೀತಿಯ ಸ್ವಾರ್ಥ ವಿವೇಕವನ್ನು ಪಡಕೊಂಡಿದೆ. ಉದಾಹರಣೆಗೆ ಉತ್ಕೃಷ್ಟವಾದ ಸಂಪತ್ತುಗಳ ಸಂಗ್ರಹವನ್ನು ಅಂದರೆ, ದನಕರುಗಳನ್ನು, ಕುದುರೆಗಳನ್ನು, ಆಡು–ಕುರಿಗಳು ಇವೇ ಮುಂತಾದವುಗಳನ್ನು ಹೊಂದಿಕೊಳ್ಳಲು ಆಸಕ್ತಿಯುಳ್ಳವರು ಅವುಗಳ ಸಂಗಮದ ಬಗ್ಗೆ ಜಾಗರೂಕತೆಯುಳ್ಳವರಾಗಿರುತ್ತಾರೆ ಮತ್ತು ಹೆಚ್ಚುವರಿಯಾಗಿ, ವಿಶೇಷವಾಗಿ ತ್ವರಿತವೇಗದ ಕುದುರೆಗಳನ್ನು ಉತ್ಪಾದನೆ ಮಾಡ ಬಯಸುವವರು ಹೆಣ್ಣುಕುದುರೆಗಳ ಗಬ್ಬದ ಸಮಯದಲ್ಲಿ ಹೆಚ್ಚಿನ ಜಾಗರೂಕತೆ ವಹಿಸುತ್ತಾರೆ. ಅವುಗಳಿಗೆ ಬೇಕಾದ ಎಲ್ಲಾ ಅಗತ್ಯತೆಗಳನ್ನೂ, ಅನುಕೂಲತೆಗಳನ್ನು ಒದಗಿಸುತ್ತಾರೆ, ಅವುಗಳ ಹಟ್ಟಿಯನ್ನು ಶುಚಿಗೊಳಿಸುತ್ತಾರೆ ಮತ್ತು ಅವುಗಳಿಗೆ ಬೇಕಾದ ಶುದ್ಧ ಗಾಳಿ ಬೆಳಕುಗಳನ್ನು ಒದಗಿಸುತ್ತಾರೆ. ಹೆಣ್ಣುಕುದುರೆಗಳು ಎಷ್ಟರ ಮಟ್ಟಿಗೆ ಚಿತ್ರಗಳನ್ನು ಇಷ್ಟಪಡುತ್ತವೆ ಎಂಬುದು ತಿಳಿಯದಾದರೂ ಕುದುರೆಹಟ್ಟಿಯ ಗೋಡೆಗಳಿಗೆ ಕುದುರೆ–ಓಟದ ಚಿತ್ರಗಳನ್ನು ಅಂಟಿಸುತ್ತಾರೆ. ಅದಲ್ಲದೆ ಕುದುರೆ ಓಟದ ಪಂದ್ಯಗಳನ್ನು, ಅವುಗಳ ಓಟದ ಅಭ್ಯಾಸ ಇತ್ಯಾದಿಗಳನ್ನು ವೀಕ್ಷಿಸಲು ಗಬ್ಬದ ಕುದುರೆಗಳನ್ನು ಕೊಂಡೊಯ್ಯುತ್ತಾರೆ. ಇವುಗಳೆಲ್ಲವೂ ತಾಯಿ ಕುದುರೆಯಲ್ಲಿ ಹೆಚ್ಚಿನ ಆಕಾಂಕ್ಷೆಗಳನ್ನು ಉತ್ಪನ್ನಮಾಡಿ, ಅದು ಭ್ರೂಣದ ಮೇಲೆ ಅತಿಯಾದ ಪರಿಣಾಮವನ್ನುಂಟುಮಾಡುವಂತೆ ವಿನ್ಯಾಸಗೊಳಿಸಲಾಗುತ್ತದೆ. ಇದರಿಂದ ಹುಟ್ಟುವ ಮರಿಗಳು ವೇಗದ ಕುದುರೆಗಳಾಗಿ ಆ ಮೂಲಕ ಅವುಗಳ ಮಾಲೀಕರಿಗೆ ಹೆಚ್ಚುಹೆಚ್ಚು ಲಾಭಗಳಿಸಿ ಅವರಿಗೆ ಸಂಪ್ರೀತಿಯನ್ನು ಉಂಟುಮಾಡುತ್ತವೆ ಎಂದು ನಿರೀಕ್ಷಿಸಲಾಗುವುದು.

ಮಾನವ ತಂದೆತಾಯಿಗಳಿಗೆ ತಮ್ಮ ಸಂತತಿಯ ಬಗ್ಗೆ ಈ ರೀತಿಯ ಆರ್ಥಿಕ ಆಸಕ್ತಿ ಇಲ್ಲ; ಆದರೆ ಅವರಲ್ಲಿ ಇನ್ನೂ ಆಳವಾದ ಮತ್ತು ನಿಸ್ವಾರ್ಥವಾದ ಆಸಕ್ತಿ ಇದ್ದೇ ಇರುತ್ತದೆ. ಅವರ ಮಕ್ಕಳ ಪರವಾಗಿ ಅವರಿಗಿರುವ ನಿರೀಕ್ಷೆಗಳು ಮತ್ತು ಆಕಾಂಕ್ಷೆಗಳೆಂದರೆ ತಮ್ಮ ಮಕ್ಕಳು ಉತ್ತಮವಾದ ಮಾನಸಿಕ ಮತ್ತು ನೈತಿಕ ಗುಣಲಕ್ಷಣಗಳಿಂದ ಸಂಪನ್ನರಾಗಬೇಕೆಂಬುದೇ. ತಮ್ಮ ಮಕ್ಕಳು ಆತ್ಮೀಕ ಸ್ವಭಾವದಲ್ಲಿ ಹುಟ್ಟುವಂತೆ ನಿರೀಕ್ಷಿಸಲು ನೂತನ ಸೃಷ್ಟಿಗಳಿಗೆ

ಸಾಧ್ಯವಿಲ್ಲವಾದರೂ (ಇದು ಅವರ ಸ್ವಂತ ವಿಚಾರಕ್ಕೆ ಬಾರದ ಕಾರಣ) ಅವರು ತಮ್ಮ ಮಕ್ಕಳಿಗೆ ಅಂತಹ ಆತ್ಮೀಕ ಗುಣಗಳನ್ನು ಹೊಂದಲು ನಿಕಟವಾದ ಐಹಿಕ ಬಾಧ್ಯತೆಗಳನ್ನು ನೀಡುವಂತೆ ನಿರೀಕ್ಷಿಸುತ್ತಾರೆ. ಅವು ಖಂಡಿತವಾಗಿಯೂ ಅವರ ಬಯಕೆ, ಧ್ಯೇಯ ಮತ್ತು ನಿರೀಕ್ಷೆಗಳಾಗಿರುತ್ತವೆ. ಹಲವಾರು ಮಕ್ಕಳು ಪ್ರಾಮಾಣಿಕತೆಯನ್ನು ದೇವರಲ್ಲಿ ಭಯಭಕ್ತಿಯುಳ್ಳ ತಂದೆ ತಾಯಿಗಳಿಂದ ಪಡೆದವರಾಗಿರುತ್ತಾರೆ ಮತ್ತು ಅದಕ್ಕೆ ಅನುರೂಪವಾದ ಆಶೀರ್ವಾದಗಳನ್ನು ಹೊಂದಿಕೊಂಡಿರುತ್ತಾರೆ. ಎಲ್ಲೆಲ್ಲಿ ಕ್ರಿಸ್ತನ ಸುವಾರ್ತೆ ಹೋಗಿದೆಯೋ ಅಲ್ಲೆಲ್ಲಾ ಈ ಪ್ರಭಾವಗಳು ಮಾನವರ ಉತ್ತಮವಾದ ಮಟ್ಟಕ್ಕೆ ಅನುಕೂಲಕರವಾಗಿ ಪರಿಣಮಿಸುತ್ತವೆ. ನಮ್ಮಲ್ಲಿ ಇಂದಿನ ನಾಗರೀಕತೆಯುಳ್ಳ ಪ್ರದೇಶಗಳಲ್ಲಿ ಅನ್ಯಜನರ ಪ್ರದೇಶದಲ್ಲಿರುವುದಕ್ಕಿಂತ ಉನ್ನತ ವಿಧಾನಗಳೂ, ಮಟ್ಟವೂ ಸಾಮಾನ್ಯವಾಗಿ ಬಳಕೆಯಲ್ಲಿರುವುದರಿಂದ ಕ್ರೈಸ್ತ ಜನರು ಸಾಮಾನ್ಯವಾಗಿ ತಮ್ಮ ಮಕ್ಕಳ ಬಗ್ಗೆ ಇರುವ ಸೌಕರ್ಯ ಮತ್ತು ಜವಾಬ್ಧಾರಿಗಳನ್ನು ಅಸಮರ್ಪಕವಾಗಿ ಮೆಚ್ಚಿಕೊಂಡಿರುವರು.

ಈ ವಾದದ ಸಾರಾಂಶವೆಂದರೆ – ನೂತನ ಸೃಷ್ಟಿಗಳು ಮಿಲನವಾಗಿ ದೈಹಿಕ ಇಚ್ಛೆಯಂತೆ ಸಂತಾನೋತ್ಪತ್ತಿ ಮಾಡ ಬಯಸಿದಾಗ ಅವರುಗಳು ತಮ್ಮ ಮನಸ್ಸನ್ನು ಅಂಕೆಯಲ್ಲಿಟ್ಟುಕೊಂಡು ಪರಸ್ಪರ ಪ್ರೀತಿ ಮತ್ತು ಗೌರವಗಳನ್ನು ತೋರುವುದು ಮಾತ್ರವಲ್ಲ, ಸೃಷ್ಟಿಕರ್ತನ ಮೇಲೆ ಗೌರವವುಳ್ಳವರಾಗಿ, ತಮಗೆ ದಯಪಾಲಿಸಲ್ಪಟ್ಟಿರುವ ಈ ದೈವಿಕ ಶಕ್ತಿಯ ಬಗ್ಗೆ ಮೆಚ್ಚುಗೆಯುಳ್ಳವರಾಗಿರಬೇಕು. ಇದರೊಂದಿಗೆ ನಂತರದಲ್ಲಿ ಬರುವ ಪ್ರತಿನಿತ್ಯ ಮತ್ತು ಪ್ರತಿಫಳಿಗೆಯೂ ದೈವಿಕ ಆಶೀರ್ವಾದಗಳಿಗಾಗಿ ಪ್ರಾರ್ಥಿಸುವ ಸಂಧರ್ಭವಾಗಿರಬೇಕು. ಜೀವಿತದ ಪ್ರತಿಯೊಂದು ವ್ಯವಸ್ಥೆಯಲ್ಲಿಯೂ ಮಗುವಿನ ಹಿತವನ್ನು ಕಾಪಾಡಬೇಕು. ಇದೊಂದು ಜೀವನದ ಆಕಸ್ಮಿಕವೆಂದು ಪರಿಗಣಿಸದೆ ಇದೊಂದು ಅತಿ ಮಹತ್ವವಾದ ಘಟ್ಟವೆಂದು ಪರಿಗಣಿಸತಕ್ಕದ್ದು. ಇದು ಆತ್ಮೀಕ ಕೃಪೆಗಳನ್ನು ಕಾರ್ಯಗತಗೊಳಿಸುವ ವಿಶೇಷ ಸಂಧರ್ಭವಾಗಿದೆ. ಇವುಗಳನ್ನು ಈ ಹಿಂದೆ ಬಹಳ ಮಟ್ಟಿಗೆ ಪರಿಗಣಿಸಿದ್ದಿರಬಹುದು – ದೇವರಲ್ಲಿ ಭಯಭಕ್ತಿ, ಆತನ ವಾಗ್ದಾನಗಳು, ನಿರೀಕ್ಷೆ, ನಂಬಿಕೆ, ತಾಳ್ಮೆ, ಸಹೋದರ ದಯೆ, ನಮ್ರತೆ, ಉದಾರತೆ ಮತ್ತು ಪ್ರೀತಿಗಳಲ್ಲಿರುವ ವಿಶ್ವಾಸ ನಿಜವಾಗಿಯೂ ನೂತನ ಸೃಷ್ಟಿಗಳಲ್ಲಿ ಎಲ್ಲಾ ಸಂಧರ್ಭಗಳಲ್ಲಿಯೂ ರೂಢಿಯಲ್ಲಿರುತ್ತವೆ. ಆದರೆ ಮತ್ತೊಂದು ಸಂತತಿಯ ಮೇಲೆ ಅವುಗಳ ಪ್ರಭಾವ, ಮುದ್ರೆ ಅಥವಾ ಅಚ್ಚೊತ್ತುವ ಗುಣಲಕ್ಷಣಗಳ ಕಾರಣಗಳನ್ನು ಅಂತಹ ಸಂಧರ್ಭಗಳಲ್ಲಿ ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕು.

ಸಾಧ್ಯವಾದ ಮಟ್ಟಿಗೆ ಮನೆಯು ಪ್ರಕಾಶಮಯವೂ, ಪ್ರಸನ್ನದಾಯಕವೂ ಆಗಿರಬೇಕು ಮತ್ತು ಮನಸ್ಸನ್ನು ಅನುಕೂಲಕರವಾದ, ಓದುವ, ಬರೆಯುವ, ಲೆಕ್ಕಮಾಡುವ ಮತ್ತು ಜೀವನದ ವ್ಯವಹಾರಿಕ ಕರ್ತವ್ಯಗಳನ್ನು ನಿರ್ವಹಿಸುವ ಪ್ರವಾಹದೆಡೆಗೆ ನಡಿಸಲ್ಪಡಬೇಕು. ಜೀವನದ ಎಲ್ಲಾ ವಿಷಯಗಳಲ್ಲಿ ದೇವರನ್ನು ಸದಾ ಜ್ಞಾಪಿಸಿಕೊಳ್ಳುವಂತೆ ನ್ಯಾಯದ, ಪ್ರೀತಿಯ ಮತ್ತು ಜ್ಞಾನದ ತತ್ವಗಳ ನೆಲೆಯಲ್ಲಿ ಪೂರ್ಣವಾಗಿ ಬೆಳೆಸುವಂತಹ ಹೃದಯ ಸಂಸ್ಕೃತಿಯನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು. ಪತಿ, ಪತ್ನಿಯರ ನಡುವೆ ಲೋಕದೆಡೆಗೆ ಸಾಮಾನ್ಯವಾದ ಪ್ರೀತಿಯ ವಿಶ್ವಾಸ, ಕರುಣೆ ಮತ್ತು ಪರೋಪಕಾರದ ಭಾವನೆಗಳು ಇರುವಾಗ ಪರಿಸ್ಥಿತಿಯು ಬಹಳಷ್ಟು ಅನುಕೂಲಕರವಾಗಿರುತ್ತವೆ; ಆದರೆ ಅಂತಹ ಪರಿಸ್ಥಿತಿಯನ್ನು ಪತಿಯ ಸಂಪೂರ್ಣವಾದ ಸಹಮತವಿಲ್ಲದೆ, ಮತ್ತು ಆತನ ಜಾಗರೂಕ ಅನುಗ್ರಹವಿಲ್ಲದೆ ಪತ್ನಿಯು ಅಪರೂಪವಾಗಿ ಮಾತ್ರವೇ ಊಹಿಸಿಕೊಳ್ಳಬಹುದು. ಈಗಾಗಲೇ ಸಲಹೆ ನೀಡಿರುವಂತೆ ಅಂತಹ ಸಮಯದಲ್ಲಿ ತಾಯಿಯಾದವಳು ತನ್ನ ಕುಟುಂಬದಲ್ಲಿ ತನ್ನ ಸ್ಥಾನಕ್ಕನುಗುಣವಾಗಿರುವ ಸ್ಥಿತಿಯಲ್ಲಿ ತನಗೆ ಸಂಬಂಧ ಪಟ್ಟಿದ್ದರೂ ಕಣ್ತಪ್ಪಿಹೋದ ಯಾವ ವಿಷಯವನ್ನು ಸ್ವಲ್ಪವಾದರೂ ಕೈಗೆತ್ತಿಕೊಳ್ಳಬಾರದು. ನಂತರದಲ್ಲಿ ಪತಿಯೂ ಸಹ ಸಂಭಾಷಣೆಗಳನ್ನು ಸರಿಯಾದ ಮಾರ್ಗದಲ್ಲಿ ನಡೆಸುವಂತೆ, ಉಚಿತವಾದ ಬೌದ್ಧಿಕ ಪುಷ್ಟಿ ಹಾಗೂ ಐಹಿಕ ಆಹಾರಗಳನ್ನು ನೀಡುವ ಎಚ್ಚರಿಕೆ ವಹಿಸಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಆತನು ದೇವರ ಮತ್ತು ಆತನ ಭವ್ಯವಾದ ಯೋಜನೆಗಳ ಬಗ್ಗೆ, ಮತ್ತು ಆತನ ಗುಣಲಕ್ಷಣಗಳು, ಅದರ ಜ್ಞಾನ, ಪ್ರೀತಿ, ಲಾಭ, ನ್ಯಾಯ ಮತ್ತು ಶಕ್ತಿಗಳ ಎಲ್ಲಾ ವೈಶಿಷ್ಟ್ಯಗಳ ಬಗ್ಗೆ ತನ್ನ ಪತ್ನಿಯ ಶುದ್ಧ ಮನಸ್ಸನ್ನು ಜಾಗೃತಿಗೊಳಿಸಬೇಕಾಗುತ್ತದೆ.

ಅನೇಕ ಕ್ರೈಸ್ತ ತಂದೆತಾಯಿಗಳು ತಮ್ಮ ಜೀವಿತದಲ್ಲಿ ಎಲ್ಲಾ ಅನುಕೂಲತೆಗಳನ್ನು, ಸೌಕರ್ಯಗಳನ್ನು ಮತ್ತು ಮನೆವಾರ್ತೆಗೆ ಸಂಬಂಧಿಸಿದ ಸ್ವಾತಂತ್ರ್ಯವನ್ನು ಮತ್ತಿತ್ತರ ಅಂತಹ ಸಮಯದಲ್ಲಿನ ಪಾಲನೆಗಳನ್ನು ಹೊಂದಿಲ್ಲವೆಂದು ಇದಕ್ಕೆ ಉತ್ತರಿಸಬಹುದು. ನಾವು ಇಲ್ಲಿ ಕೇವಲ ಆದರ್ಶಗಳನ್ನು ಮಾತ್ರವೇ ಮುಂದಿಟ್ಟಿದ್ದೇವೆ, ಕರ್ತನ ಮಕ್ಕಳಾಗಿರುವ ಪ್ರತಿಯೊಬ್ಬನೂ ಸಾಧ್ಯವಾದಷ್ಟು ಮಟ್ಟಿಗೆ ಈ ಮಾದರಿಯ ಮಟ್ಟವನ್ನು ತಲುಪಲು ಬಯಸಬೇಕೆಂದು ನಾವು ಅವರಿಗೆ ಉತ್ತರಿಸುತ್ತೇವೆ. ಆದರೆ ಇದರಲ್ಲಿ ಮತ್ತು ಜೀವಿತದ ಇನ್ನಿತರ ಎಲ್ಲಾ ಅನುಭವಗಳಲ್ಲಿ ಕರ್ತನು ಆತನ ಕೃಪೆ ಮತ್ತು ಚೈತನ್ಯದ ಮೂಲಕ ಸಕಲ ಲೌಕಿಕ ಅನಾನುಕೂಲತೆಗಳನ್ನು ಮತ್ತು ಕೊರತೆಗಳನ್ನು ನೀಗಿಸುವನು ಎಂಬುದನ್ನು ನೂತನ ಸೃಷ್ಟಿಗಳು ಎಂದಿಗೂ ಮರೆಯಬಾರದು. ಯಾವ ಮಟ್ಟದಲ್ಲಿಯಾದರೂ ಅನುಗ್ರಹವಿಲ್ಲದ ಪರಿಸ್ಥಿತಿಗೆ ಒಳಗಾದ ಯಾರಾದರೂ ನಿಷ್ಠಾವಂತ ಪ್ರಾರ್ಥನೆಯಲ್ಲಿ ತಮ್ಮ ಹೃದಯಗಳಲ್ಲಿ ಸದಾಕಾಲ ಆಳುವ ದೇವರ ಶಾಂತಿಯು ತುಂಬಿಬರುವಂತೆ ಬಯಸಬೇಕು. ಇದು ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಜೀವಗಳನ್ನು ಯೋಚನೆಗಳನ್ನು ಕ್ರಿಸ್ತನಲ್ಲಿ ಕಾಯುವುದು, ಹೃದಯದ ಈ ಶಾಂತಿಯ ಒಂದು ಫಲವೆಂದರೆ, ತಾಯಿಯ ಸುತ್ತಲೂ ಎಷ್ಟರ ಮಟ್ಟಿಗೆ ಅಕ್ರಮಗಳು ಸುತ್ತುವರೆದಿದ್ದರೂ, ಮಗುವು ಮಾತ್ರ ನಿಶ್ಚಯವಾಗಿ ಇನ್ನಿತರ ಪರಿಸ್ಥಿತಿಗಳಲ್ಲಿ ಜನಿಸಿರಬಹುದಾದ ಮತ್ತು ಅದರ ಇತರೆ ಸಹೋದರ ಸಹೋದರಿಯರಿಗಿಂತ ಹೆಚ್ಚಾದ ಶಾಂತಿಯನ್ನು ಅನುಭವಿಸುತ್ತದೆ. ಇದು ಕಡಿಮೆ ಮುಂಗೋಪ, ಕಡಿಮೆ ದುರ್ಬಲತೆಯುಳ್ಳ ಮತ್ತು ಹೆಚ್ಚು ಸಮಾಧಾನಕರವಾದ ಶಾಂತ ಮಗುವಾಗಿದ್ದು, ಗುಣಲಕ್ಷಣಗಳಲ್ಲಿ ನೀತಿವಂತಿಕೆಯ ನೀತಿನಿಯಮಗಳಿಗೆ ಹೆಚ್ಚು ಒಲವು ತೋರುವುದಾಗಿರುತ್ತದೆ.

## "ನಡೆಯಬೇಕಾದ ಮಾರ್ಗದಲ್ಲಿಯೇ ಮಗುವನ್ನು ತರಬೇತುಗೊಳಿಸು"

## "Train Up a Child in the Way He Should Go"

**"ಬೆತ್ತ ಹಿಡಿಯದ ಪಿತ ಪುತ್ರನಿಗೆ ಶತ್ರು" (ಜ್ಞಾನೋಕ್ತಿ 13:24) "ತಂದೆಯಿಂದ ಶಿಕ್ಷೆಹೊಂದದ ಮಗನೆಲ್ಲಿ? ಮಕ್ಕಳೆಲ್ಲರೂ ಹೊಂದುವ ಶಿಕ್ಷೆಯು ನಿಮಗುಂಟಾಗದಿದ್ದರೆ ನೀವು ಹಾದರದಿಂದ ಹುಟ್ಟಿದವರೇ ಹೊರತು ಪುತ್ರರಲ್ಲ" (ಇಬ್ರಿಯ 12:7).**

ನಮ್ಮ ಉದ್ದೇಶವು ಮಕ್ಕಳ ಶಿಕ್ಷಣದಲ್ಲಿ ಆಗಾಗ ವಿವೇಚನಾರಹಿತವಾಗಿ ಪದೇಪದೇ ಬೆತ್ತವನ್ನು ಉಪಯೋಗಿಸಬೇಕೆಂದಲ್ಲ. ಕೆಲವರು ತಂದೆತಾಯಿಗಳು ತಮ್ಮ ಮಕ್ಕಳಿಗೆ ಅವಶ್ಯಕ ಸಮಯದಲ್ಲಿಯೂ ಶಾರೀರಿಕ ದಂಡನೆ ನೀಡುವುದು ಸರಿಯಲ್ಲ, ತಪ್ಪು ಎಂದು ಮನದಟ್ಟು ಮಾಡುವ ಸಲುವಾಗಿ ನಾವು ಮೇಲಿನ ದೇವರ ವಾಕ್ಯದ ಮಾತುಗಳನ್ನು ಉದಾಹರಿಸಿದ್ದೇವೆ. ಬೆತ್ತದಿಂದ ಆಳಲ್ಪಡುವ ಮನೆಯು ಅವಶ್ಯಕವಾಗಿ ಅಸಂತೋಷದ ಮನೆಯಾಗಿರುತ್ತದೆ. ನೂತನ ಸೃಷ್ಟಿಯವರ ಮನೆಗಳು ಬೆತ್ತದಿಂದಲ್ಲ, ಪ್ರೀತಿಯಿಂದ ಆಳಲ್ಪಡಬೇಕು. ಬೆತ್ತವನ್ನು ಪ್ರೀತಿಯ ನಿಯಮಗಳನ್ನು ನಿರ್ವಹಿಸುವಂತೆ ಮಾಡಲು ಅಪರೂಪವಾಗಿ ಉಪಯೋಗಿಸುವಂತೆ ಮಾತ್ರವೇ ಇಟ್ಟುಕೊಂಡಿರಬೇಕು. ಅದನ್ನು ನಿರ್ವಹಿಸಿದ ನಂತರ ಪ್ರೀತಿಯ ಕೈಗಳಿಂದ ಹಿಡಿದಾಡಿಸಬೇಕೇ ಹೊರತು, ಎಂದಿಗೂ ಕೋಪದ ಕೈಗಳಿಂದಲ್ಲ. ಶಾಂತ ಮನಸ್ಸಿನಿಂದ ಆಳಲ್ಪಡುವ ನೂತನ ಸೃಷ್ಟಿಗಳ ಕ್ರಮವು ಪರಲೋಕದ ಪ್ರಥಮ ಆದ್ಯತೆಗಳಲ್ಲಿ ಒಂದು ಎಂಬುದನ್ನು ಕ್ರಮೇಣವಾಗಿ ಕಲಿತುಕೊಳ್ಳುತ್ತಾರೆ. ಆದುದರಿಂದ ಇದು ನೂತನ ಸೃಷ್ಟಿಗಳ ಮನೆಯ ಪ್ರಥಮ ಅಂಶ ಮತ್ತು ಗುಣಲಕ್ಷಣವಾಗಿರತಕ್ಕದ್ದು.

"ಕ್ರಮ'ವೆಂದರೆ ಹೇಗೂ ಸಂಪೂರ್ಣ ಪ್ರಶಾಂತತೆ ಎಂಬದಾಗಿ ಹೇಳುವ ಅಗತ್ಯತೆ ಇಲ್ಲ, ಇಲ್ಲವಾದಲ್ಲಿ ಅರಣ್ಯದಲ್ಲಿ ಮತ್ತು ಸತ್ತವರ ಮೌನ ನಗರಗಳಲ್ಲಿ ಮಾತ್ರವೇ ಈ "ಕ್ರಮ'ವು ಜಾರಿಯಲ್ಲಿರಲು ಸಾಧ್ಯ. ಕ್ರಮವೆಂದರೆ ಸಂತೋಷ ಮತ್ತು ಸಮಾಧಾನ, ಹಾಗೂ ವಿಶ್ರಾಂತಿ, ಸ್ವಾತಂತ್ರ್ಯ ಮತ್ತು ನ್ಯಾಯ. ಕ್ರಮ ಎಂದರೆ ನ್ಯಾಯ – ನೂತನ ಸೃಷ್ಟಿಯೊಂದಿಗೆ, ಪ್ರೀತಿಯ ನಿಯಮ ಎಂಬ ಸ್ವರ್ಣ ನಿಯಮವು ಮನೆಯ ಯಜಮಾನ ಮತ್ತು ಆತನ ಸಹಾಯಕಳಾದ ಪತ್ನಿ ಹಾಗೂ ಮಕ್ಕಳ ಮೇಲೆ ಆಳ್ವಿಕೆ ನಡೆಸುವುದಾಗಿದೆ. ತಂದೆತಾಯಿಗಳನ್ನು ಎಲ್ಲಾ ಕ್ರಿಸ್ತೀಯ ಕೃಪೆಗಳಲ್ಲಿ ಮಕ್ಕಳಿಗೆ ಮಾದರಿಯನ್ನಾಗಿ ಮಾಡುವುದಾಗಿದೆ. ಪ್ರೀತಿಯ ನಿಯಮವು ಸಹಾ ಪ್ರತಿಫಲದ ಮತ್ತು ಶಿಕ್ಷೆಯ ಅರ್ಥವನ್ನು ನೀಡುವುದಾಗಿದೆ ಮತ್ತು ಕುಟುಂಬದಲ್ಲಿ ತಂದೆತಾಯಿಗಳು ಇದನ್ನು ನೀಡುವವರಾಗಿದ್ದಾರೆ. ಅವರು ಕೈಗೊಂಡ ಬಲಹೀನತೆಗಳ ಬದಲಿಗೆ ಅವರಿಗೆ ಪರಲೋಕದ ತಂದೆಯಿಂದ ಮಾರ್ಗದರ್ಶನ ದೊರೆಯುವುದಾಗಿದ್ದು ಇದರಿಂದ ಅವರು ಆತನನ್ನು ತಮ್ಮ ಹೃದಯಗಳಲ್ಲಿ, ಚಿತ್ತಗಳಲ್ಲಿ ಮಹಿಮೆ ಪಡಿಸುವವರಾಗಿರುವುದು ಮಾತ್ರವಲ್ಲ, ಆದರೆ ಅವರ ಮನೆಗಳೂ ಸಹಾ ನೀತಿಯುಳ್ಳ ಮನೆಗಳಾಗಿದ್ದು, ಕ್ರಿಸ್ತನ ಮನಸ್ಸಿನ ಮನೆಗಳಾಗುತ್ತವೆ.

ಅವರು ತಮ್ಮ ಮಕ್ಕಳಿಗೆ ನೀಡುವ ಬಹುಮಾನಗಳು, ಪರಿಸ್ಥಿತಿಗನುಸಾರವಾಗಿ ಅನುಮತಿಸಬಹುದಾದ ಸೌಕರ್ಯಗಳು ಮತ್ತು ಆಶೀರ್ವಾದಗಳಾಗಿವೆ. ಇದರ ಅಂಗೀಕೃತವು ದೇವಾನುಗ್ರಹದ ನಿಯಂತ್ರಣದಲ್ಲಿ ಇರುವುದಾಗಿದೆ. ಅವರಿಗಾಗುವ ಶಿಕ್ಷೆಗಳು ಮಕ್ಕಳ ಇಚ್ಛೆಗಳಿಗನುಸಾರ ಹೆಚ್ಚು ಕಡಿಮೆ ಉಗ್ರವಾಗಿದ್ದು ಎಂದಿಗೂ ನ್ಯಾಯದ ಮಟ್ಟಕ್ಕನುಸಾರವಾಗಿಯಲ್ಲ. ಎಂದಿಗೂ ಮಕ್ಕಳ ನಡತೆಯು ಕೇಳುವ ಪೂರ್ಣ ಮಟ್ಟವನ್ನು ಅಳೆಯುವ ಪ್ರಯತ್ನ ಮಾಡುವುದಿಲ್ಲ. ಯಾಕೆಂದರೆ, ನಾವುಗಳೇ ನ್ಯಾಯದ ಅಧೀನದಲ್ಲಿ ಇರುವವರಲ್ಲ, ಕೃಪೆಯ ಅಧೀನದಲ್ಲಿರುವವರು, ಪ್ರೀತಿಯ ಅಧೀನದಲ್ಲಿರುವವರು. ಹೀಗಾಗಿ, ಇತರರೊಂದಿಗೆ ಮಾಡುವ ವ್ಯವಹಾರಗಳಲ್ಲಿ ಮಾತ್ರವಲ್ಲ, ವಿಶೇಷವಾಗಿ ನಾವು ನಮ್ಮ ಸ್ವಂತ ಮಕ್ಕಳೊಂದಿಗೆ ಮಾಡುವ ವ್ಯವಹಾರಗಳಲ್ಲಿ ನಾವು ಕರುಣೆ ತೋರಬೇಕಾಗಿದೆ. ಅವರ ಅಸಮರ್ಪಕತೆ ಮತ್ತು ದೋಷಗಳು ನಿಸ್ಸಂದೇಹವಾಗಿ ನಮ್ಮಲ್ಲಿ ನಮ್ಮ ಪೂರ್ವಜರಲ್ಲಿ ಇನ್ನೂ ಹೆಚ್ಚಾದ ಅಥವಾ ಕಡಿಮೆಯಾದ ಮಟ್ಟದಲ್ಲಿ ಕಂಡು ಬರುತ್ತವೆ. ಪ್ರೀತಿಯು ಕೆಲವೊಮ್ಮೆ ಮುತ್ತನ್ನು ನೀಡಲು ನಿರಾಕರಿಸುವ ಶಿಕ್ಷೆ ನೀಡಬಹುದು, ಕೆಲವೊಮ್ಮೆ ಮುತ್ತು ನೀಡುವುದೂ ಬಹುಮಾನವಾಗಿರಲೂಬಹುದು; ಕೆಲವೊಮ್ಮೆ ಅಧೀನಕ್ಕೊಳ ಪಡದವರನ್ನು ಕೆಲವು ಕಾಲದ ಮಟ್ಟಿಗೆ ವಿಧೇಯರ ಸಹವಾಸದಿಂದ, ಅವರಿಗೆ ನೀಡುವ ಸಂತೋಷಗಳಿಂದ ಹೊರಗೆ ಹಾಕಬಹುದು. ಪ್ರೀತಿಯ ನಿಯಮವು ಕೆಲವೊಮ್ಮೆ ರಾತ್ರಿಯ ಊಟವನ್ನು ನೀಡಲು ಅಥವಾ ರೊಟ್ಟಿ, ನೀರು ಮುಂತಾದ ಬೇರೆ ಅಗತ್ಯತೆಗಳನ್ನು ಪೂರೈಸಲು ನಿರಾಕರಿಸುವಂತಹ, ಅಥವಾ ಹೆಚ್ಚಿನ ಸೌಕರ್ಯ, ಭೋಗಗಳನ್ನು ತಡೆಹಿಡಿಯುವ ಶಿಸ್ತಿನ ಬೆತ್ತವನ್ನು ಸಹಾ ಪ್ರಯೋಗಿಸಬಹುದು ಅಥವಾ ಕೆಲವೊಮ್ಮೆ ವಿಧೇಯತೆಯನ್ನು ಬಲವಂತಗೊಳಿಸುವಂತೆ ನಿಜವಾದ ಬೆತ್ತವನ್ನೇ ಹಿಡಿಯಬಹುದು. ಈ ರೀತಿಯಲ್ಲಿ ಮನೆಯಲ್ಲಿನ ಕ್ರಮ ಮತ್ತು ಆಶೀರ್ವಾದಗಳನ್ನು ವಿಧೇಯರಾದ ಮಕ್ಕಳ ಸಲುವಾಗಿ ಮಾತ್ರವಲ್ಲ, ದಂಡಿಸಿದ ಮಕ್ಕಳಿಗಾಗಿಯೂ ಕಾಪಾಡಬಹುದು. ಈ ಮೂಲಕ ಅವರನ್ನು ಆಶೀರ್ವಾದ ಮತ್ತು ಸಂಪೂರ್ಣ ಹೊಂದಾಣಿಕೆಗೆ ತರಲು ನಿರೀಕ್ಷಿಸಲಾಗುವುದು.

ನೂತನ ಸೃಷ್ಟಿಗಳು ತಮ್ಮ ಮಕ್ಕಳಿಗೆ ಕೋಪದ ಅಥವಾ ಕಠಿಣ ಮಾತುಗಳನ್ನು ಉಪಯೋಗಿಸದಂತೆ ಎಚ್ಚರಿಸುವುದು ಅಪರೂಪವಾಗಿರುವ ಅಗತ್ಯವಾಗಿದೆ. ಯಾಕೆಂದರೆ, ಅಂಥಹ ಭಾಷೆಯು ಯಾರಿಗೂ, ಯಾವ ಸಂಧರ್ಭಗಳಲ್ಲಿಯೂ ಉಚಿತವಾದುದಲ್ಲ ಎಂಬುದು ಅವರಿಗೆ ತಿಳಿದದೆ. ಇದರ ಬದಲಾಗಿ ಅವರ ಮಾತುಗಳು ಆಕ್ಷೇಪಿಸುವಾಗಲೂ ನಯ ವಿನಯ ಗಳಿಂದ, ಪ್ರೀತಿಯಿಂದ, ಕರುಣೆಯಿಂದ ತುಂಬಿದ್ದಾಗಿರಬೇಕು. ನಾವು ಒಂದು ದುಡುಕಿನ ಪೆಟ್ಟುನೀಡುವ ಬಗ್ಗೆ ವರ್ಗಕ್ಕೆ ಅನುಚಿತವಾದುದನ್ನು ಸಂಬೋಧಿಸುತ್ತಿದ್ದೇವೆಂದು ತಿಳಿದುಕೊಳ್ಳುವ ಅಗತ್ಯವಿಲ್ಲ. ಇದು ಮಗುವಿಗೆ ದೈಹಿಕವಾಗಿ ಹಾನಿಯನ್ನುಂಟು ಮಾಡುವುದು ಅಂದರೆ ಬಹುಶಃ ಅದರ ಕೇಳುವಿಕೆಯನ್ನು ಶಾಶ್ವತವಾಗಿ ಹಾಳುಗೆಡಹುವುದಾಗಿರುವುದು ಮಾತ್ರವಲ್ಲ, ಅದರ ಮಮತೆಯನ್ನು ಗಾಯಗೊಳಿಸಿ ತಂದೆತಾಯಿಯ ಬಗ್ಗೆ ಪ್ರೀತಿಗೆ ಬದಲಾಗಿ ಭೀತಿಯುಂಟಾಗಿ

ಅದು ವಿಧೇಯತೆ ಮತ್ತು ಮನೆಯ ಕ್ರಮವನ್ನು ಬೆಳೆಸುವ ಮನೆಯ ತಳಪಾಯ ಎಂದು ಪರಿಗಣಿಸಲಾಗುವ ಅನುರಾಗವನ್ನೇ ಹಾನಿ ಗೊಳಿಸುತ್ತದೆ. ಇದಕ್ಕೂ ಹೆಚ್ಚಾಗಿ, ದುಡಿಕಿನ ಪೆಟ್ಟು ಅಥವಾ ಕಟುವಾಗಿ ಟೀಕಿಸುವುದು ತಪ್ಪಾಗುತ್ತದೆ. ಇದು ತಂದೆತಾಯಿಗಳ ಮನಸ್ಥಿತಿಯನ್ನು ಸೂಚಿಸುತ್ತದೆ. ಇದು ಪ್ರೀತಿಯ ಹಾದಿಯಲ್ಲಿ ಯಥೋಚಿತವಾದ ಮತ್ತು ನ್ಯಾಯವಾದ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಅನಾನುಕೂಲವಾಗಿರುತ್ತದೆ. ತಂದೆತಾಯಿಗಳು ತಮ್ಮ ಸ್ವಂತ ಮತ್ತು ಮಕ್ಕಳ ಶಿಸ್ತಿನ ನೆಲೆಯಲ್ಲಿ ಅದಕ್ಕೆ ಬದ್ಧರಾಗಿರುತ್ತಾರೆ ಮತ್ತು ಅವರು ಎಂದಿಗೂ ಸಾಕಷ್ಟು ಪರಿಗಣಿಸದೆ ಶಿಕ್ಷೆಯನ್ನು ನೀಡುವುದಿಲ್ಲ ಮತ್ತು ಶಾಂತತೆ ಹಾಗೂ ಸಂಯಮದಿಂದ ಕೂಡಿದವರಾಗಿ ಹೆಚ್ಚು ಕಡಿಮೆ ನ್ಯಾಯವು ಯಥೋಚಿತವಾಗಿ ಕೇಳುವ ರೀತಿಗೆ ತಕ್ಕಂತೆ ಇರುತ್ತಾರೆ. ಮಗುವಿನ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿಯಲು ಮತ್ತು ಮನೆಯಲ್ಲಿ ಕ್ರಮವನ್ನು ಕಾಪಾಡಿಕೊಳ್ಳಲು ಅವರು ಸಹಾ ಬದ್ಧರಿರುತ್ತಾರೆ. ಈ ರೀತಿಯಲ್ಲಿ ಮನೆಯ ಸಂತೋಷವು ಅಲ್ಲಿ ವಾಸಿಸುವವರೆಲ್ಲರ ಆಶೀರ್ವಾದವಾಗಿ ಮುಂದುವರೆಯುತ್ತದೆ. ಮಗುವೂ ಸಹಾ ತನ್ನ ತಂದೆತಾಯಿಗಳಿಗೆ ತನ್ನ ಮೇಲೆ ಕೋಪ, ಹಗೆಸಾಧನೆ, ಯಾವುದೇ ದ್ವೇಷವಾಗಲೀ ಇಲ್ಲದೆ, ಅನುಕಂಪ ಮತ್ತು ಪ್ರೀತಿ ಹಾಗೂ ತನಗೆ ಒಳ್ಳೆಯದಾಗಬೇಕೆಂಬ ಅಪೇಕ್ಷೆ ಇವುಗಳಲ್ಲದೆ ಮತ್ತೇನೂ ಇಲ್ಲ ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳುತ್ತದೆ.

ಈ ಲೋಕದ ತಂದೆತಾಯಿಗಳು ಅಂಥಹ ನಿಯಂತ್ರಣಕ್ಕೆ ಪ್ರಯತ್ನಿಸಬಹುದು ಆದರೆ ಅವರಲ್ಲಿ ಅದನ್ನು ಮುಂದುವರೆಸಲು ಬೇಕಾದ ಮುಖ್ಯವಾದ ಸಹಾಯದ ಕೊರತೆ ಉಂಟು. ಯಾಕೆಂದರೆ ಅವರು ತಮ್ಮನ್ನು ಸಂಪೂರ್ಣವಾಗಿ ಪರಲೋಕದಲ್ಲಿರುವ ನಮ್ಮ ತಂದೆಗೆ, ಆತನ ನಿಯಂತ್ರಣ ಮತ್ತು ವಾಕ್ಯಗಳಿಗೆ ಒಪ್ಪಿಸಿಕೊಟ್ಟಿರುವುದಿಲ್ಲ. ನೂತನ ಸೃಷ್ಟಿಗಳು ದೈವಿಕ ನಿಯಮಗಳಿಗೆ ಮತ್ತು ಅವುಗಳನ್ನು ನಿಭಾಯಿಸುವ ಜವಾಬ್ದಾರಿಗಳಿಗೆ ಬದ್ಧರಾಗಿರುವಂತೆ ಇವರು ಬದ್ಧರಾಗಿರುವುದಿಲ್ಲ ಮತ್ತು ಅವರ ಸ್ವೀಕೃತಿ ಮತ್ತು ಅವುಗಳಿಗೆ ವಿಧೇಯರಾಗುವ ಪ್ರಯತ್ನಗಳು ಇವರಲ್ಲಿರುವುದಿಲ್ಲ. ಕ್ರೈಸ್ತ ತಂದೆತಾಯಿಗಳು – ಅದನ್ನು ಉಪಯೋಗಿಸುವವರಾದರೆ – ತಮ್ಮ ಮಕ್ಕಳೊಡನೆ ವ್ಯವಹರಿಸುವಂತೆ ಅಪಾರವಾದ ಸಾಧನ ಮಾರ್ಗಗಳೂ ಅವಕಾಶಗಳೂ ಅವೆ. ತಂದೆತಾಯಿಗಳು, ತಮ್ಮ ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ಬೆಳೆಸುವ ಬಗ್ಗೆ ತಮ್ಮಲ್ಲಿರುವ ದೈವಿಕ ಅನುಮೋದನೆಗಳಿಂದ ತಮ್ಮ ಮಕ್ಕಳಿಗೆ ದೇವರ ವಾಕ್ಯದಿಂದ ಓದಿ ಹೇಳಬೇಕು. ಇದಕ್ಕೂ ಹೆಚ್ಚಾಗಿ ಇವುಗಳ ಅಗತ್ಯತೆಗಳ ಬಗ್ಗೆಯೂ ಅವರು ಸೂಚಿಸಬೇಕು– ಯಾಕೆಂದರೆ, ನಾವೆಲ್ಲರೂ ಬಿದ್ದುಹೋದವರೂ, ದೇವರ ಮಟ್ಟಕ್ಕೆ ಬರಲು ಸಾಧ್ಯವಿಲ್ಲದವರೂ ಆಗಿದ್ದೇವೆ. ನಾವು ಜನಿಸಿರುವ ಕೆಡುಕನ ಪ್ರವೃತ್ತಿಗಳನ್ನು ಎದುರಿಸಲು ಈ ರೀತಿಯ ತಿದ್ದುಪಾಟುಗಳು ಬೇಕಾಗುತ್ತವೆ. ಮಕ್ಕಳ ಮನಸ್ಸುಗಳು ತಪ್ಪುಒಪ್ಪುಗಳನ್ನು, ತಪ್ಪುಗಳಿಗೆ ವಿಧಿಸುವ ಶಿಕ್ಷೆಯ, ಹಾಗೂ ಒಳ್ಳೆಯ ಕೆಲಸಗಳಿಗೆ ದೊರೆಯುವ ಬಹುಮಾನಗಳ ಉಚಿತತೆಯ ತತ್ವವನ್ನು ಮೆಚ್ಚಿಕೊಳ್ಳುವುದಿಲ್ಲ ಎಂದು ಭಾವಿಸುವುದು ದೊಡ್ಡ ತಪ್ಪಾಗುತ್ತದೆ.

ಅನೇಕ ತಂದೆತಾಯಿಗಳು ತಮ್ಮ ಪ್ರಾರಂಭದ ಎಷ್ಟನೇ ವಯಸ್ಸಿನಲ್ಲಿ ನೀತಿಯ ತತ್ವಗಳನ್ನು ಮೆಚ್ಚಿಕೊಳ್ಳಲು ಪ್ರಾರಂಭಿಸಿದ್ದೆವು – ಅಕ್ಷೇಪಿಸದೆ ನಿರ್ಲಕ್ಷಿಸಿರುವ, ತಿದ್ದುವ ಮತ್ತು ಅವಶ್ಯಕತೆಗೆ ತಕ್ಕಂತೆ ದಂಡಿಸುವ ತಮ್ಮ ತಂದೆತಾಯಿಗಳ ಪಾಲನೆಯನ್ನು ಮೆಚ್ಚಿಕೊಳ್ಳಲು ಪರೀಕ್ಷಿಸುವಂತೆ ತಮ್ಮ ಜೀವಿತವನ್ನು ತಿರುಗಿನೋಡಲು ಮರೆತುಹೋಗುತ್ತಾರೆ. ನಾವು ಮಕ್ಕಳಾಗಿದ್ದಾಗ ನಮ್ಮ ನ್ಯಾಯದ ತಿಳುವಳಿಕೆಯು ಎಷ್ಟೊಂದು ತೀವ್ರವಾಗಿತ್ತು, ನಾವು ನಮ್ಮ ತಂದೆತಾಯಿಗಳ ಶಿಸ್ತನ್ನು ಅವುಗಳು ನಮ್ಮ ಗುಣಲಕ್ಷಣಗಳನ್ನು ಬೆಳೆಸುವ ಉದ್ದೇಶಹೊಂದಿವೆ ಎಂದು ಯಾವರೀತಿ ಮಾನಸಿಕವಾಗಿ ಒಪ್ಪಿಕೊಂಡಿದ್ದೆವೋ ಮತ್ತು ಅವುಗಳಲ್ಲಿ ನಮಗೆ ನ್ಯಾಯದ ತತ್ವ ಕಂಡು ಬಾರದೇ ಇದ್ದು ನಮ್ಮನ್ನು ನಿಂದಿಸಿದಾಗ, ನಾವು ಮಾಡದೇ ಇದ್ದ ತಪ್ಪುಗಳಿಗಾಗಿ ನಮ್ಮನ್ನು ದಂಡಿಸಿದಾಗ, ಅಥವಾ ನಾವು ಮಾಡಿದ ತಪ್ಪಿಗೆ ಮೀರಿ ನಮ್ಮನ್ನು ಶಿಕ್ಷಿಸಿದಾಗ ನಾವುಗಳು ಯಾವ ರೀತಿಯಲ್ಲಿ ಅಸಮಾಧಾನಗೊಳ್ಳುತ್ತಿದ್ದೆವು ಎಂಬುದನ್ನು ನಮ್ಮ ನೆನಪಿಗೆ ತಂದುಕೊಳ್ಳೋಣ. ಇದು ಒಳ್ಳೆಯ ಮತ್ತು ಕೆಟ್ಟವುಗಳ ಬಗ್ಗೆ, ಸತ್ಯ ಮತ್ತು ಅಸತ್ಯಗಳ ಬಗ್ಗೆ, ನ್ಯಾಯ ಮತ್ತು ಅನ್ಯಾಯಗಳ ಬಗ್ಗೆ ಒಂದು ಮಗುವನ್ನು ನಿಯಂತ್ರಿಸುವ ಖಾತರಿಯಾದ ಉತ್ತಮ ಮಾರ್ಗವು ಮಾತ್ರವಲ್ಲ, ಇದು ತಂದೆತಾಯಿಗಳ ಪ್ರಭಾವಕ್ಕೆ ಪರಿಣಾಮಕಾರಿಯಾಗಬಹುದಾದ ಮಗುವಿನ ಗುಣಲಕ್ಷಣಗಳ ತರಬೇತಿಯೂ ಆಗಿರುತ್ತದೆ. ಮಕ್ಕಳ ವಿವೇಚನಾಶಕ್ತಿ ಮತ್ತು ನಿರ್ಣಯಗಳು ರೂಪಗೊಳ್ಳುವ ಸ್ಥಿತಿಯಲ್ಲಿರುವಾಗ ಇದು ಅವರ ಗುಣಲಕ್ಷಣಗಳನ್ನು ಕಟ್ಟಿಕೊಳ್ಳುವ ರೀತಿಯಂತಿದೆ ಮತ್ತು ಅವರು ತಮ್ಮ ತಂದೆತಾಯಿಗಳು ತಮಗೆ ನಿಯಮಗಳನ್ನು ನೀಡುವ ಏಕೈಕ ಮೂಲವೆಂದು ಗ್ರಹಿಸಿಕೊಳ್ಳುತ್ತಾರೆ. ಗುಣಲಕ್ಷಣಗಳನ್ನು ಕಟ್ಟುವ ಈ ಕಾರ್ಯವನ್ನು ಶಿಶುವಿನಾವಸ್ಥೆಯಲ್ಲೇ ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಹೆಚ್ಚಾಗಿ ಈ ಕಾರ್ಯವು ಹೆಚ್ಚು ಕಷ್ಟಕರವಾಗುವುದರೊಂದಿಗೆ ತಂದೆತಾಯಿಗಳಿಗೂ, ಮಕ್ಕಳಿಗೂ, ನೆರೆಹೊರೆಯುವರು ಮತ್ತು ಸ್ನೇಹಿತರುಗಳಿಗೂ ಅನಾನುಕೂಲತೆಯನ್ನು ತಾತ್ಕಾಲಿಕದಲ್ಲಿ ಹೆಚ್ಚಿಸುತ್ತದೆ.

ಆಗ, ಮಕ್ಕಳ ತರಬೇತಿಯು ಕೇವಲ ಅದರ ಬಾಹ್ಯ ನಡತೆಗಳಾದ ವಿನಯಶೀಲತೆ, ಶುಚಿತ್ವ, ವಿಧೇಯತೆ ಮುಂತಾದವುಗಳ ಬಗ್ಗೆ ಬೋಧಿಸುವುದು ಮಾತ್ರವಲ್ಲ, ಆದರೆ ಅದಕ್ಕೂ ಮುಂದುವರೆದು ಅವರ ಹೃದಯಗಳಲ್ಲಿ ನೀತಿ ನ್ಯಾಯಗಳನ್ನು ಸ್ಥಾಪಿಸುವುದು–ಕರ್ತನ ಮನಸ್ಸು ಹಿರಿ ಕಿರಿಯರೆಲ್ಲರ ಜೀವಿತದ ಏಕೈಕ ಮಟ್ಟವೆಂದು ತಿಳಿದು ಅದನ್ನು ಸರಿಯಾಗಿ ಗ್ರಹಿಸಿಕೊಳ್ಳುವಂತೆ ಮಾಡುವುದು ನಿಜವಾಗಿಯೂ ಪ್ರಾಮುಖ್ಯವಾಗಿದೆ ಎಂದು ಗಮನಿಸುವುದು ಬಹಳ ಅಗತ್ಯ. ಸುವರ್ಣ ನಿಯಮಗಳಾದಂಥಹ ಪ್ರೀತಿ, ಉದಾರತೆ, ವಿನಯ, ತಾಳ್ಮೆ, ದಯಾಶೀಲತೆ, ಸಹಿಷ್ಣುತೆಯ ನಿಯಮಗಳನ್ನು ಕುಟುಂಬದ ಇತರ ಸದಸ್ಯರೊಂದಿಗಿನ ಮತ್ತು ಸಹಪಾಠಿಗಳು, ಸ್ನೇಹಿತರು ಮುಂತಾದವರೊಂದಿಗಿನ ಸಂಬಂಧಕ್ಕೆ ನಾಟಿಸಬೇಕಾಗುತ್ತದೆ. ಸ್ವಾರ್ಥಿಯಾಗುವಂತೆ ಕಲಿತ ಮಗುವು ಅಥವಾ ಅದರ ಸ್ವಾಭಾವಿಕ ಸ್ವಾರ್ಥತೆಯುನ್ನು ಸಹಾನುಭೂತಿಪೂರ್ವಕವಾಗಿ ಅದರ ಗಮನಕ್ಕೆ ತಾರದೆ (ಬೇರೆಯವರ ಮುಂದೆ ಅಲ್ಲ) ಮತ್ತು ಪ್ರೀತಿಪೂರ್ವಕವಾಗಿ

ಅದನ್ನು ಗದರಿಸದೆ ಮತ್ತು ತಿದ್ದದೆ ಇರುವ ಮಗುವು ಒಂದು ಮಹತ್ತರವಾದ ಶಿಕ್ಷಣವನ್ನು ಮತ್ತು ತನಗೆ ಸಿಕ್ಕ ಸದಾವಕಾಶವನ್ನು ಕಳಕೊಳ್ಳುತ್ತದೆ.

ತಮ್ಮ ಮಕ್ಕಳ ಮನಸ್ಸು ಮತ್ತು ನಿರ್ಣಯಗಳ ಬಗ್ಗೆ, ಹಾಗೂ ಬಾಹ್ಯ ನಡತೆಯ ಬಗ್ಗೆ ಸರಿಯಾದ ತಿದ್ದುಪಡಿ ಮತ್ತು ಸೂಚನೆಗಳನ್ನು ನೀಡುವಲ್ಲಿ ನಿರ್ಲಕ್ಷ್ಯ ತೋರುವ ತಂದೆತಾಯಿಗಳು ಮಕ್ಕಳ ಬಗ್ಗೆ ತಮಗೆ ದೊರೆತ ಸದವಕಾಶಗಳನ್ನು ಕಳೆದುಕೊಳ್ಳುವುದು ಮಾತ್ರವಲ್ಲ, ಆತ್ಮೀಕ ಕೃಪೆಯು ಬೆಳೆಯಬೇಕಾದ ಅವರ ಹೃದಯವೆಂಬ ತೋಟದಲ್ಲಿ ಕಳೆ ಬೆಳೆಯುವಂತೆ ಮಾಡುವವರಾಗಿದ್ದಾರೆ. ಈ ರೀತಿಯಲ್ಲಿ ಅವರು ಮುಂದಿನ ವರ್ಷಗಳಲ್ಲಿ ತಮ್ಮ ಮಕ್ಕಳೊಡನೆ ವ್ಯವಹರಿಸುವಲ್ಲಿ ಹೆಚ್ಚುಕಡಿಮೆ ಅನೇಕ ತೊಂದರೆಗಳನ್ನು ತಮಗೂ ಬರಮಾಡಿಕೊಳ್ಳುವವರಾಗಿದ್ದಾರೆ. ತಮ್ಮ ಮಕ್ಕಳ ಹಠಮಾರಿತನ, ಸ್ವೇಚ್ಛಾ ವರ್ತನೆ ಮತ್ತು ಸ್ವಾರ್ಥತೆ ಹಾಗೂ ಲಂಪಟತನದಿಂದ ಕೂಡಿದ ಮೋಜು ಇವುಗಳ ಬಗ್ಗೆ ಉತ್ತಮ ಧ್ಯೇಯವುಳ್ಳ ತಂದೆತಾಯಿಗಳು ತಾವು ಮಾಡಬೇಕಾದ ಕರ್ತವ್ಯಗಳನ್ನು ತಮ್ಮ ಮಕ್ಕಳ ಬಾಲ್ಯ ಪ್ರಾಯದಲ್ಲಿಯೇ ಸರಿಯಾಗಿ ಪಾಲಿಸಿದ್ದರೆ ತಮ್ಮ ಮನಸ್ಸಿನ ನೋವು ಮತ್ತು ಕಣ್ಣೀರುಗಳನ್ನು ತಡೆಗಟ್ಟಬಹುದಿತ್ತು. ಇದಕ್ಕೂ ಹೆಚ್ಚಾಗಿ, ಅಂತಹ ತಂದೆತಾಯಿಗಳು ತಮ್ಮ ಅನುಭವದಲ್ಲಿ ಹೆಚ್ಚಾದ ಆಶೀರ್ವಾದಗಳನ್ನು ಕಳಕೊಳ್ಳುವವರಾಗಿದ್ದಾರೆ. ನಿಸ್ವಾರ್ಥತೆ. ಪ್ರೀತಿ, ವಿಧೇಯತೆ, ದೇವರಲ್ಲಿ ಭಯಭಕ್ತಿ, ಸಹಜೀವಿಗಳಿಗೆ ಸಹಾಯ ಮಾಡುವಿಕೆ, ಕೃಪೆಯಲ್ಲಿ ಸ್ವತಃ ಬೆಳೆಯುವುದು, ಜ್ಞಾನ ಮತ್ತು ಪ್ರೀತಿಯಲ್ಲಿ ಬೆಳೆಯುವಿಕೆ ಮುಂತಾದ ತತ್ವಗಳಲ್ಲಿ ತಮ್ಮ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ತರಬೇತುಗೊಳಿಸುವ ತಂದೆತಾಯಿಗಳು ಇವುಗಳನ್ನು ಕಲಿಸಲು ಶ್ರಮಿಸುವಾಗ ತಾವೂ ಸಹಾ ಕೃಪೆಯಲ್ಲಿ, ಜ್ಞಾನದಲ್ಲಿ ಮತ್ತು ಪ್ರೀತಿಯಲ್ಲಿ ಬೆಳೆಯುವ ಅಮೂಲ್ಯವಾದ ಅನುಭವಗಳನ್ನು ಪಡೆದುಕೊಳ್ಳುತ್ತಾರೆ ಎಂಬುದು ನಿಸ್ಸಂದೇಹವಾದ ಸತ್ಯವಾಗಿದೆ. ಅವರೂ ಕಲಿಯುತ್ತಾರೆ, ಅವರ ಮಕ್ಕಳು ಸಹಾ ಅವರನ್ನು ತಮ್ಮ ದಿನನಿತ್ಯದ ನಡತೆಯ ಹಾಗೂ ದೇವರೊಡನೆ ಮತ್ತು ಸಹಚರರೊಡನೆ ಇರುವ ತಮ್ಮ ಸಂಬಂಧದಲ್ಲಿಯೂ, ಇತರರಲ್ಲಿ ತಾವು ಬಿತ್ತಬಯಸುವ ತತ್ವಗಳ ಮಾದರಿಯನ್ನಾಗಿಯೂ ಕಾಣುತ್ತಾರೆ. ಇದು ಅವರನ್ನು ತಮ್ಮ ಮಾತುಗಳ ಬಗ್ಗೆ ಎಚ್ಚರಿಕೆ ವಹಿಸುವಂತೆ ಮಾಡುತ್ತದೆ. ಮತ್ತು ಜೀವನದ ಸಾರ್ವಜನಿಕ ಮತ್ತು ಖಾಸಗಿಯಾದ ಎಲ್ಲಾ ಸಣ್ಣಪುಟ್ಟ ಸಂಗತಿಗಳಲ್ಲಿಯೂ ಅಂತಹ ಜಾಗರೂಕತೆ, ಮತ್ತು ಸಾವಧಾನವು ಅಂತಹ ತಂದೆತಾಯಿಗಳಲ್ಲಿ ಹೆಚ್ಚುಹೆಚ್ಚಾದ ದೈವಕೃಪೆಯಲ್ಲಿ ಮೂಡುವ ಭರವಸವು ಕಂಡುಬರುತ್ತದೆ ಮತ್ತು ಅವರು ಕರ್ತನಿಗೆ ಹೆಚ್ಚು ಅಂಗೀಕಾರವಾಗುತ್ತಾರೆ, ಮಾತ್ರವಲ್ಲದೆ ಆತನ ರಾಜ್ಯಕ್ಕೆ ತಮ್ಮನ್ನು ಸಿದ್ಧಮಾಡಿಕೊಂಡು ಸಮರ್ಪಕರಾಗುವಂತೆ ಮಾಡುತ್ತದೆ.

ಮನೆಯ ವಾತಾವರಣವು ಎಷ್ಟೇ ಬಡತನವಾಗಿರಲಿ, ಅದು ಶುದ್ಧತ್ವದಿಂದ ಕೂಡಿದ್ದಾಗಿರಬೇಕು. ಗಾಳಿಯು ಕುಲಷಿತವಾಗಿರುವಾಗ ಭೌತಿಕ ಶುದ್ಧತೆಯು ಹೇಗೆ ಅಸಾಧ್ಯವೋ ಅದರಂತೆ ನಮ್ಮ ಅಲೋಚನೆಗಳಲ್ಲಿ, ಮಾತುಗಳಲ್ಲಿ ಮತ್ತು ಕಾರ್ಯದಲ್ಲಿ ಪೂರ್ಣವಾದ ಶುದ್ಧತೆಯು ಪ್ರಸ್ತುತ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವೆಂಬುದು ನಮಗೆ ತಿಳಿದದೆ. ಆದರೆ ಪ್ರತಿಯೊಂದು ಕ್ರೈಸ್ತ ಮನೆಯೂ ಸಾಧ್ಯವಾದಷ್ಟು ಮಟ್ಟಿಗೆ ಶುದ್ಧವಾಗಿರತಕ್ಕದ್ದು. ಅಸಮರ್ಪಕವಾದ ಮಣ್ಣಿನ ಪಾತ್ರೆಗಳನ್ನು ಮಾಡಬಹುದಾದ ಹೊರಗಿನ ಹೊಲಸಿನಿಂದ, ಮತ್ತು ಪರಿಸ್ಥಿತಿಯು ಅನುಮತಿಸುವಂತೆ ಕೊಳೆಯಿಂದ ಮತ್ತು ನೀತಿ ಭ್ರಷ್ಟತೆಯಿಂದ, ಮೈಲಿಗೆಯಿಂದ ಮುಕ್ತವಾಗಿರಬೇಕು. ಪ್ರತಿಯೊಂದು ಮಗುವೂ ತನ್ನ ಮನೆಯು ಅದು ಎಷ್ಟೇ ದೀನತೆಯುಳ್ಳದ್ದಾಗಿರಲಿ, ಎಷ್ಟೇ ಅಲ್ಪವಾಗಿ ಸಜ್ಜುಗೊಳಿಸಿದ್ದಾಗಿರಲಿ ಅದು ದೇವರಮನೆ, ಪವಿತ್ರಸ್ಥಳ ಎಂಬಂತೆ ಅದರ ಕಡೆಗೆ ಹಿಂತಿರುಗಿ ನೋಡುವಂತಾಗಬೇಕು. ಆತನು ತನ್ನ ಮನೆಯ ಕುಟುಂಬ ಪ್ರಾರ್ಥನೆಯ ವೇದಿಯಲ್ಲಿ ಕೇಳಿಬಂದ ಧ್ವನಿಯನ್ನು, ವಿವಿಧ ಸಂಧರ್ಭಗಳಲ್ಲಿ ಆಲಿಸಿದ ತನ್ನ ತಂದೆತಾಯಿಗಳ ಕರುಣೆಯುಳ್ಳ ಮಾತುಗಳನ್ನು, ಶಾಂತಿಯ ಸಾಮಾನ್ಯ ಚೈತನ್ಯವನ್ನು, ದೇವರ ಅನುಗ್ರಹಕ್ಕೆ ಒಪ್ಪಿಸಿಕೊಟ್ಟ ತೃಪ್ತಿಯಿಂದ ದೊರೆತ ವಿಶ್ರಾಂತಿಯನ್ನು ತನ್ನ ನೆನಪಿಗೆ ತಂದುಕೊಳ್ಳಬೇಕು. ಆತನು ತನ್ನ ಮನೆಯಲ್ಲಿ ವ್ಯಾಪಿಸಿದ ಮತ್ತು ನಮ್ರತೆಯಲ್ಲಿ, ಸಭ್ಯತೆಯಲ್ಲಿ, ಕರುಣೆಯಲ್ಲಿ ಮತ್ತು ಸಹಾಯಮಾಡುವಿಕೆಯಲ್ಲಿ ಪ್ರಕಟವಾಗುವಂತೆ ಮನೆಯ ಪ್ರತಿಯೊಬ್ಬರೊಡನೆ ಸಂಬಂಧಿಸಿದ ಪ್ರೀತಿಯ ಮಧುರವಾದ ಸುವಾಸನೆಯನ್ನು ಸ್ವಾಧಿಸಬೇಕು.

ಅಂತಹ ಪ್ರೀತಿಯ ವಾತಾವರಣದಲ್ಲಿ ಪೋಷಿಸಿ ಬೆಳೆಸಿದ ಮಕ್ಕಳು ಕರ್ತನನ್ನು ಸಂತೋಷಗೊಳಿಸುವ ಇಚ್ಛೆಯುಳ್ಳವರಾಗಿದ್ದು ತಮ್ಮ ಪ್ರಜ್ಞೆಯ ಪ್ರಾರಂಭದ ಕ್ಷಣದಿಂದಲೇ ಆತನಿಗೆ ವಿಧೇಯರಾಗಿರುತ್ತಾರೆ. ಅವರು ಹತ್ತು ಅಥವಾ ಹನ್ನೆರಡು ವರ್ಷ ವಯಸ್ಸಿನವರಾದಾಗ ಅವರು ತಮ್ಮನ್ನು ಕರ್ತನಿಗೆ ಸಂಪೂರ್ಣವಾಗಿ ಪ್ರತಿಷ್ಠಿಸಿಕೊಳ್ಳುವ ಔಚಿತ್ಯತೆಯನ್ನು ಪರಿಗಣಿಸುವಂತೆ ಅವರನ್ನು ಪ್ರೋತ್ಸಾಹಿಸಬೇಕು. ಮತ್ತು ಅಪ್ರಾಪ್ತತೆಯ ಕಾಲದಲ್ಲಿ ಅವರು ತೀರ್ಪಿಗಾಗಿ ತಂದೆತಾಯಿಗಳ ಮೂಲಕವೇ ಕರ್ತನ ಮುಂದೆ ನಿಲ್ಲಬೇಕಾಗುವುದು ಆದರೆ ಇದು ಅವರ ಮನಸ್ಸಿನ ಪಕ್ವತೆಯ ಪ್ರಮಾಣಕ್ಕನುಸಾರವಾಗಿದ್ದು ಕರ್ತನು ವ್ಯಕ್ತಿಗತ ಪ್ರತಿಷ್ಠೆಯನ್ನು ನಿರೀಕ್ಷಿಸುತ್ತಾನೆ ಎಂಬುದನ್ನು ಅವರಿಗೆ ನೆನಪಿಸಬೇಕು. ಆ ರೀತಿಯಲ್ಲಿ ಬೆಳೆದ, ತರಬೇತುಗೊಳಿಸಿದ ಮಕ್ಕಳು ಕರ್ತನಿಗೆ ಪ್ರತಿಷ್ಠಿಸಿಕೊಳ್ಳಲು ನಿರಾಕರಿಸಿದಲ್ಲಿ ಇಲ್ಲವೆ ನಿರ್ಲಕ್ಷಿಸಿದಲ್ಲಿ, ಆ ಪಕ್ವತೆಯ ವರ್ಷಗಳು ತಲುಪಿದರೂ ಮನೆಯ ಪ್ರಭಾವವು ಇನ್ನೂ ಮುಂದುವರೆಯುತ್ತಿದೆ, ಕರ್ತನೊಡನೆ ಯಾವುದೇ ಒಡಂಬಡಿಕೆಯನ್ನು ಮಾಡಿಕೊಂಡಿಲ್ಲ ಎಂದು ನಾವು ಖಚಿತಗೊಳ್ಳಬಹುದು. ಅಂಥವರು ಕರ್ತನ ಕೃಪಾ ಸಿಂಹಾಸನದ ಮುಂದೆ ಹೋಗಲು ಹಿಂದೇಟುಹಾಕುತ್ತಾರೆ–ಆತನು ತನ್ನವರಿಗೆ ವಾಗ್ದಾನಮಾಡಿದ ಆಶೀರ್ವಾದಗಳನ್ನು ಪಡಕೊಳ್ಳಲು ಸಹಾ ಹಿಂದೇಟುಹಾಕುತ್ತಾರೆ. ಯಾಕೆಂದರೆ ಅವರು ಆತನವರಾಗಲು ತಿರಸ್ಕರಿಸಿದ್ದಾರೆ. ಆದರೆ ಅಂತವರಲ್ಲಿಯೂ ಕೃಪಾಸಿಂಹಾಸನವನ್ನು ಸಮೀಪಿಸಿದ ಕಾಲಗಳ ಅಮೂಲ್ಯವಾದ ಮತ್ತು ಬಾಲ್ಯಪ್ರಾಯದ ಮನೆಯಮೇಲೆ ಮತ್ತು ತಮ್ಮ ಮೇಲೆ ದೇವರ ಪರಿಪಾಲನೆಯ ನೆನಪುಗಳು ಇನ್ನೂ ಅಂಟಿಕೊಂಡಿರುತ್ತವೆ ಮತ್ತು ದೇವರ ರಕ್ಷಣೆಯನ್ನು ನಿರಂತರವಾಗಿ ಹೊಂದಿಕೊಳ್ಳುವ ಮತ್ತು ಆತನನ್ನು "**ಅಪ್ಪಾ ತಂದೆಯೇ**' ಎಂದು ಕರೆಯುವ ಬಯಕೆ ಮತ್ತು ಆತನ

ಸಂಬಂಧದ ಪ್ರತ್ಯಕ್ಷೀಕರಣ ಇವುಗಳು ಅವರಲ್ಲಿ ಇದ್ದೇ ಇರುತ್ತದೆ. ಅಂಥವರು ತಂದೆತಾಯಿಗಳಾದಾಗ, ತಮ್ಮನ್ನು ತರಬೇತಿಗೊಳಿಸಿದಂತೆಯೇ ತಮ್ಮ ಮಕ್ಕಳನ್ನೂ ಸಹಾ ತರಬೇತು ಗೊಳಿಸಬೇಕೆಂಬ ಅಂತಃಸ್ಫೂರ್ತಿ ಅವರಲ್ಲಿ ಇರುತ್ತದೆ. ಇವೆಲ್ಲಾ ಪ್ರಭಾವಗಳು ಹೆಚ್ಚುಹೆಚ್ಚಾಗಿ ಅವರ ಹೃದಯದ ಸಮೀಪಕ್ಕೆ ಎಳೆಯಲ್ಪಡುತ್ತವೆ, ಇದರಿಂದ ಉಂಟಾಗುವ ಬಲವಾದ ಸಾಧ್ಯತೆ ಏನೆಂದರೆ ಕನಿಷ್ಟ ಆ ಸಮಯಕ್ಕೆ ಅವರು ಪ್ರತಿಷ್ಠಿಸಿಕೊಳ್ಳುತ್ತಾರೆ. ಏನೇ ಸಂಭವಿಸಲಿ, ದೈವಿಕ ಮನೆಯ ಪ್ರಭಾವವು ಅವರ ಸಂಗಡವಿದ್ದು ಅವರು ಪತನಗೊಳ್ಳಬಹುದಾಗಿದ್ದ ಹೆಚ್ಚಿನ ವೈಪರೀತ್ಯಗಳಿಂದ ಅವರನ್ನು ಸಂರಕ್ಷಿಸುವ ಪವಿತ್ರವಾದ ರಕ್ಷಣೆಯು ಅವರಿಗೆ ದೊರೆಯುತ್ತದೆ.

ಮಧುರವಾದ ಪ್ರೀತಿಯ, ಕರುಣೆಯ, ತಾಳ್ಮೆ ಮತ್ತು ಸಭ್ಯತೆಗಳ ಸುವಾಸನೆಯುಳ್ಳ ಇಂತಹ ಮನೆಗೆ ಭಿನ್ನವಾಗಿರುವ ದೇವರ ಆತ್ಮನ ಪ್ರಕಟನೆ ಇಲ್ಲದ ಮನೆಯಲ್ಲಿ – ಸ್ವಾರ್ಥತೆಯೇ ಆ ಮನೆಯ ನಿಯಮವಾಗಿದ್ದು ಆ ಮನೆಯ ಮಕ್ಕಳು ತಂದೆತಾಯಿಗಳ ಜಗಳವನ್ನು, ಅವರು ಯಾವ ರೀತಿಯಲ್ಲಿ ಇತರರ ಲೆಕ್ಕದಲ್ಲಿ ತಮ್ಮದೇ ನಡೆಯಬೇಕೆಂದು ಬಯಸುವವರೂ ಮತ್ತು ಪರಸ್ಪರರು ಯಾವ ರೀತಿಯಲ್ಲಿ ಬೈದಾಡುಕೊಳ್ಳುತ್ತಾರೆ, ದೂರಿಕೊಳ್ಳುತ್ತಾರೆ, ಒಬ್ಬರ ತಪ್ಪನ್ನು ಮತ್ತೊಬ್ಬರು ಹುಡುಕುತ್ತಾರೆ, ಕೋಪದ ಮಾತುಗಳನ್ನು, ಕಠೋರವಾದ ಪದಗಳನ್ನು ಉಪಯೋಗಿಸುವ ಮುಂತಾದವುಗಳನ್ನೆಲ್ಲಾ ಗಮನಿಸುತ್ತಿರುತ್ತಾರೆ. ಇದು ಮಕ್ಕಳಲ್ಲಿ ಪ್ರಭಾವ ಬೀರಿ ಒಂದು ವಿಧವಾಗಿ ಸಂಕ್ರಾಮಿಕವಾಗಿ ಬಿಡುತ್ತದೆ ಮತ್ತು ಕಾಲಕ್ರಮದಲ್ಲಿ ಅವರೂ ಸಹಾ ಸಣ್ಣ ಪುಟ್ಟ ಸಂಗತಿಗಳಿಗಾಗಿ ಕಾದಾಡುತ್ತಾರೆ. ಪರಸ್ಪರ ಕೋಪದ ಮಾತುಗಳನ್ನು ಆಡುತ್ತಾರೆ. ಈ ಮೂಲಕ ಅವರು ಮನೆಯವರನ್ನು ನಿರಂತರವಾಗಿ ತುಮುಲಕ್ಕೊಳಪಡಿಸುತ್ತಾರೆ. ಮನೆಯಲ್ಲಿ ಸ್ವಾರ್ಥತೆಯು ನಿರಂತರವಾದ ಅಭ್ಯಾಸವಾಗಿ ಮಕ್ಕಳ ಮನಸ್ಸು ಮತ್ತು ನಡತೆಯ ಮೇಲೆ ಪರಿಣಮಿಸಿ ವಿಕಸಿಸುತ್ತದೆ.

ತಂದೆತಾಯಿಗಳು ಕೋಪದ ಧ್ವನಿಯಲ್ಲಿ ತಮ್ಮ ಮಕ್ಕಳನ್ನು "ಚಿಕ್ಕ ಪುಂಡ' ಎಂದು ಬೈಯ್ಯುವುದಾದರೆ ತಮ್ಮ ನಡತೆಗೆ ಕಳಂಕ ತರುವ ಅಂತಹ ವಿಚಾರಗಳಿಂದ ಮಕ್ಕಳ ಭಾವನೆಗಳಿಗೆ ಧಕ್ಕೆಯುಂಟಾಗುತ್ತದೆ ಮತ್ತು ಅವರು ಕಠಿಣವಾಗುತ್ತಾರೆ. ಕ್ರಮೇಣವಾಗಿ "ಚಿಕ್ಕ ಪುಂಡ"ನಾಗುವುದರ ಪ್ರಭಾವವನ್ನು ಕಲಿತುಕೊಳ್ಳುತ್ತಾರೆ. ತಾಯಿಯ " ನಾನು ನಿನ್ನನ್ನು ಅಂಗುಲ ಅಂಗುಲವಾಗಿ ಚಚ್ಚುತ್ತೇನೆ" ಅಥವಾ "ನಾನು ನಿನ್ನ ಸೊಂಟ ಮುರಿಯುತ್ತೇನೆ" ಎಂಬಿತ್ಯಾದಿ ಕೋಪದ ಮತ್ತು ತಾಳ್ಮೆಯಿಲ್ಲದ ಬೈಗುಳವನ್ನು ಕೇಳಿಸಿಕೊಳ್ಳುವಾಗ ಅಂತಹ ಮಾತುಗಳು ನಿಸ್ಸಂದೇಹವಾಗಿ ಮಕ್ಕಳ ಮನಸ್ಸಿನಲ್ಲಿ ಒಂದು ರೀತಿಯಲ್ಲಿ ಭಯವನ್ನುಂಟು ಮಾಡುತ್ತವೆ. ಆದರೆ, ಇಂತಹ ಬೆದರಿಕೆಗಳು ನಿಷ್ಪ್ರಯೋಜಕವಾದುವುಗಳು ಮತ್ತು ಇವುಗಳಿಗೆ ಹೆದರಬೇಕಾದ್ದಿಲ್ಲ ಎಂದು ಅರಿಯಲು ಅವುಗಳಿಗೆ ಹೆಚ್ಚು ಸಮಯ ಹಿಡಿಯುವುದಿಲ್ಲ; ಕ್ರಮೇಣವಾಗಿ ರಾಜ್ಯದ ನಾಗರೀಕ ಕಾನೂನುಗಳು ತಂದೆತಾಯಿಗಳಿಗೆ ಈ ರೀತಿಯ ಹಿಂಸೆ ನೀಡಲು ಅನುಮತಿಸುವುದಿಲ್ಲ ಎಂಬ ಸತ್ಯವನ್ನು ಅವರು ತಿಳಿದುಕೊಳ್ಳುವರಾದರೂ, ತಂದೆತಾಯಿಗಳು ನಮಗೆ ಕೇಡುಂಟು ಮಾಡುವ ಮನಸ್ಸುಳ್ಳವರಾಗಿದ್ದಾರೆ, ಆದರೆ ಹಾಗೆ ಮಾಡುವ ಸ್ವಾತಂತ್ರ್ಯ ಅವರಿಗಿಲ್ಲ ಎಂದು ಮಕ್ಕಳು ತಮ್ಮ ಮನಸ್ಸಿನಲ್ಲಿ ನಿರ್ಧರಿಸಿಕೊಳ್ಳುತ್ತಾರೆ. ಈ ರೀತಿಯಲ್ಲಿ ಮೂಲತಃ ಅವರ ಮನಸ್ಸಿನಲ್ಲಿದ್ದ ಪ್ರೀತಿಯ ಪ್ರವೃತ್ತಿ ದೂರವಾಗುತ್ತದೆ. ಅವರು ತಮ್ಮ ತಂದೆತಾಯಿಗಳು ತಮಗೆ ನೀಡಿದ ವಾಗ್ದಾನಗಳನ್ನು ಈಡೇರಿಸುವಲ್ಲಿ ಅಸತ್ಯವುಳ್ಳವರಾಗಿದ್ದಾರೆ, ಮತ್ತು ಅಂತಹ ವಾಗ್ದಾನಗಳನ್ನು ನೆರವೇರಿಸಲೇಬೇಕೆಂಬ ಕಿಂಚಿತ್ತು ಉದ್ದೇಶವಿಲ್ಲದಿದ್ದರೂ ಆಗಾಗ ನೀಡಲಾಗುತ್ತಿದೆ ಎಂದು ಕಂಡುಕೊಳ್ಳುತ್ತಾರೆ. ಈ ರೀತಿಯಲ್ಲಿ ಮಕ್ಕಳು ಸಹಾ ಸುಳ್ಳು ಹೇಳಲು, ಬೆದರಿಸಲು, ಅನಾವಶ್ಯಕ ವಾಗ್ದಾನಗಳನ್ನು ನೀಡಲು, ಇತರರನ್ನು ನಿಜವಾದ ಉದ್ದೇಶದಿಂದ ಮೋಸಗೊಳಿಸಲು ಕಲಿತುಕೊಳ್ಳುತ್ತಾರೆ. ಇಂತಹ ಮಕ್ಕಳು ಕಠಿಣರಾಗುತ್ತಾರೆ ಎಂಬುದರಲ್ಲಿ ಯಾವುದೇ ಆಶ್ಚರ್ಯವಿದೆಯೇ? ನಿಜವಾಗಿಯೂ ಆಶ್ಚರ್ಯವೇನೆಂದರೆ, ಕೆಟ್ಟ ತರಬೇತಿ, ಉದಾಸೀನ ತರಬೇತಿ, ಅಥವಾ ತರಬೇತಿಯೇ ಇಲ್ಲದಿರುವುದು ಇವುಗಳಿಗಿಂತ ಹೀನವಾದ ವ್ಯವಹಾರವು ಈ ನಾಗರೀಕ ಪ್ರಪಂಚದಲ್ಲಿ ಬೇರೆ ಯಾವುದೂ ಇರಲಾರದು.

## "ನೀತಿನಿರ್ಣಯದಲ್ಲಿ ಜನಿಸಿದ ಮಕ್ಕಳು"

## Children Born in Justification

ಇವೆಲ್ಲಾ ಸಂಗತಿಗಳಲ್ಲಿಯೂ ನೂತನ ಸೃಷ್ಟಿಗಳು ಉಳಿದವರೆಲ್ಲರಿಗಿಂತ ಹೆಚ್ಚಾಗಿ ತಮ್ಮ ಮಕ್ಕಳು ನಿರ್ಧಾರಿತ ಅನುಕೂಲತೆಗಳನ್ನು ಹೊಂದಿರುತ್ತಾರೆ. ಪ್ರಾರಂಭದಲ್ಲಿ, ಅವರು ಉತ್ತಮವಾಗಿ ಜನಿಸಿರುತ್ತಾರೆ, ಜನನಕ್ಕೆ ಯುಕ್ತ ಸಂಪನ್ನತೆ ಹೊಂದಿರುತ್ತಾರೆ. ತಂದೆತಾಯಿಗಳ ಈ ದತ್ತಿಯು ಪೋಷಣೆಯನ್ನು ಶಿಶುಪ್ರಾಯದ ಬಹಳ ಹಿಂದಿನ ಕ್ಷಣದಿಂದಲೇ ಹೊಂದಿಕೊಂಡಿರುತ್ತಾರೆ. ಸ್ವಲ್ಪ ದಿನಗಳವರೆಗೆ ಮಕ್ಕಳು ಪುಕ್ಕಲಾಗಿ ಇರುವುದು ನಿಶ್ಚಿತ. ತಾಯಿಯು ಕೋಪವನ್ನೆಬ್ಬಿಸುವವಳೂ, ಯಾತನೆಯನ್ನುಂಟುಮಾಡುವವಳೂ ಆಗಿದ್ದಲ್ಲಿ ಮಕ್ಕಳೂ ಹಾಗೆಯೇ ಇರುತ್ತವೆ. ಮಕ್ಕಳ ಮೇಲೆ ಇವುಗಳ ಪರಿಣಾಮವುಂಟಾಗುತ್ತದೆ– ತಾಯಿಯ ಹಾಲಿನ ಮೂಲಕವಾಗಿ ಮಾತ್ರವಲ್ಲ ಆದರೆ ಭಾವನಾತ್ಮಕವಾಗಿ, ವಿದ್ಯುತ್ಪೂರ್ವಕವಾಗಿ ಇವು ಆಕೆಯಿಂದ ಮಗುವಿಗೆ ಹರಿದುಬರುತ್ತವೆ. ನೂತನ ಸೃಷ್ಟಿಯಲ್ಲಿ ದೇವರಾತ್ಮನು ಶಾಂತಿ, ಪ್ರೀತಿ ಮತ್ತು ಸಂತೋಷಗಳೊಡನೆ ನೆಲೆಸಿರುವ ಕಾರಣ ಎಂಥಹ ಸರ್ವ ಸಾಮಾನ್ಯವಾದ ಅನುಕೂಲತೆಗಳು ಅವರ ಶಿಶುಗಳಿಗೆ ದೊರೆಯುತ್ತವೆಯೋ ಮತ್ತು ಇಂಥಹ ಪಾಲನೆಯಲ್ಲಿ ಬೆಳೆಯುವ ಮಕ್ಕಳು ಎಷ್ಟೋ ಭಾಗ್ಯವಂತರು! ಮಾನವ ರೀತಿಯಲ್ಲಿ ಹೇಳಬೇಕಾದರೆ, ಇತರರ ಪುರುಷತ್ವ ಮತ್ತು ಸ್ತ್ರೀಯತ್ವಗಳ ಕುಲೀನತೆಯ ಸಾಧ್ಯತೆಗಳೊಂದಿಗೆ ಹೋಲಿಸಿದಾಗ ಇವರ ಸಾಧನೆಯು ಎಷ್ಟೋ ಶ್ರೇಷ್ಠವಾದುದಲ್ಲವೆ? ದೇವರ ವಾಕ್ಯದ ದೃಷ್ಟಿಕೋನದೊಂದಿಗೆ ಮಾತನಾಡುವಾಗ, ದೇವರಿಂದ ಪ್ರತಿಷ್ಠೆಗೊಂಡ ತಂದೆತಾಯಿಗಳ ಮಕ್ಕಳು ಅವರಂತೆಯೇ ಅವರ ಎಲ್ಲಾ ವಿಷಯಗಳಲ್ಲಿ ದೈವಾನುಗ್ರಹದ ಮೇಲ್ವಿಚಾರಣೆಗೆ ಒಳಗಾಗಿದ್ದಾರೆ ಎಂಬುದನ್ನು ನಾವು ನೆನಪಿಸಿಕೊಳ್ಳುವಾಗ ಅದರ ಪ್ರಯೋಜನಗಳು ಎಷ್ಟೋ ಹೆಚ್ಚಾಗಿವೆ; ವಿಶ್ವಾಸಿಗಳ ಮಕ್ಕಳು ಸಹಾ"ಎಲ್ಲಾ ಕಾರ್ಯಗಳು ಅವರ ಹಿತಕ್ಕಾಗಿ ಅನುಕೂಲವಾಗುತ್ತವೆ." ಎಂಬ ಷರತ್ತಿಗೆ ಬದ್ಧರಾಗುತ್ತಾರೆ.

## ನೂತನ ಸೃಷ್ಟಿಯ ತಂದೆ ತಾಯಿಗಳ ಅವಶ್ಯಕ ಕರ್ತವ್ಯಗಳು

ನೂತನ ಸೃಷ್ಟಿಗಳ ಮಕ್ಕಳಿಗೆ ತಮ್ಮ ತಂದೆತಾಯಿಗಳಿಗೂ ಮತ್ತು ದೇವರಿಗೂ ಇರುವ ಪರಸ್ಪರ ಸಂಬಂಧದ ಪಾವಿತ್ರತೆಯ ದೆಸೆಯಿಂದ ದೇವರ ಮುಂದೆ ನಿಲ್ಲಲು ಪ್ರಾಯೋಗಿಕ ನೀತಿವಂತರು ಎಂದು ಕಂಡುಕೊಳ್ಳುವುದು ಕಷ್ಟಕರವೇನಲ್ಲ. ಆದಾಮ ಹವ್ವರು ದೇವರ ವಿರುದ್ಧವಾಗಿ ತೋರಿದ ಅವಿಧೇಯತೆ ಮತ್ತು ವಿಮುಖತೆಯು ಅವರ ಇಡೀ ಸಂತಾನಕ್ಕೇ ವಿಮುಖತೆಯನ್ನು ತಂದಂತೆಯೇ, ದೇವ ಜನರೆಲ್ಲರಿಗೆ ಕರ್ತನ ಮಹಾ ಈಡುಬಲಿಯ ಮೂಲಕವಾಗಿ ಸಂಧಾನವುಂಟಾಯಿತು. ಇದು ಅವರಿಗೆ ದೇವರೊಂದಿಗೆ ಸಾಮರಸ್ಯವನ್ನುಂಟು ಮಾಡಿತಲ್ಲದೆ, ಅವರ ಮಕ್ಕಳು ಕೂಡ ಸ್ವಸಾಮರ್ಥ್ಯ ಮತ್ತು ಸ್ವಂತ ಬುದ್ಧಿ ಶಕ್ತಿಗಳನ್ನು ಹೊಂದಿಕೊಂಡು ತಮ್ಮ ಕಾಲುಗಳ ಮೇಲೆ ನಿಂತುಕೊಳ್ಳಲು ಶಕ್ತರಾಗುವವರೆಗೆ ತಮ್ಮ ತಂದೆತಾಯಿಗಳೊಂದಿಗೆ ಸಮರ್ಥರೆಂದು ಎಣಿಸಲ್ಪಡುವರು. ಒಂದುವೇಳೆ ತಂದೆತಾಯಿಗಳಲ್ಲಿ ಒಬ್ಬರು ಕರ್ತನವರಾಗಿದ್ದು, ಮತ್ತೊಬ್ಬರು ಕರ್ತನಿಗೆ ಅಪರಿಚಿತರಾಗಿದ್ದು ಆತನಿಗೆ ವಿಮುಖರಾಗಿದ್ದಲ್ಲಿ ಸಮಸ್ಯೆಯು ಮತ್ತಷ್ಟು ಜಟಿಲವಾಗುತ್ತದೆ; ಅಂತಹ ಪ್ರಕರಣಗಳಲ್ಲಿ ತಂದೆ ತಾಯಿಗಳಲ್ಲಿ ಒಬ್ಬರು ತನ್ನ ಶಿಷ್ಯರಾಗಿರುವುದರಿಂದ ದೇವರು ಆ ಮಗುವನ್ನು ತನ್ನ ಮಗುವೆಂದು ಪರಿಗಣಿಸುತ್ತಾನೆ ಎಂಬುದಾಗಿ ಅಪೋಸ್ತಲನು ಭರವಸೆ ನೀಡುವವನಾಗಿದ್ದಾನೆ. ವಿಶ್ವಾಸಿಯಾದ, ಪ್ರತಿಷ್ಠೆ ಹೊಂದಿದ ತಂದೆ ಅಥವಾ ತಾಯಿಯ ಪ್ರಭಾವವು, ಪ್ರತಿಷ್ಠೆಗೊಂಡಿರದ ತಂದೆ ಅಥವಾ ತಾಯಿಯ ಪ್ರಭಾವವನ್ನು ಮಕ್ಕಳ ಮಟ್ಟಿಗೆ ತಳ್ಳಿಹಾಕುತ್ತದೆ. ಈ ವಿಷಯವಾಗಿ ಅಪೋಸ್ತಲನು ಹೇಳುವುದೇನೆಂದರೆ : **"ಹಾಗಲ್ಲದಿದ್ದರೆ, ನಿಮ್ಮ ಮಕ್ಕಳು ಅಪವಿತ್ರರಾಗುತ್ತಿದ್ದರು"**(1 ಕೊರಿ. 7:14)

"ಯಾಕೆಂದರೆ ಕ್ರಿಸ್ತ ನಂಬಿಕೆಯಿಲ್ಲದ ಗಂಡನು ವಿಶ್ವಾಸಿಯಾದ ತನ್ನ ಹೆಂಡತಿಯಲ್ಲಿ ದೇವಜನಕ್ಕೆ (ನಾವು ಈಗ ಪರಿಗಣಿಸುತ್ತಿರುವ ವಿಷಯಗಳಿಗೆ ಅಂದರೆ ಅವರ ವಿವಾಹಸಂಬಂಧ ಜನಿಸಿದ ಮಕ್ಕಳ ಬಗ್ಗೆ) ಸಂಬಂಧ ಪಟ್ಟವನಾದನು; ಮತ್ತು (ಅದೇರೀತಿಯಲ್ಲಿ) ಕ್ರಿಸ್ತ ನಂಬಿಕೆಯಿಲ್ಲದ ಹೆಂಡತಿಯು ವಿಶ್ವಾಸಿಯಾದ ತನ್ನ ಗಂಡನಲ್ಲಿ ದೇವಜನಕ್ಕೆ ಸಂಬಂಧಪಟ್ಟವಳಾದಳು. ಹಾಗಲ್ಲದಿದ್ದರೆ ನಿಮ್ಮ ಮಕ್ಕಳು ಅಪವಿತ್ರರಾಗುತ್ತಿದ್ದರು" (ಅಂದರೆ ದಂಡನೆಗೊಳಗಾದವರು, ಅನೀತಿವಂತರೂ, ದೇವರಿಗೆ ಸಂಬಂಧ ಪಡದಿರುವ, ಆತನ ಪಾಲನೆ ಮತ್ತು ಆಶೀರ್ವಾದಗಳಿಗೆ ಪರಕೀಯರು ಮತ್ತು ವಿಮುಖರಾದ ಪಾಪಿಗಳು). ಈಗಲಾದರೋ (ದೇವರ ಕೃಪೆಯ ದೃಷ್ಟಿಯಲ್ಲಿ) ಅವರು ದೇವಜನರಲ್ಲಿ ಸೇರಿದವರೇ ಆಗಿದ್ದಾರೆ. (ಅಂದರೆ ದೇವರು ಅವರನ್ನು ಪ್ರಾಯೋಗಿಕ ನೀತಿನಿರ್ಣಯ ಹೊಂದಿದವರು ಎಂದೆಣಿಸಿ ಅದರ ಮೂಲಕ ಆತನು ಅವರನ್ನು ಶತ್ರುಗಳು ಎಂದೆಣಿಸದಂತೆ) (1ಕೊರಿ.7:14). ಮಕ್ಕಳಿಗೆ ಯೋಗ್ಯವಾದ ಶಿಕ್ಷಣ ನೀಡುವುದು ಕಷ್ಟಕರವಾಗಿದ್ದಿರಬಹುದು, ಆದರೆ ದೇವರಿಂದ ಇದನ್ನು ನಿರ್ವಹಿಸುವುದು ಹೆಚ್ಚೇನೂ ಕಷ್ಟವಲ್ಲ. ಆದುದರಿಂದ, ಕ್ರೈಸ್ತರಾದ ತಂದೆತಾಯಿಗಳು ತಮ್ಮ ಎಲ್ಲಾ ಪರಿಸ್ಥಿತಿಗಳಲ್ಲಿ ದೇವರ ಕೃಪೆಯೇ ನಮಗೆ ಸಾಕು ಮತ್ತು ಮೇಲಣದಿಂದ ಬರುವ ಜ್ಞಾನ ಮತ್ತು ಸಹಾಯಗಳನ್ನು ನಿಷ್ಟೆಯಿಂದ ಬಯಸಬಹುದಾಗಿದೆ ಹಾಗೂ ತನ್ನ ಎಲ್ಲಾ ಕಷ್ಟಕರ ಪ್ರಸಂಗಗಳಲ್ಲಿ ತನ್ನ ಕರ್ತವ್ಯಗಳನ್ನು ಸರಿಯಾದ ರೀತಿಯಲ್ಲಿ ನಿಭಾಯಿಸಬಹುದಾಗಿದೆ. ಕರ್ತನ ಕೃಪೆ ಎಲ್ಲಾ ಸ್ಥಿತಿಗಳಲ್ಲೂ ಸಮರ್ಪಕವಾಗಿರುತ್ತದೆ, ತೃಪ್ತಿದಾಯಕವಾಗಿರುತ್ತದಲ್ಲದೆ ಒಬ್ಬನು ನೂತನ ಸೃಷ್ಟಿ ಮತ್ತೊಬ್ಬನು ಅವಿಶ್ವಾಸಿ ಅಥವಾ ಪ್ರತಿಷ್ಠೆ ಪಡಿಸಿಕೊಳ್ಳದವನು ಎಂಬ ಸತ್ಯವು ಕುಟುಂಬ ಕಷ್ಟದಲ್ಲಿ ದೇವರ ವ್ಯವಸ್ಥೆಯನ್ನು ಅಂದರೆ ಕುಟುಂಬದ ಯಜಮಾನಿಕೆಯನ್ನು ಬದಲಿಸಲಾರದು. ಈಗಲೂ ಇದು ಪತಿಗೆ ವಹಿಸಲ್ಪಟ್ಟದ್ದಾಗಿದೆ. ನೂತನ ಸೃಷ್ಟಿಯಾಗಿದ್ದರೆ ಆತನು ಮೇಲಿನಿಂದ ವಾಗ್ದತ್ತವಾದ ಜ್ಞಾನದಿಂದ ಮಾರ್ಗದರ್ಶನ ಹೊಂದಿಕೊಂಡು ತನ್ನ ಕುಟುಂಬದ ವ್ಯವಹಾರಗಳ ಎಲ್ಲಾ ಪರಿಸ್ಥಿತಿಗಳಲ್ಲಿ ಉತ್ತಮವಾಗಿ ನಿರ್ದೇಶಿಸತಕ್ಕದ್ದು. ಪತ್ನಿಯು ನೂತನ ಸೃಷ್ಟಿಯಾಗಿದ್ದಲ್ಲಿ ಆಕೆಯ ಶಾಂತ ಮನಸ್ಥಿತಿ, ತತ್ವಬದ್ಧತೆ, ಸಭ್ಯತೆ, ನಮ್ರತೆ, ಅಲೋಚನಾಪರತೆ, ಜಾಗರೂಕತೆ ಇವುಗಳು ಆಕೆಯನ್ನು ಕುಟುಂಬದ ಅಭರಣವೋ ಎಂಬಂತೆ ಮಾಡಿ, ಆಕೆಯ ಬೆಳಕು ಗಂಡನ ಮುಂದೆ ಪ್ರಕಾಶಿಸತಕ್ಕದ್ದು. ಇದರಿಂದ ಪ್ರಭಾವಿತನಾಗಿ ಆತನು ಮಕ್ಕಳ ಪೂರ್ಣ ನಿಯಂತ್ರಣಾ ಕಾರ್ಯವನ್ನು ಸಂತೋಷದಿಂದ ಆಕೆಗೆ ವಹಿಸಿಕೊಡಬಹುದು. ಇದಕ್ಕಾಗಿ ಆತನು ಆಕೆಯನ್ನು ವಿಶೇಷವಾಗಿ ಯೋಗ್ಯಳೆಂದೆಣಿಸುತ್ತಾನೆ. ಯಾವುದೇ ನಿಯಮ ಅಥವಾ ಅಧಿಕಾರವನ್ನು ಆಕೆಯೇ ಜಾರಿಗೊಳಿಸ ಬೇಕಾಗುವುದು. ಪರಂತು ಇದು ಆಕೆಗೆ ತನ್ನ ಗಂಡನಿಂದ ವಹಿಸಿದ್ದಾಗಿರಬೇಕು. ಆತನು ಭಕ್ತನಾಗಿ ಅಥವಾ ಪಾಪಿಯಾಗಿದ್ದರೂ ಕುಟುಂಬದ ಜವಾಬ್ದಾರಿಯುತ ಯಜಮಾನನಾಗಿದ್ದಾನೆ.

ಅದರಂತೆ, ಪತಿಯು ತನ್ನ ಬೆಳಕನ್ನು ಪ್ರಕಾಶಿಸುತ್ತಾ ತನ್ನ ಪತ್ನಿ ಮತ್ತು ಮಕ್ಕಳು ತನ್ನ ಅಧರ್ಮವಲ್ಲದ ಭಿನ್ನತೆಯನ್ನು, ಪ್ರೀತಿಯ ಚೈತನ್ಯವನ್ನು, ತನ್ನ ಸಭ್ಯತೆ, ಸಹಾಯಕತೆ, ಮತ್ತು ಶಾಂತ ಮನಸ್ಸಿನ ಸ್ವಭಾವವನ್ನು ಗ್ರಹಿಸುವರೆಂದು ಮುಂಚೆಯೇ ತಿಳಿದಿರಬೇಕು. ಪರಂತು, ನಿರೀಕ್ಷಿಸಲೇಬೇಕಾದ ಈ ಫಲಿತಾಂಶಗಳು ಬಾರದೇ ಹೋದಲ್ಲಿ ಪ್ರಮಾಣಿಕತೆಯು ಹೆಚ್ಚಿದಂತೆಲ್ಲಾ ಬೇರ್ಪಡುವಿಕೆಯ ಅಗತ್ಯತೆಯುಂಟಾಗುವ ಮಟ್ಟಿಗೂ ಅವಿಶ್ವಾಸಿ ಸಂಗಾತಿಯಿಂದ ಉಪಚಾರವು ಕೆಟ್ಟದ್ದಾಗಿರುವಲ್ಲಿ ನಾವು ಕರ್ತನ ಸಮಾಲೋಚನೆಯು ನಮಗೆ ಅಂತಹ ಅನುಭವವಾಗಬಹುದೆಂಬ ಎಚ್ಚರಿಕೆಯನ್ನು ಮುಂಚಿತವಾಗಿಯೇ ನೀಡಿತ್ತೆಂಬುದನ್ನು ಕೆಳಗಣ ಮಾತುಗಳಿಂದ ನೆನಪಿಗೆ ತಂದುಕೊಳ್ಳೋಣ.–"ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯ ಪಡಬೇಡಿರಿ; ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸಬೇಡಿರಿ" (1ಪೇತ್ರ 4:12) ಮತ್ತು "ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು" (ಮತ್ತಾ.10:36)ಮತ್ತು "ಭೂಲೋಕದ ಮೇಲೆ ಸಮಾಧಾನವನ್ನು ಹುಟ್ಟಿಸುವುದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ. ಖಡ್ಗವನ್ನುಹಾಕುವುದಕ್ಕೆ ಬಂದೆನು"(ಮತ್ತಾಯ 10:34). ನನ್ನ ಸಂದೇಶವು ಸಮಾಧಾನದ ಸಂದೇಶವಾದರೂ, ಅದು ಪ್ರಸ್ತುತ ಸಮಯಕ್ಕೆ ಆಶೀರ್ವಾದದಾಯಕವಾದರೂ ಮೇಲಿಂದ ಮೇಲೆ ಕಲಹಕ್ಕೆ ಕಾರಣವಾಗುತ್ತದೆ. ಯಾಕೆಂದರೆ ಅಂಧಕಾರದ ಮಕ್ಕಳು ಪ್ರಕಾಶವನ್ನು ದ್ವೇಷಿಸುತ್ತಾರೆ ಮತ್ತು ಅವರಲ್ಲಿ ಅನೇಕರು ಕೆಡುಕನ ತಂತ್ರೋಪಾಯಗಳಿಗೆ ಒಳಗಾಗಿರುವುದರಿಂದ ಮತ್ತು ಅವರ

ಸ್ವಂತ ಪತನದ ಸ್ವಭಾವದ ಬಲಹೀನತೆಯ ಕಾರಣ ಅದರ ವಿರುದ್ಧವಾಗಿ ನಿರಂತರವಾಗಿ ಕಾದಾಡುತ್ತಾರೆ. ಅದು ನಿಮ್ಮ ಶೋಧನೆಯ ಅಂಶವಾಗಿದೆಯೆಂದು ತಿಳಿಯಲು ಆಶ್ಚರ್ಯಪಡಬೇಡಿರಿ. ದೇವರು ಅದರಿಂದ ತಪ್ಪಿಸಿಕೊಳ್ಳುವ ಬಾಗಿಲನ್ನು ತೆರೆಯುವವರೆಗೆ ಅದನ್ನು ದೇವರ ಚಿತ್ತದ ಭಾಗವೆಂಬಂತೆ ಸಹಿಸಿಕೊಳ್ಳಿರಿ.

ದೇವರಿಗೆ ಪ್ರತಿಷ್ಠೆಮಾಡಿಕೊಂಡ ಕೆಲವರು, ನೂತನ ಸೃಷ್ಟಿಗಳು, ಬುದ್ಧಿವಾದಕ್ಕಾಗಿ ಮೊರೆಯಿಡುತ್ತಾ ಹೀಗೆ ಹೇಳುತ್ತಾರೆ – "ನನ್ನ ಮುಂಚಿನ ಕ್ರೈಸ್ತ ಅನುಭವದಲ್ಲಿ, ಹೆಸರಿನ ಕ್ರೈಸ್ತ ಸಭೆಯಲ್ಲಿ ನನಗೆ ತಪ್ಪಾದ ಬೋಧನೆ ನೀಡಲಾಗಿತ್ತು. ನಾನು ಧರ್ಮಕ್ಕೆ ಸೇರಿದ ಮೇಲೆ, ರಕ್ಷಣೆ ಹೊಂದಿಕೊಳ್ಳುವೆನು, ಅದಕ್ಕಿಂತ ಹೆಚ್ಚಾಗಿ ನನಗೆ ಬೇರೇನೂ ಬೇಡ, ಕ್ರಮಬದ್ಧವಾಗಿ ದೇವಾಲಯಕ್ಕೆ ಹೋಗುವುದು ಮತ್ತು ತೆರಬೇಕಾದ ಕಾಣಿಕೆಯನ್ನು ತಪ್ಪದೇ ತೆರುವುದು ಇಷ್ಟೇ ಸಾಕು ಎಂದಷ್ಟೇ ಅರ್ಥ ಮಾಡಿಕೊಂಡಿದ್ದೆನು. ಪಾಪವನ್ನು, ಸ್ವಾರ್ಥತೆಯನ್ನು ನನ್ನ ಹೃದಯದಿಂದ ಬುಡ ಸಮೇತವಾಗಿ ಕಿತ್ತುಹಾಕುವ, ಮತ್ತು ಅದಕ್ಕೆ ಬದಲಾಗಿ ಕರ್ತನ ಆತ್ಮನನ್ನು ಅದರ ಪ್ರೀತಿಯ ಭಾಗ್ಯದೊಡನೆ ಮತ್ತು ಅದರೊಂದಿಗಿರುವ ಎಲ್ಲಾ ಆಂತರಿಕ ಕೃಪೆಗಳೊಂದಿಗೆ ಹೆಚ್ಚುಹೆಚ್ಚಾಗಿ ಪಡಕೊಳ್ಳುವ ಅಗತ್ಯತೆಯ ಬಗ್ಗೆ ನನಗೆ ಯಾವ ವಿಧವಾದ ಸೂಚನೆಯನ್ನೂ ನೀಡಲಾಗಿರಲಿಲ್ಲ. ನಾನು ನನ್ನ ಪತಿಗೆ ಆತನ ಉದ್ಯೋಗದಲ್ಲಿ, ಈ ಲೋಕದಲ್ಲಿ ಮುಂದುವರೆಯುವ ಪ್ರಯಾಸದಲ್ಲಿ ಆತನಿಗೆ ಸಹಾಯಮಾಡಲು ಹೆಚ್ಚುವರಿ ಸಮಯವನ್ನು, ಚೈತನ್ಯವನ್ನು ನೀಡಿದೆ. ಆದರೆ ಆತ್ಮನನ್ನು ಪಡಕೊಳ್ಳುವುದರ ಅರ್ಥದ ಬಗ್ಗೆ ಮತ್ತು ನಾನು ನೂತನ ಮನಸ್ಸನ್ನು ಹೊಂದಿಕೊಂಡು ಭೂಲೋಕದ ಸಂಗತಿಗಳಿಗೆ ಹೆಚ್ಚು ಶ್ರಮಿಸದೆ, ಪರಲೋಕದ ಗುಣಲಕ್ಷಣಗಳಿಗೆ, ಶಕ್ತಿ ಮತ್ತು ಅಭಿವೃದ್ಧಿಯ ಕೃಪೆಗಳಿಗೆ ಹೆಚ್ಚು ಹೆಚ್ಚು ಶ್ರಮಿಸಬೇಕೆಂಬುದರ ಬಗ್ಗೆ ನಾನು ಅಜ್ಞಾನದಲ್ಲಿ ಉಳಿದೆ. ಇಂಥಹ ಸಮಯದಲ್ಲಿಯೇ ನನಗೆ ಮಕ್ಕಳು ಹುಟ್ಟಿದರು. ನಾನು ಅವರುಗಳ ಗರ್ಭಧರಿಸಿದಾಗಲೇ ಅವರು ನನ್ನ ಈ ಗುಣಗಳನ್ನು ಬಳುವಳಿಯಾಗಿ ಪಡಕೊಂಡಿರುವರೆಂದು ನಾನು ಭಾವಿಸುತ್ತೇನೆ. ಅವರ ಜನನದ ನಂತರ ಅವರನ್ನು ಕಡೆಗಣಿಸಲಾಗಿತ್ತು ಎಂಬುದು ನನ್ನ ಗ್ರಹಿಕೆಗೆ ಬಂದಿದೆ ಮತ್ತು ಮಕ್ಕಳ ಯೋಗ್ಯ ತರಬೇತಿಯ ಅಗತ್ಯತೆಯನ್ನು, ಕ್ರಿಸ್ತಯೇಸುವಿನಲ್ಲಿ ನೂತನ ಸೃಷ್ಟಿಯಾದವರ ಸರಿಯಾದ ಕರ್ತವ್ಯಗಳೇನೆಂಬುದನ್ನು ನಾನೀಗ ಕಂಡುಕೊಳ್ಳುತ್ತಿದ್ದೇನೆ. ಈಗ ನನ್ನ ಮಕ್ಕಳು ಒರಟರು, ಹಠಮಾರಿಗಳು, ಸ್ವಾರ್ಥರೂ, ಅವಿಧೇಯರೂ ಆಗಿದ್ದಾರೆ. ಅವರಲ್ಲಿ ದೇವರ ಬಗ್ಗೆ ಭಯಭಕ್ತಿಯ ಕೊರತೆಯಿರುವುದು ಮಾತ್ರವಲ್ಲ, ನನ್ನ ಬಗ್ಗೆಯೂ, ನನ್ನ ಧಾರ್ಮಿಕ ದೃಷ್ಟಿಕೋನಗಳ ಬಗ್ಗೆಯೂ ಅವರಿಗೆ ಗೌರವವಿಲ್ಲ. ನಾನು ಅವರ ಸಂಗಡ ಏನು ಮಾಡಲಿ? ಈ ಹಿಂದೆ ಅವರ ಬಗ್ಗೆ ನನ್ನ ಕರ್ತವ್ಯದ ವಿಷಯವಾಗಿ ತೋರಿದ ಅಜ್ಞಾನದ, ವಿಫಲತೆಗಳಿಗಾಗಿ ಕ್ರಿಸ್ತನ ಮೂಲಕ ದೇವರಲ್ಲಿ ಪಾಪಕ್ಷಮೆಯನ್ನು ಕೋರಿಕೊಳ್ಳುತ್ತೇನೆ. ನಾನು ಬಿತ್ತಿದ್ದನ್ನೇ ನಾನು ಕೊಯ್ಯುತ್ತಿದ್ದೇನೆಂಬ ಗ್ರಹಿಕೆಯೂ ನನಗುಂಟಾಗಿದೆ. ನನ್ನ ಪ್ರಸ್ತುತ ಅನುಭವಗಳು ಕೇವಲ ಈ ಹಿಂದೆ ನಾನು ನನ್ನ ಕರ್ತವ್ಯಗಳ ಬಗ್ಗೆ ತೋರಿದ ಅನಾಸಕ್ತಿಯ ಪ್ರತಿಫಲವಾಗಿದೆ ಎಂಬುದು ನನಗೆ ಮನವರಿಕೆಯಾಗಿದೆ. ಆಹಾ! ನನ್ನ ಕ್ರೈಸ್ತ ತಿಳುವಳಿಕೆ ಎಲ್ಲಿಗೆ ಹೋಗಿತ್ತು? ಶಾಂತ ಮನಸ್ಸಿನ ಚೈತನ್ಯಕ್ಕೆ ನಾನೆಷ್ಟು ಬರಿದಾಗಿದ್ದೇನೆ, ನನಗೆ ದೈವಿಕ ಗುಣಲಕ್ಷಣಗಳು ಮತ್ತು ಯೋಜನೆಗಳ ಬಗ್ಗೆ ತಪ್ಪಾಗಿ ಬೋಧಿಸಿದ್ದು ಮಾತ್ರವಲ್ಲದೆ ತಂದೆತಾಯಿಗಳ ಹಂಗಿನ ಬಗ್ಗೆ, ಸ್ವಾಭಾವಿಕ ಕರ್ತವ್ಯಗಳ ಬಗ್ಗೆ ನನಗೆ ಕಿಂಚಿತ್ತೂ ಸೂಚನೆ ನೀಡದ ನನ್ನ ಧಾರ್ಮಿಕ ಶಿಕ್ಷಕರೂ, ಮಾರ್ಗದರ್ಶಿಗಳೂ ಎಲ್ಲಿ?. ಅಯ್ಯೋ! ನಾನು ಅವರಿಗೆ ಸಹಾಯಮಾಡಲು ನನ್ನ ಹಣವನ್ನು ವ್ಯರ್ಥಮಾಡಿದೆ. ಅವರು ನನ್ನನ್ನು ಲೌಕಿಕವಾಗಿಯೂ ಅಥವಾ ಆತ್ಮೀಕವಾಗಿಯೂ ತೃಪ್ತಿಪಡಿಸಲಿಲ್ಲ. ಈಗ ನನ್ನ ಕರ್ತವ್ಯಗಳೇನು? ನಾನು ಯಾವ ಹಾದಿಯಲ್ಲಿ ಮುಂದುವರೆಯಬೇಕು? ನಾನು ಈ ಹಿಂದಿನ ನನ್ನ ಕೊರತೆಗಳನ್ನು ಎಷ್ಟರಮಟ್ಟಿಗೆ ಸರಿಪಡಿಸಿಕೊಳ್ಳಬಹುದು?"

ಇಂತಹ ವಿಚಾರಣೆಗಳಿಗೆ ನಮ್ಮ ಉತ್ತರವೇನೆಂದರೆ, ಇದರಲ್ಲಿ, ಉಳಿದ ವಿಷಯಗಳಲ್ಲಿದ್ದಂತೆ ದೇವಜನರು ನಿರೀಕ್ಷೆಯಿಲ್ಲದವರಂತೆ ದುಃಖಪಡಬಾರದು. ನಾವು ಈ ಹಿಂದೆ ನಮ್ಮ ಕರ್ತವ್ಯಗಳಲ್ಲಿ ಸೋತುಹೋದ ಬಗ್ಗೆ ಪಶ್ಚಾತ್ತಾಪ ಪಡುತ್ತಿರುವುದಕ್ಕಾಗಿ ಮತ್ತು ಈ ಕೊರತೆಗಳಿಗಾಗಿ ಆತನ ಕ್ಷಮೆ ಯಾಚಿಸುತ್ತಿರುವುದಕ್ಕಾಗಿ ಕರ್ತನು ಮೆಚ್ಚಿಕೊಳ್ಳುತ್ತಾನೆ. ಇನ್ನು ಮುಂದೆ ನಾವು ನಮ್ಮ ಮೇಲೆ ಆತುಕೊಂಡಿರುವವರ ಬಗ್ಗೆ ನಮಗಿರುವ ಹಂಗುಗಳನ್ನು ಉತ್ತಮ ರೀತಿಯಲ್ಲಿ ನಿಭಾಯಿಸುವಂತೆ ನಮಗೆ ಹೆಚ್ಚಾದ ನಂಬಿಕೆಯನ್ನು ವಾಗ್ದಾನ ಮಾಡುತ್ತಾನೆ. ನಾವು ನಮ್ಮ ಸ್ವೇಚ್ಛಾಪ್ರವೃತ್ತಿಯ ಮಕ್ಕಳ ಬಗ್ಗೆ ಸಹಿಷ್ಣುತೆಯಿಂದ, ತಾಳ್ಮೆಯಿಂದ ವರ್ತಿಸಿ ಅವರ ತರಬೇತಿಯಲ್ಲಿ ತೋರಿದ ಕರ್ತವ್ಯ ಲೋಪವೆಂಬ ಪಾಪದ ದಂಡನೆಯ ಭಾಗವಾಗಿ ಪಡೆದ ಎಲ್ಲಾ ಅನುಭವಗಳ ಬಗ್ಗೆ ಆತನು ಸಂತೋಷಿಸುತ್ತಾನೆ. ಈ ರೀತಿಯಲ್ಲಿ ಒದಗಿದ ಪರೀಕ್ಷೆಗಳು ನಮಗೆ ಮೆರಗುಕೊಟ್ಟು ದೇವರ ರಾಜ್ಯಕ್ಕಾಗಿ ನಮ್ಮನ್ನು ಸಿದ್ಧಮಾಡುವುದಾಗಿದೆ.

ಅಂತಹ ಮಕ್ಕಳ ಬಗ್ಗೆ ಅಂಥಾಃ ತಂದೆತಾಯಿಗಳ ಕರ್ತವ್ಯವು ಅವರಿಗೆ ಕರ್ತನ ಬಗ್ಗೆ ಅವರ ಜವಾಬ್ದಾರಿಗಳೇನು, ಪರಸ್ಪರವಾದ ಹಕ್ಕಿನ, ನ್ಯಾಯದ, ಪ್ರೀತಿಯ ಬಗ್ಗೆ ಇರಬೇಕಾದ ತತ್ವಗಳೇನು ಎಂಬಿತ್ಯಾದಿಯಾಗಿ ಅವರಿಗೆ ಬಾಲ್ಯಾವಸ್ಥೆಯಲ್ಲಿ ಕಲಿಸಬೇಕಾಗಿದ್ದ ಪಾಠಗಳ ಬಗ್ಗೆ ಈಗ ಕಲಿಸುವುದರ ಮೂಲಕ ಪ್ರಶ್ನಾತೀತವಾಗಿ ಪ್ರಾರಂಭವಾಗುತ್ತದೆ. ಇಂತಹ ಬೋಧನೆಗಳನ್ನು ಅವರಿಗೆ ಹೆಚ್ಚು ಪ್ರೀತಿಯಿಂದ, ಸಹಿಷ್ಣುತೆ ಮತ್ತು ಸಹನೆಯಿಂದ ನೀಡಬೇಕಾಗುತ್ತದೆ. ಇದು ತಂದೆತಾಯಿಗಳ ಹೃದಯದಲ್ಲಿರುವ ಕೃಪಾ ಶಕ್ತಿಯು ಮಕ್ಕಳಿಗೆ ಗಮನಾರ್ಹ ಪಾಠವಾಗಿರುತ್ತದೆ. ತಪ್ಪು ತತ್ವಗಳು ಎಷ್ಟರಮಟ್ಟಿಗೆ ಬೇರೂರಿದೆ ಇವೇ ಮುಂತಾದ ಮಕ್ಕಳ ವಯಸ್ಸಿನ ಮತ್ತಿತರ ಸಂಬಂಧಿತ ಸಂಧರ್ಭಗಳಿಗೆ ಅನುಸಾರವಾಗಿ ಫಲಿತಾಂಶವನ್ನು ತಾಳ್ಮೆಯಿಂದ ಕಾಯಬೇಕು; ಮತ್ತು ನಿರಪೇಕ್ಷಕವಾಗಿ ಅಗತ್ಯವೆಂದು ಕಂಡುಬರುವ ನಿರ್ಬಂಧಗಳನ್ನು ಪರಿಗಣಿಸುವಂತೆ, ವಿವರಣಾತ್ಮಕವಾಗಿ, ಮೃದುವಾಗಿ ವಿಧಿಸಲೇಬೇಕಾಗುತ್ತದೆ. ತಂದೆತಾಯಿಗಳ ಅಧಿಕಾರವನ್ನು ಸಹಾನುಭೂತಿ ಪೂರ್ವಾಕವಾಗಿ ಸ್ಥಾಪಿಸಬೇಕೇ ಹೊರತು

ಒರಟುತನದಿಂದಲ್ಲ. ಮನೆಯಲ್ಲಿ ಅಧಿಕಾರ ಚಲಾಯಿಸುವ ಮಕ್ಕಳು ಕ್ಷಣಮಾತ್ರದಲ್ಲಿ ಒಳ್ಳೆಯವರೂ, ವಿಧೇಯರೂ ಆಗಿಬಿಡುತ್ತಾರೆಂದು ನಿರೀಕ್ಷಿಸಲಾಗದು. ಮನೆಯ ವ್ಯವಸ್ಥೆ ಮತ್ತು ಆಡಳಿತದ ವಿವರಣೆಗಳ ಬಗ್ಗೆ ಮೇಲಿನಿಂದ ಜ್ಞಾನವನ್ನು ಬಯಸಬೇಕು. ಯಾಕೆಂದರೆ ಮತ್ತೊಬ್ಬರ ಕುಟುಂಬದ ಬಗ್ಗೆ ಯಾರೇ ಹೊರಗಿನವರು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಂಡಿರುವುದಿಲ್ಲ ಮತ್ತು ಅದರ ನಿರ್ವಹಣೆಯ ಬಗ್ಗೆ ನಿರ್ದಿಷ್ಟವಾದ ಸಲಹೆಗಳನ್ನು ನೀಡಲಾರರು.

ಎರಡು ತತ್ವಗಳು ನಮಗೆ ಮಾರ್ಗದರ್ಶನ ನೀಡಬೇಕು; ಎಲ್ಲಾದಕ್ಕಿಂತ ಮೊದಲಿಗೆ, ದೇವರ ಬಗ್ಗೆ ಮತ್ತು ಮಕ್ಕಳ ಬಗ್ಗೆ ಪ್ರೀತಿ ಮತ್ತು ಈ ಪ್ರೀತಿಯು ದೇವರ ವಾಕ್ಯದ ಮೇರೆಗೆ ಇರತಕ್ಕದ್ದು. ಎರಡನೆಯದಾಗಿ ದೇವರ ವಾಕ್ಯವನ್ನು ಅಧಿಕಾರ ಮತ್ತು ಬೋಧನೆಯ ಮೂಲವಾಗಿ ನಿರಂತರವೂ ಮೊರೆಹೋಗಬೇಕು. ಇದಕ್ಕೂ ಹೆಚ್ಚಾಗಿ ಎಲ್ಲಾ ತಂದೆತಾಯಿಗಳು ವಿಚಾರಯೋಗ್ಯವಾಗಿ ಪರಿಶೀಲಿಸಿ ತಮ್ಮ ಮಕ್ಕಳನ್ನು ಉಪಚರಿಸತಕ್ಕದ್ದು. ಅವರು ಸರಿಯಾದ ರೀತಿಯ ತರಬೇತಿ ಪಡೆದ ಮಕ್ಕಳಾಗಿರಬಹುದು, ಇಲ್ಲದಿರಬಹುದು ಅವರು ತಂದೆತಾಯಿಗಳು ತಮ್ಮ ವಿವೇಚನಾಶಕ್ತಿಯನ್ನು ಮತ್ತು ನಿರ್ಣಯಗಳನ್ನು ಗೌರವಿಸುತ್ತಾರೆ ಮತ್ತು ಈ ಗುಣಲಕ್ಷಣಗಳೊಂದಿಗೆ ತಮ್ಮೊಡನೆ ವ್ಯವಹರಿಸಲು ಪ್ರಯತ್ನಿಸುತ್ತಾರೆ ಎಂಬುದನ್ನು ಗ್ರಹಿಸತಕ್ಕದ್ದು. ವಿಶೇಷವಾಗಿ ಮಕ್ಕಳು ಬೆಳೆದು ಪುರುಷ ಅಥವಾ ಸ್ತ್ರೀಯ ಸ್ಥಿತಿಯನ್ನು ತಲುಪುವುದು ಅರಿಕೆಗೆ ಒಂದು ಕಾರಣವಾಗಿದ್ದು ಅದೇ ಪ್ರಮಾಣದ ರಭಸದಲ್ಲಿ ಭೌತಿಕ ದಂಡನೆಯನ್ನು ತೊರೆಯಬೇಕಾಗುವುದು.

ನಾವೀಗಾಗಲೇ ನೋಡಿರುವ ನ್ಯಾಯದ ತತ್ವವು ಪ್ರತಿಯೊಬ್ಬ ಮಾನವ ಜೀವಿಯಲ್ಲಿಯೂ ವಿಶೇಷವಾಗಿ ನ್ಯಾಯದ ತಿಳುವಳಿಕೆಯು ಸ್ವಾರ್ಥದೊಂದಿಗೆ ಸಹಕರಿಸುವುದಾದಲ್ಲಿ ಸ್ವಲ್ಪ ಮಟ್ಟಿಗಾದರೂ ಕಂಡುಬರಬೇಕು. ಈ ರೀತಿಯಲ್ಲಿ ಪುರುಷ ಅಥವಾ ಸ್ತ್ರೀಯ ವಯಸ್ಸನ್ನು ತಲುಪಿದ ನಂತರ ಮಕ್ಕಳು ಸಹಜ ಪ್ರವೃತ್ತಿಯಿಂದ ತಾವು ಒಂದು ಶ್ರೇಣಿಯನ್ನು ತಲುಪಿದ್ದೇವೆಂದು ಭಾವಿಸುತ್ತಾರೆ. ಅವರನ್ನು ಇನ್ನು ಮುಂದೆ ಮಕ್ಕಳಂತೆ ಕಾಣುವ ಅಗತ್ಯವಿಲ್ಲ. ಅವರನ್ನು ಸಂಗಾತಿಯಂತೆ ಕಾಣಬೇಕಾಗುವುದು.ಅವರ ಮೇಲೆ ಯಾವ ರೀತಿಯ ಅಧಿಕಾರವನ್ನು ಚಲಾಯಿಸದೆ ಅವರನ್ನು ವಿನಂತಿಸಿ ಕೊಳ್ಳಬೇಕಾಗುವುದು. ಅವರು ಸಂಪಾದಿಸುವ ಹಣದ ಖರ್ಚುವೆಚ್ಚಗಳ ಬಗ್ಗೆ ಕಟ್ಟುನಿಟ್ಟಾಗಿ ಪ್ರಶ್ನಿಸದೆ ಹಿಂದಿಗಿಂತ ಹೆಚ್ಚಾಗಿ ಅವರ ನಿರ್ಣಯಗಳಿಗೆ, ವ್ಯಕ್ತಿತ್ವಕ್ಕೆ ಅನುಮತಿಸಬೇಕಾಗುತ್ತದೆ. ಪ್ರೀತಿಸುವ, ಬುದ್ಧಿವಂತ ಮತ್ತು ನ್ಯಾಯನಿಷ್ಟ ತಂದೆತಾಯಿಗಳು ಪ್ರಬುದ್ಧತೆಯ ಈ ಹಕ್ಕುಗಳನ್ನು ಮೀರುವ ಪ್ರಯತ್ನಮಾಡಬಾರದು. ಬದಲಾಗಿ ಅಂತಹ ಸಮಯದಿಂದ ಮಕ್ಕಳೊಂದಿಗೆ ಸ್ವಂತ ತಮ್ಮ ಅಥವಾ ತಂಗಿಯೊಂದಿಗೆ – ಸಲಹೆಗಾರರಂತೆ ಅಥವಾ ಉತ್ತಮ ಸ್ನೇಹಿತರಂತೆ ವರ್ತಿಸಬೇಕಾಗುವುದು. ಒಳ್ಳೆಯ ತಂದೆತಾಯಿಗಳು ಕೆಲವೊಮ್ಮೆ ಈ ವಿಷಯದಲ್ಲಿ ಬುದ್ಧಿಹೀನರಂತೆ ಮತ್ತು ಅನ್ಯಾಯಗಾರರಂತೆ ವರ್ತಿಸುತ್ತಾರೆ ಮತ್ತು ಈವರೆಗೆ ಮಕ್ಕಳು ಗ್ರಹಿಸಿದ ಅಧಿಕಾರದ ದುರುಪಯೋಗ ಪಡಿಸಿಕೊಳ್ಳುತ್ತಾರೆ. ಅವರು ಮಕ್ಕಳ ನೂತನ ಪುರುಷ ಅಥವಾ ಸ್ತ್ರೀಯ ಸ್ಥಿತಿಯನ್ನು ಅಲಕ್ಷಿಸುತ್ತಾರೆ ಮತ್ತು ತಮ್ಮ ಆಜ್ಞಾರ್ಥಕವಾಗಿದ್ದ ಅಧಿಕಾರವನ್ನು ಹಿಂದಿನಂತೆ ಈಗಲೂ ಶಾಶ್ವತಗೊಳಿಸಲು ಪ್ರಯತ್ನಿಸುತ್ತಾರೆ. ಕೆಲವೊಮ್ಮೆ ಇದಕ್ಕೆ ಜಯ ದೊರೆಯುತ್ತದೆ. ಆದರೆ ಇದು ಎಂದಿಗೂ ಅವರ ಅಥವಾ ಅವರ ಮಕ್ಕಳ ಪ್ರಯೋಜನಾರ್ಥವಾಗಿರುವುದಿಲ್ಲ ಎಂದು ನಾವು ನಂಬುತ್ತೇವೆ. ಮಕ್ಕಳ ನಮ್ರತೆಯನ್ನು ತಾವು ದುರಪಯೋಗ ಪಡಿಸಿಕೊಳ್ಳುತ್ತಿದ್ದೇವೆಂದು ಅವರಿಗೂ ತಿಳಿದಿದೆ, ಅವರ ಮಕ್ಕಳಿಗೂ ಇದರ ಅರಿವಿದೆ. ಮಕ್ಕಳು ಒಂದು ವೇಳೆ ತಿರುಗಿ ಬೀಳಲು ಸಿದ್ಧರಾದಲ್ಲಿ ಸಂಗತಿಗಳು ಬೇರೆ ರೀತಿಯಲ್ಲಿ ತ್ವರಿತವಾಗಿ ಕ್ರಮಪಡಿಸಲಾಗುತ್ತದೆ. ಅವರು ಅನುಸರಿಸುತ್ತಿರುವ ಕ್ರಮವು ಅವರ ಬಗ್ಗೆ ಮಕ್ಕಳಿಗಿರುವ ನಿಜವಾದ ಮಮತೆಗೆ ಧಕ್ಕೆಯುಂಟುಮಾಡುವುದಾಗಿದೆ ಎಂದು ತಿಳಿದುಕೊಳ್ಳತಕ್ಕದ್ದು. ಮಕ್ಕಳು ತಮ್ಮ ತಂದೆತಾಯಿಗಳ ನಡತೆಯಲ್ಲಿ ಕಂಡುಬರುವ ಸ್ವಾರ್ಥತೆ ಮತ್ತು ಅನ್ಯಾಯವನ್ನು ಕಾಣುತ್ತಾರೆ. ಈ ಮೊದಲು ಈ ಚಿತ್ತವೃತ್ತಿಯನ್ನು ಅವರು ವಿಭಿನ್ನವಾಗಿ ಗುರುತಿಸಿದ್ದರು. ಮಕ್ಕಳ ಮೇಲಿನ ಉಚಿತವಾದ ಪ್ರೀತಿಯನ್ನು ಬೇರಿನ ಮಟ್ಟದಲ್ಲಿಯೇ ಸತ್ವಹೀನಗೊಳಿಸಿದಂತಾಗುತ್ತದೆ. ತಂದೆತಾಯಿಗಳು ಅಂತಹ ಕ್ರಮವು ತಾತ್ಕಾಲಿಕವಾಗಿ ಜಯಪಡೆದರೂ ಸಾಯುವುದರೊಳಗಾಗಿ ತಮ್ಮ ತಪ್ಪನ್ನು ತಿಳಿದುಕೊಳ್ಳಬೇಕು. ಪ್ರಭುದ್ಧತೆಯ ವರ್ಷಗಳು ತಲಪುತ್ತಿದ್ದಂತೆಯೇ ತಂದೆತಾಯಿಗಳ ಬಗ್ಗೆ ಅವರಿಗಿರಬೇಕಾದ ಹಂಗು ಮುಗಿದುಹೋಗುವುದು ಎಂಬ ಅರ್ಥವನ್ನು ನೀಡುತ್ತಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಾವು ಪ್ರಪಂಚದ ನಾಗರೀಕ ಕಾನೂನುಗಳೊಂದಿಗಿರುವ ಸಾಮರಸ್ಯವನ್ನು ಎತ್ತಿಹಿಡಿಯುತ್ತೇವೆ. ಇದರ ಪ್ರಕಾರ ತಂದೆತಾಯಿಗಳು ಬದುಕಿರುವವರೆಗೆ ಮಕ್ಕಳು ಅವರ ಪಾಲನೆಗೆ ಬದ್ಧರಾಗಿರುತ್ತಾರೆ. ಮಕ್ಕಳು ಅವರ ಅಗತ್ಯತೆಗಳನ್ನು ಒದಗಿಸುವ ಶಕ್ತಿ ಹೊಂದಿಕೊಳ್ಳುತ್ತಾರೆ. ನಮ್ಮ ವಾದವೇನೆಂದರೆ, ಮಕ್ಕಳ ಪ್ರಭುದ್ಧತೆಗೆ ಮುನ್ನ ತಂದೆತಾಯಿಗಳಿಗೆ ತಮ್ಮ ಮಕ್ಕಳ ಮೇಲೆ ಪೂರ್ಣ ನಿಯಂತ್ರಣವಿರುತ್ತದೆ. ಪ್ರಭುದ್ಧತೆ ಪಡೆದ ಮಕ್ಕಳಿಗೆ ಸ್ವಂತ ವ್ಯಕ್ತಿತ್ವ, ವ್ಯಕ್ತಿ ವೈಶಿಷ್ಟತೆ ಇವುಗಳು ಇರುತ್ತವೆ. ಇದನ್ನು ನಾವು ಗುರುತಿಸಿ ಇವುಗಳಿಗೆ ಮೊರೆಹೋಗಬೇಕು. ತಂದೆತಾಯಿಗಳಿಗೆ ಬೇಕಾದುದನ್ನು ಒದಗಿಸುವುದು ಮಕ್ಕಳ ಕರ್ತವ್ಯ ಮತ್ತು ಇವುಗಳನ್ನು ಅವರು ನಿಷ್ಠೆಯಿಂದಲೂ, ಪ್ರೀತಿಯಿಂದಲೂ ಒದಗಿಸಬೇಕು. ಪ್ರಾಯದ ತಂದೆತಾಯಿಗಳಿಗೆ ಬೇಕಾದ ಸಹಾಯಗಳನ್ನು ಒದಗಿಸುವುದು ಅದೇ ತಂದೆತಾಯಿಗಳು ತಮ್ಮ ಮಕ್ಕಳಿಗೆ ಅವರ ಬಾಲ್ಯಪ್ರಾಯದಲ್ಲಿ ತೋರಿದ ಪಾಲನೆ ಮತ್ತು ಒದಗಿಸಿಕೊಟ್ಟ ಸಹಾಯಗಳಿಗೆ ಅನುಸಾರವಾಗಿಯೇ ಇರುತ್ತವೆ. ನ್ಯಾಯವಾದ ರೀತಿಯಲ್ಲಿ ಮಕ್ಕಳಿಗೆ ಒದಗಿಸುವ ಸಾಮರ್ಥ್ಯವುಂಟಾಗುವಾಗ ಅದನ್ನು ಪ್ರೀತಿಪೂರ್ವಕವಾಗಿ ಪಾಲಿಸಿದ ತಂದೆತಾಯಿಗಳನ್ನು ಖಂಡಿತವಾಗಿಯೂ ಬಹಳ ಅಪರೂಪವಾಗಿ ಅವರಿಗೆ ಕೊರತೆಯನ್ನುಂಟುಮಾಡುತ್ತಾರೆ.

ನಾವು ಮಕ್ಕಳ ಬಗ್ಗೆ ತಂದೆತಾಯಿಗಳ ಕರ್ತವ್ಯಗಳನ್ನು ಪರಿಗಣಿಸುವಾಗ, ಸೂಕ್ತವಾದ ವಿದ್ಯಾಭ್ಯಾಸ, ಮನಸ್ಸಿನಲ್ಲಿ

ತುಂಬಿರುವ ವಿಚಾರಗಳಿಗೆ ತಕ್ಕಂತೆ ಓದಿನ ವಿವೇಚನಾಪೂರ್ವಾಕವಾದ ನಿಯಂತ್ರಣ ಇವೇ ಮುಂತಾದ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ನಾವು ವಿದ್ಯಾಭ್ಯಾಸದ ಮೌಲ್ಯವನ್ನು ಹೆಚ್ಚಾಗಿ ಮೆಚ್ಚುವವರು. ಆದರೂ ನಾವು ವಿದ್ಯಾಭ್ಯಾಸದಲ್ಲಿ ಅಡಕವಾಗಿರಬೇಕಾದ ವಿಚಾರಗಳಿಗೆ ಹೆಚ್ಚು ಬುದ್ಧಿವಂತಿಕೆಯನ್ನು ಬಳಸಬೇಕೆಂದು ನಂಬುತ್ತೇವೆ. ವಿದ್ಯಾಭ್ಯಾಸವು ಹೊಳಪುನೀಡುವ ಸಾಧನದಂತಿದೆ. ಯಾವುದೇ ಕಲ್ಲನ್ನಾದರೂ ಜಾಗರೂಕತೆಯಿಂದ ಮೆರಗಿಸಿ ಸುಂದರವಾಗಿ ಕಾಣುವಂತೆ ಮಾಡಬಹುದಾಗಿದೆ. ಆದರೆ ಈ ಜಾಗರೂಕತೆಯ ಮೆರಗಿಸುವಿಕೆಯು ಎಲ್ಲಾ ಕಲ್ಲುಗಳಿಗೂ ಒಂದೇ ರೀತಿಯಲ್ಲಿ ಉಪಯುಕ್ತ ಅಥವಾ ಸಹಾಯಕವಾಗಿರುವುದಿಲ್ಲ. ವಜ್ರ, ಮಾಣಿಕ್ಯ ಅಥವಾ ಬೇರೆ ಯಾವುದೇ ಬೆಲೆಬಾಳುವ ಹರಳುಗಳಿಗೆ ಮೆರಗಿಸುವಿಕೆಯು ಅದರಲ್ಲಿ ಹುದುಗಿರುವ ಶ್ರೇಷ್ಠ ಗುಣವನ್ನು ಹೊರತರಲು ಅತ್ಯಗತ್ಯ; ಅನೇಕ ಮುಖಗಳಿಲ್ಲದೆ (ಅಥವಾ ಪಟ್ಟೆಗಳಿಲ್ಲದೆ) ಹರಳಿನ ಭವ್ಯತೆ ಮತ್ತು ಹೊಳಪನ್ನು ಮೆಚ್ಚಿಕೊಳ್ಳುವಂತಿಲ್ಲ ಅಥವಾ ಅದರ ಬಗೆಗಿನ ಆಸೆಯನ್ನು ತೋರೆಯುವಂತಿಲ್ಲ. ಆದರೆ ರಸ್ತೆಯಲ್ಲಿ ಬಿದ್ದ ಸಾಧಾರಣವಾದ ಚಮ್ಮಾರನ ಕಲ್ಲಿಗೆ ಅಂತಹ ಮೆರಗನ್ನು ನೀಡಲು ಪ್ರಯತ್ನಿಸಿದರೆ ಅದು ವ್ಯರ್ಥಶ್ರಮವೇ ಸರಿ; ಇದಕ್ಕೂ ಕೆಡುಕಾಗಿ ಅದನ್ನು ಕೇವಲ ಚಮ್ಮಾರನ ಕಲ್ಲನ್ನಾಗಿ ಮಾತ್ರವೇ ಉಪಯೋಗಿಸಬಹುದು. ಇದಕ್ಕೂ ಹೆಚ್ಚಾಗಿ ನುಣುಪಿನ ಕಾರಣ ಅದು ತನ್ನ ಕಾರ್ಯಕ್ಕೆ ಕಡಿಮೆ ಯೋಗ್ಯವಾಗಿಬಿಡುತ್ತದೆ ಮತ್ತು ಅದನ್ನು ಅದರ ಸ್ಥಳಕ್ಕೆ ಸರಿದೂಗಿಸಲು ಪುನಃ ಕೆತ್ತಬೇಕಾಗುತ್ತದೆ.

ನಾವಿದನ್ನು ವಿದ್ಯಾಭ್ಯಾಸದ ಬಗ್ಗೆ ಮನಸ್ಸನ್ನು "ಶಾಸ್ತ್ರೀಯ ಕ್ರಮ"ದಲ್ಲಿ ಮಹಾ ವಿದ್ಯಾಲಯಗಳಲ್ಲಿ ಮೆರಗುಗೊಳಿಸಲು ಅವಲೋಕಿಸುತ್ತೇವೆ. ಅಂತಹ ಕ್ರಮದಿಂದ ಕೆಲವರು ಮಾತ್ರವೇ ಲಾಭ ಹೊಂದಿಕೊಳ್ಳುತ್ತಾರೆ, ಆದರೆ ಮತ್ತೆ ಕೆಲವರು ಇದರಿಂದ ಹಾನಿಗೊಳ್ಳುತ್ತಾರೆ. ಈ ರೀತಿಯಲ್ಲಿ ವಿದ್ಯಾಭ್ಯಾಸ ಹೊಂದಿದವರು ಅವರ ಸ್ವಾಭಾವಿಕ ಪ್ರತಿಭೆಗೆ ಯೋಗ್ಯವಾದ ಸ್ಥಾನವನ್ನು ಅಲಂಕರಿಸಿಲ್ಲವೆಂದು ನೋಡದೇ ಇರುವ ಮನುಷ್ಯರು ಯಾರಿದ್ದಾರೆ? ಅವರು ಅತಿಯಾದ ವಿದ್ಯಾಭ್ಯಾಸವನ್ನು ಮಾಡಿದವರಾಗಿದ್ದಾರೆ. ಸಾಮ್ಯದಲ್ಲಿ ಹೇಳಿರುವ ವ್ಯಕ್ತಿಗಳಂತೆ, ಅವರು ಅಗೆಯಲಾರರು, ಭಿಕ್ಷೆ ಬೇಡಲು ಅವರಿಗೆ ನಾಚಿಕೆ. ಮತ್ತೆ ಯಾವುದಕ್ಕೂ ಅವರು ಯೋಗ್ಯರಲ್ಲ. ದೇವರ ಕೃಪೆಯಲ್ಲಿ, ತಂದೆತಾಯಿಗಳು ತಮ್ಮ ಮಗುವು ಬಹಳಷ್ಟು ಬುದ್ಧಿವಂತ ಎಂದು ತಿಳಿದುಕೊಂಡು, ಅಂಥಹ ಭಾಗ್ಯವು ಅವರ ಕಾರ್ಯಗಳಿಗೆ ಆರ್ಥಿಕ ಮತ್ತಿತರ ಪರಿಗಣನೆಗಳಲ್ಲಿ ಮಾರ್ಗದರ್ಶನ ನೀಡಿ ಆ ಮಗುವಿನ ಕಾಲೇಜು ಶಿಕ್ಷಣಕ್ಕೆ ಅನುವು ಮಾಡಿಕೊಡುವುದಾದಲ್ಲಿ, ಅವರು ಈ ಸೂಚನೆಗಳು ಮಗುವಿನ ಬಗ್ಗೆ ಅವರ ಕರ್ತವ್ಯಗಳಲ್ಲಿ ದೈವಿಕವಾದುದೋ ಅಲ್ಲವೋ ಎಂಬುದನ್ನು ಚೆನ್ನಾಗಿ ಪರಿಗಣಿಸಿ ತಮ್ಮ ನಿಶ್ಚಿತಾಭಿಪ್ರಾಯಕ್ಕೆ ತಕ್ಕಂತೆ ಮುಂದುವರೆಯಬಹುದು. ಪರಂತು, ಪ್ರಸ್ತುತಕಾಲದಲ್ಲಿ ಮಕ್ಕಳನ್ನು ಕಾಲೇಜು ಶಿಕ್ಷಣಕ್ಕೆ ಕಳುಹಿಸಿಕೊಡುವುದರಿಂದ ಅವರು ಬಹಳಷ್ಟು ಕಳವಳ. ಬಹಳಷ್ಟು ಅಂಜಿಕೆ ಅನುಭವಿಸಬೇಕಾಗುವುದು. ಹೀಗಾಗದಿರುವಂತೆ ಈ ಲೋಕ ಜ್ಞಾನದಲ್ಲಿಯ ಬಾಹ್ಯ ಮೆರಗು ತಂದೆತಾಯಿಗಳಾಗಿ ಯೋಗ್ಯ ಬೋಧಕರಾಗಿ ಅವರು ಬಾಲ್ಯಪ್ರಾಯದಿಂದ ಈ ವರೆಗೆ ದಯಪಾಲಿಸಿದ ನಡತೆಯ ಮತ್ತು ನಂಬಿಕೆಯ ಎಲ್ಲಾ ಮೆರಗನ್ನು ತೊಡೆದುಹಾಕುವುದು. ನೂತನ ಸೃಷ್ಟಿಯ ದೇವಜನರು ಹೃದಯ ಮತ್ತು ಗುಣನಡತೆಗಳ ಹಾಗೂ ದೇವರ ಮೇಲಣ ನಂಬಿಕೆಯ ಬಗೆಗಿನ ವಿದ್ಯಾಭ್ಯಾಸವನ್ನು ಈ ಲೋಕದ ಶಾಲೆಗಳಲ್ಲಿ ಪಡೆಯಬಹುದಾದ ಎಲ್ಲಾ ವಿದ್ಯಾಭ್ಯಾಸಗಳಿಗಿಂತಲೂ ಶ್ರೇಷ್ಟವಾದುದೆಂದು ಮೆಚ್ಚಿಕೊಳ್ಳಲು ಕಲಿಯಬೇಕು – "ಮೇಲಣಿನಿಂದ ಬರುವ ಜ್ಞಾನವು, ಮೊದಲು ಪರಿಶುದ್ಧವಾದದ್ದು ಆಮೇಲೆ ಸಮಾಧಾನಕರವಾದದ್ದು, ವಿನಯವುಳ್ಳದ್ದು, ಸಂತೋಷವಾಗಿ ಒಪ್ಪಿಕೊಳ್ಳುವಂಥದ್ದು ಕರುಣೆ ಮುಂತಾದ ಫಲಗಳಿಂದ ತುಂಬಿರುವಂತದ್ದು ಆಗಿದ್ದು" ಈ ಲೋಕದ ಎಲ್ಲಾ ಜ್ಞಾನಗಳಿಗಿಂತ ಹೆಚ್ಚಾಗಿ ಅಪೇಕ್ಷಿಸುವಂತಾದ್ದಾಗಿದೆ. ಅವರು ತಮ್ಮ ಮಕ್ಕಳು ತಮ್ಮ ನಡತೆಯಲ್ಲಿ, ತತ್ವಗಳಲ್ಲಿ, ಕರ್ತನಿಗೆ ಆತನ ವಾಕ್ಯಗಳಿಗೆ ನಿಷ್ಠೆ ತೋರಿಸುವಲ್ಲಿ ಬಲವಾಗಿ ಬೇರೂರಿದ್ದಾರೆಯೋ ಎಂಬುದನ್ನು ಪರಿಗಣಿಸಬೇಕು. ನಮ್ಮ ಇಂದಿನ ಶಾಲೆಗಳ ಧರ್ಮನಿಂದಕವಾದ ಧೋರಣೆಗಳು ಹೆಚ್ಚಾದ ಟೀಕೆಗಳು, ಭಧ್ರವಾಗಿ ನೆಲೆಗೊಂಡ ವಿಕಸನ ಮುಂತಾದ ತರ್ಕಬದ್ಧ ಬೋಧನೆಗಳು ಕರ್ತನ ಮತ್ತು ಆತನ ವಾಕ್ಯಗಳ ಮೇಲಿನ ವಿಶ್ವಾಸದಿಂದ ನಮ್ಮನ್ನು ಅಗಲಿಸಲಾರವು. ಆದರೆ ನಿಜವಾಗಿ ಹೇಳುವುದಾದರೆ ನಾವು ನಮ್ಮ ಸಾರ್ವಜನಿಕ ಶಾಲೆಗಳಲ್ಲಿ ಮತ್ತು ಪ್ರೌಢಶಾಲೆಗಳಲ್ಲಿ ನೀಡುವ ಅಂತಹ ಶಿಕ್ಷಣಕ್ಕೆ ಸುಲಭವಾಗಿ ಬಾಗುವ ಗಂಡಾಂತರವಿದೆ.

ಲೌಕಿಕ ಮನಸ್ಸುಳ್ಳವರಿಗೆ ಈ ಬುದ್ಧಿಮಾತುಗಳು ಅತ್ಯಂತ ಮೂರ್ಖತನದಿಂದ ಅಥವ ಕೆಟ್ಟತನದಿಂದ ಕೂಡಿದ್ದಾಗಿದೆ ಎಂದು ನಾವು ಪೂರ್ಣ ಪ್ರಜ್ಞೆಯುಳ್ಳವರಾಗಿ ಬರೆಯುತ್ತೇವೆ. ಆದಾಗ್ಯೂ, ನಾವು ನಂಬಿರುವ ದೈವಿಕ ದೃಷ್ಟಿಕೋನದ ಮೂಲಕ ಈ ಸಂಗತಿಗಳನ್ನು ನೋಡಲು ನಾವು ಕಲಿತಿದ್ದೇವೆ ಮತ್ತು ದೈವ ಪ್ರತಿಷ್ಠಿತರಾದ ಎಲ್ಲಾ ಜನರೂ ಇದರಂತೆ ಸಾಹಸಪಡಬೇಕು ಮತ್ತು ಎಲ್ಲಾ ವಿಷಯಗಳಲ್ಲಿ ದೈವಿಕ ದೃಷ್ಟಿಕೋನವನ್ನು ಬಯಸಬೇಕು ಎಂದು ನಾವು ಶಿಪಾರಸ್ಸು ಮಾಡುತ್ತೇವೆ. ನಾವೀಗ ಜೀವಿಸುತ್ತಿರುವ ಪರಿಶ್ರಮದ ಸಮಯದಲ್ಲಿ, ನಮ್ಮ ದಿನಗಳ ನುಗ್ಗಾಟ ಜಗ್ಗಾಟಗಳ ಮಧ್ಯೆ, 21 ವರ್ಷಗಳವರೆಗೆ ಶಾಲೆಯಲ್ಲಿ ಕಳೆದ ವ್ಯಕ್ತಿಯು ಜೀವನದ ಚಟುವಟಿಕೆಗಳಿಗಾಗಿ ಒಪ್ಪಹಾಕಲಟ್ಟವನು ಮತ್ತೊಂದು ರೀತಿಯ ಶಾಲೆಯನ್ನು ಕಳಕೊಂಡಿದ್ದಾನೆ. ಅದ್ಯಾವುದೆಂದರೆ, 14 ಅಥವಾ 15 ವರ್ಷ ಪ್ರಾಯದಲ್ಲಿ ತನ್ನ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮುಗಿಸಿ, ಯಾವುದಾದರೂ ವ್ಯಾಪಾರದಲ್ಲಿ ತರಬೇತು ಪಡೆದು ಒಂದು ರೀತಿಯಲ್ಲಿ ಏಣಿ ಹತ್ತುತ್ತಿರುವ ಮತ್ತೊಬ್ಬ ಹುಡುಗನು ಪಡೆದ ತರಬೇತಿಯನ್ನು ಈತನು ಪಡೆಯದೇ ಹೋಗಿದ್ದಾನೆ. ಆ ಹುಡುಗನು ಆರುವರ್ಷಗಳ ಕಾಲ ವ್ಯಾಪಾರವೃತ್ತಿಯಲ್ಲಿ ಪಳಗಿದ ನಂತರ ಆತನು ಅಷ್ಟೇ ವರ್ಷಗಳ ಕಾಲ ಕಾಲೇಜು ಶಿಕ್ಷಣ ಪಡೆದ ಮತ್ತೊಬ್ಬ ವಿದ್ಯಾರ್ಥಿಗಿಂತ ಹೆಚ್ಚಾಗಿ ಪ್ರಸ್ತುತ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುತ್ತಾನೆ.

**ಆಟದ ಬಗ್ಗೆ :** ಆಟದ ಒಂದು ಮುಖ್ಯವಾದ ಸವಲತ್ತು ಏನೆಂದರೆ ಅದರೊಂದಿಗಿರುವ ಉಲ್ಲಾಸಕರ ವ್ಯಾಯಾಮ. ಮನಸ್ಸಿಲ್ಲದೆ ಒತ್ತಾಯದಿಂದ ಮಾಡುವ ವ್ಯಾಯಾಮಕ್ಕಿಂತ ಉಲ್ಲಾಸಕರ ವ್ಯಾಯಾಮವು ಹೆಚ್ಚು ಲಾಭಕರವೆಂಬುದು

ನಿರ್ವಿವಾದವಾದ ಸತ್ಯ. ನಮ್ಮ ವ್ಯವಸ್ಥೆಯಲ್ಲಿರುವ ತಿಳಿಯದ ಯಾವುದೇ ರಸಾಯನ ಕ್ರಿಯೆಯಿಂದ ನಮ್ಮ ಮನಸ್ಸು ಮತ್ತು ಮನೋಭಾವಗಳು ಜೀವನದ ಎಲ್ಲಾ ಕಾರ್ಯಗಳನ್ನು ನಡೆಸಬೇಕಾಗುತ್ತದೆ. ನಮ್ಮ ಸಂತೋಷ ಮನೋಭಾವನೆಗಳು ಎಲ್ಲಾ ಶಕ್ತಿ ಮತ್ತು ಕಾರ್ಯಗಳೊಂದಿಗೆ ಉತ್ತಮವಾಗಿ ಸಹಕರಿಸಿ ನಮ್ಮ ವ್ಯವಸ್ಥೆಯನ್ನು ಎತ್ತಿಹಿಡಿದು ಅನಾವಶ್ಯಕವಾದವುಗಳನ್ನು ಸರಿಪಡಿಸುವುದಾಗಿದೆ. ಆದರೆ ಮನವೊಪ್ಪದ ದುಡಿತವು ಸಹಾಯಕವೆಂದು, ಉಲ್ಲಾಸ ಮತ್ತು ಆಟವು ನಿಷ್ಪ್ರಯೋಜಕವೆಂದು ಆಗ್ರಹಪಡಿಸುವುದು ತಪ್ಪಾದ ಕಲ್ಪನೆಯಾಗಿದೆ. ಈ ವಿಷಯಕ್ಕೆ ಸಂಬಂಧಿಸಿದ ತಪ್ಪು ಅಭಿಪ್ರಾಯಗಳು ಹಲವಾರು ವಿವೇಚನಾಯುಕ್ತರಿಗೆ ವಿನೋದ ಮತ್ತು ಸೋಮಾರಿತನವನ್ನು ಉಂಟುಮಾಡಿದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಅವರು ಈ ದೆಸೆಯಲ್ಲಿ ಬಿದ್ದುಹೋದ ಸ್ವಭಾವಗಳ ಸ್ವಾಭಾವಿಕ ಪ್ರವೃತ್ತಿಯನ್ನು ಪ್ರತಿಭಟಿಸಬಹುದಿತ್ತು. ಶಿಶುವಿಹಾರ ಕ್ರಮವು ತುಲನಾತ್ಮಕವಾಗಿ ಇತ್ತೀಚಿನ ಕಾಲದಲ್ಲಿ ಸರಿಯಾದ ಮಾರ್ಗವೆಂದು ಇದರ ಶಿಕ್ಷಣವು ಮಕ್ಕಳನ್ನು ಹೆಚ್ಚು ಉಲ್ಲಾಸಿತರನ್ನಾಗಿ ಮಾಡುತ್ತದೆಂದು ನಾವು ಅಭಿಪ್ರಾಯ ಪಡುತ್ತೇವೆ. ನಂತರದಲ್ಲಿ ಬರುವ ಹಾಗೂ ಬುದ್ಧಿವಂತ ತಂದೆತಾಯಿಗಳು ವಿಶೇಷವಾಗಿ ಮೆಚ್ಚಿಕೊಳ್ಳುವ ಸಕಲ ಉಲ್ಲಾಸವು ಸ್ವಲ್ಪಮಟ್ಟಿಗೆ ಅದೇ ಪಥದಲ್ಲಿದ್ದು ಕೇವಲ ಸಮಯ ಮತ್ತು ಚೈತನ್ಯವನ್ನು ವ್ಯರ್ಥಮಾಡುವ ಯಾವುದನ್ನೂ ಸ್ವೀಕರಿಸಲಾಗದು.

ವಿಶ್ರಾಂತಿ ಮತ್ತು ವಿನೋದಗಳು ಮುಖ್ಯವಾಗಿ ವೃತ್ತಿಯನ್ನು ಬದಲಾಯಿಸುವುದರಿಂದ ಉಂಟಾಗುವುದೇ ಹೊರತು ಸೋಮಾರಿತನದಿಂದಾಗಲೀ, ವ್ಯರ್ಥವಾದ ಅಭ್ಯಾಸದಿಂದಾಗಲೀ ದೊರೆಯದು. ಚಿಕ್ಕ ಬಾಲಕಿಯು ತನ್ನ ಗೊಂಬೆಯನ್ನು ಶೃಂಗರಿಸುವಲ್ಲಿ, ಅದರ ಪಾಲನೆಯಲ್ಲಿ ಮತ್ತು ಮನೆ ಆಟ ಆಡುವುದರಲ್ಲಿ ಆನಂದಿಸುತ್ತಾಳೆ. ಚಿಕ್ಕ ಬಾಲಕನು "ಅಂಗಡಿ ಆಟ'ದಲ್ಲಿ ದುಡ್ಡಿಗೆ ಬದಲಾಗಿ ಮಣ್ಣು, ಕಲ್ಲುಗಳನ್ನು ಇಟ್ಟುಕೊಂಡು ಚಹಾ, ಕಾಫಿ ಮತ್ತು ಸಕ್ಕರೆ ಮುಂತಾದವುಗಳ ಊಹನಾ ವ್ಯಾಪಾರದಲ್ಲಿ ತನ್ನನ್ನು ತೊಡಗಿಸಿಕೊಂಡೋ ಇಲ್ಲವೇ "ಆಟದ ಕುದುರೆ' ಆಡುವುದರಲ್ಲಿ ಇಲ್ಲವೆ ತನ್ನನ್ನು ಒಬ್ಬ ಬೋಧಕನನ್ನಾಗಿ, ಸುವಾರ್ತಿಕನಾಗಿ ಇಲ್ಲವೇ ಒಬ್ಬ ಉಪಾಧ್ಯಾಯನಾಗಿ ಅಥವಾ ವೈದ್ಯನನ್ನಾಗಿ ಭಾವಿಸಿಕೊಂಡು ಅದರಂತೆ ನಟಿಸುವುದರ ಮೂಲಕ ಆನಂದಿಸುತ್ತಾನೆ. ಇವೆಲ್ಲಾ ಆಟಗಳು ಸರಿಯಾದ ಮಾರ್ಗದಲ್ಲಿಯೇ ಅವೆ ಮತ್ತು ಚಿಕ್ಕವರನ್ನು ಇದರಲ್ಲಿ ಪ್ರೋತ್ಸಾಹಿಸಬೇಕು. ಅವರು ಬೆಳೆದಂತೆಲ್ಲಾ ಅವರ ಗಮನವನ್ನು ಅವರ ಮನರಂಜನೆಯ ಭಾಗವೆಂದು ಪರಿಗಣಿಸಲ್ಪಟ್ಟಿರುವ ಇವುಗಳಿಂದ ಬೇರೆಡೆ ತಿರುಗಿಸಿ, ಮನೆ ಕ್ರಮ ಪಡಿಸುವುದರಲ್ಲಿ ಅಥವಾ ನಿಜವಾದ ದಾಸ್ತಾನು ಮಳಿಗೆ ಅಥವಾ ಅಂಗಡಿಯನ್ನು ಜೋಡಿಸುವುದು ಮುಂತಾದವುಗಳಲ್ಲಿ ಅವರು ತಮ್ಮ ತಂದೆತಾಯಿಗಳಿಗೆ ಅಥವಾ ಇತರ ಪೋಷಕರುಗಳಿಗೆ, ಇತರರಿಗೆ ಸಹಾಯ ಮಾಡುವಂತೆ ಅವರನ್ನು ತೊಡಗಿಸಿಕೊಳ್ಳಬೇಕು. ಅವರು ಈ ರೀತಿಯಾಗಿ ಆರ್ಥಿಕವಾಗಿ ಅಥವಾ ಬೇರೆ ರೀತಿಯ ಉಪಯೋಗದಲ್ಲಿ, ಸಹಾಯದಲ್ಲಿ ಆನಂದಿಸುವುದನ್ನು ಕಲಿಯುವುದಾದರೆ, ಸೋಮಾರಿತನವು ಪಾಪ ಮತ್ತು ನಾಚಿಕೆಗೇಡು, ಯಾವುದೇ ವ್ಯಕ್ತಿಗೂ ಕಳಂಕವನ್ನು ತರುವಂತಾದ್ದು ಮತ್ತು ಅದರಿಂದ ಒಳ್ಳೆಯ ಅವಕಾಶಗಳು ವ್ಯರ್ಥವಾಗುತ್ತದೆಂದು ಅವರಿಗೆ ಕಲಿಸಿದರೆ ಅವರು ಜೀವನದಲ್ಲಿ ಎದುರಿಸಬೇಕಾಗುವ ಕರ್ತವ್ಯಗಳಿಗೆ ಉತ್ತಮವಾದ ಸಂತೋಷಕರ ಮನೋವೃತ್ತಿಯನ್ನು ಹೊಂದಿಕೊಳ್ಳುತ್ತಾರೆ ಮತ್ತು ಚೆಂಡಾಟವನ್ನು ನೋಡುವಲ್ಲಿ ತಮ್ಮ ಹಣ ಮತ್ತು ಸಮಯವನ್ನು ವ್ಯರ್ಥಮಾಡುವುದರಲ್ಲಿ ಅಥವಾ ಇದೇ ರೀತಿಯಲ್ಲಿ ಮೂರ್ಖತನದಿಂದ ಲಾಭವಿಲ್ಲದ ಕಾರ್ಯಗಳಲ್ಲಿ ತೊಡಗಿರುವವರನ್ನು ಕಂಡು ಅಸೂಯೆಪಡುವುದಿಲ್ಲ.

ಸಮಯದ ಬೆಲೆಯ ಮತ್ತು ಇತರ ಮೂಲಗಳ ಬಗ್ಗೆ ಸ್ವಾರ್ಥತೆಯನ್ನು ಬೆಳೆಸಿಕೊಳ್ಳುವಂತೆ ಅಲ್ಲ, ಅದನ್ನು ವ್ಯರ್ಥಮಾಡದೆ ದೇವರ ಚಿತ್ತಾನುಸಾರವಾಗಿ ಕಳೆಯುವಂತೆ ಮನಕ್ಕೆ ನಾಟುವಂತೆ ಚಿಕ್ಕ ಪ್ರಾಯದಲ್ಲಿಯೇ ಬೋಧಿಸಬೇಕು. ಪ್ರಭುವು ಸಹಸ್ರಾರು ಮಂದಿಗೆ ಅದ್ಭುತ ರೀತಿಯಲ್ಲಿ ಊಟ ನೀಡಿದ ನಂತರ ಉಳಿದದ್ದು ವ್ಯರ್ಥವಾಗದಂತೆ ಕೂಡಿಸುವಂತೆ ತನ್ನ ಶಿಷ್ಯರಿಗೆ ಹೇಳಿದನು. ಈ ರೀತಿಯಲ್ಲಿ ಆತನು ಈ ಬಗ್ಗೆ ಯಾವುದೂ ವ್ಯರ್ಥವಾಗಬಾರದೆಂಬ ತನ್ನ ಮನಸ್ಸಿನ ಆಲೋಚನೆಯನ್ನು ಸೂಚಿಸಿದ್ದಾನೆ. ಹೀಗಾಗಿ ನಾವು ಸಹಾ ಎಲ್ಲಾ ಕ್ಷಣಗಳಲ್ಲಿ ಪ್ರತಿಯೊಂದು ಕಾಸಿಗೂ, ಪ್ರತಿದಿನಕ್ಕೂ ಆತನಿಗೆ ಜವಾಬ್ದಾರಿಯುಳ್ಳವರಾಗಿದ್ದೇವೆ. ಈ ಜವಾಬ್ದಾರಿಯು ನಮ್ಮನ್ನು ಹೆದರಿಕೆಯಲ್ಲಿಡುವುದಲ್ಲ, ಆದರೆ ದೇವರ ಚಿತ್ತವನ್ನು ತಿಳಿಯುವುದರಲ್ಲಿ ನಮ್ಮನ್ನು ಸಂತೋಷಪಡಿಸುವುದಾಗಿದೆ. ಮತ್ತು ಸಾಧ್ಯವಾದಷ್ಟು ಸಂಪೂರ್ಣವಾಗಿ ಅದಕ್ಕೆ ತಕ್ಕ ರೀತಿಯಲ್ಲಿ ನಡೆದುಕೊಳ್ಳುವಂತೆ ಮಾಡುತ್ತದೆ. ಇಂತಹ ಕ್ರಮವು ದೇವರನ್ನು ಸಂಪ್ರೀತಿಗೊಳಿಸುತ್ತದೆ ಎಂಬ ಗ್ರಹಿಕೆಯುಂಟಾಗುತ್ತದೆ. ಆದುದರಿಂದ ನಾವಿದರಲ್ಲಿ ಸಂಪೂರ್ಣ ಸಂತೋಷ ಪಡಕೊಳ್ಳಬಹುದಾಗಿದೆ.

## ಮಕ್ಕಳ ಮನಸ್ಸನ್ನು ಯೋಗ್ಯರೀತಿಯಲ್ಲಿ ಬಳಸಿಕೊಳ್ಳುವುದು

### The Proper Exercise of the Child-Mind

ಮಕ್ಕಳು ಬೆಳೆಯುತ್ತಾ ಈ ಲೋಕದಲ್ಲಿ ಎಷ್ಟೊಂದು ಕಲಿಯಲು ಉಂಟೆಂದು ಗ್ರಹಿಸಿಕೊಳ್ಳುವಾಗ ಅವರನ್ನು ಓದಲು ಹುರಿದುಂಬಿಸಬೇಕು. ಆದರೆ, ಮೊದಲಿನಿಂದಲೇ ಅವರಿಗೆ ಕಲ್ಪನಾ ಕಥೆಗಳು, ಎಣಿಕೆಯ ಬಿಲ್ಲೆ ಮತ್ತು ಜ್ಞಾನದ "ಸೇಬು' ಇವುಗಳಲ್ಲಿನ ವ್ಯತ್ಯಾಸವನ್ನು ತಿಳಿದುಕೊಳ್ಳಲು ಕಲಿಸಬೇಕು. ಆತನ ಮನಸ್ಸಿನಲ್ಲಿ ಶೇಖರಣೆಗೊಂಡ ಪ್ರತಿಯೊಂದು ಬಿಲ್ಲೆಯೂ ಬೆಲೆಯಿಲ್ಲದಷ್ಟು ಕೆಟ್ಟದ್ದು, ಹಾನಿಕರವಾದುದೂ, ಆತಂಕವುಂಟುಮಾಡುವುದೂ ಆಗಿದೆಯಲ್ಲದೆ ಅದರೊಂದಿಗೆ ಜೀವನದ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅವಶ್ಯವಾದ ಜ್ಞಾನವನ್ನು ಶೇಖರಣೆಗಾಗಿ ಉಪಯೋಗ ಮಾಡಬಹುದಾಗಿದ್ದ ಅಮೂಲ್ಯ ಸಮಯವನ್ನು ಹಾಳುಮಾಡುವಂತಾದ್ದು ಎಂಬುದನ್ನು ಆತನಿಗೆ ತೋರಿಸಿಕೊಡತಕ್ಕದ್ದು. ಅವರು ಉತ್ತಮ ಮಾಹಿತಿಗಳನ್ನು ಒದಗಿಸುವ ಪುಸ್ತಕಗಳನ್ನಷ್ಟೇ ಓದುವಂತೆ ಪ್ರೋತ್ಸಾಹಿಸಬೇಕೇ ಹೊರತು ಗೊಡ್ಡು ಕಾದಂಬರಿಗಳನ್ನಲ್ಲ. ಅವರು ತಮ್ಮ ದೇಶದ ಇತಿಹಾಸಕ್ಕೆ ತಕ್ಕ ಗೌರವ ಕೊಡಲು ತಿಳಿದಿರಬೇಕು ಮತ್ತು ಪ್ರಪಂಚದ ಉಳಿದ ದೇಶಗಳ ನಂಬಲರ್ಹ ಮಾಹಿತಿಗಳನ್ನು

ಪಡೆದಿರಬೇಕು. ಇವನ್ನು ಅವರು ಇತಿಹಾಸದಿಂದ ಪಡೆದುಕೊಳ್ಳಬಹುದು. ನಾವು ಕೇವಲ ರಾಜ್ಯಗಳ, ಅವುಗಳ ಮಧ್ಯೆ ನಡೆದ ಯುದ್ಧಗಳ, ನಡೆಸಿದ ಸೇನಾ ನಾಯಕರುಗಳ ಬಗ್ಗೆ ತಿಳಿಸುವ ಪುಸ್ತಕಗಳು ಮಾತ್ರವಲ್ಲ ಆದರೆ ವಿಶಿಷ್ಟವಾಗಿ ಈ ಹಿಂದಿನ ಯುಗಗಳಲ್ಲಿ ನೈತಿಕ ಮತ್ತು ಬೌದ್ಧಿಕ ಅಭಿವೃದ್ಧಿಗಳನ್ನು ಸಾಧಿಸಿದ ಕಾರ್ಯಗಳನ್ನು ಮತ್ತು ಇಂದಿನ ದಿನಗಳಲ್ಲಿ ಇರುವಂತೆಯೇ ಅಭ್ಯಾಸಿಸಬೇಕು. ಒಂದು ಆಹ್ಲಾದಕರವಾದ, ದಯಾಪರವಾದ ರೀತಿಯಲ್ಲಿ ಮಕ್ಕಳಿಗೆ ಅಂಥಹ ಮಾಹಿತಿಗಳ ಪ್ರಾಮುಖ್ಯತೆಗಳನ್ನು ಅವರ ಭವಿಷ್ಯದ ವಿದ್ಯಾಭ್ಯಾಸದ ಲಕ್ಷಣವನ್ನಾಗಿ ತೋರಿಸಿಕೊಡಬೇಕು ಮತ್ತು ಅವರ ವಿವೇಚನೆ ಮತ್ತು ನಿರ್ಣಯಗಳನ್ನು ಅವಕ್ಕೆ ಮೊರೆಹೋಗಿಸಬೇಕು. ಅದರಿಂದ ಅವರ ಮನಸ್ಸುಗಳು ಅಂಥಹ ಬೋಧನಾತ್ಮಕವಾದ ಓದುವಿಕೆಗೆ ದಾಖಲಾಗುತ್ತವೆ ಮತ್ತು ಉಳಿದೆಲ್ಲಾ ಕಸತುಂಬಿದ, ಕೆಲಸಕ್ಕೆ ಬಾರದ, ಮತ್ತು ಹಾನಿಗೊಳಿಸುವ ಮತ್ತು ಜೀವನದ ಕರ್ತವ್ಯಗಳಿಗೆ ಆತನ ಸಿದ್ಧಪಡಿಸಿದಿರುವ ವಿಶಿಷ್ಟವಾಗಿ ಭ್ರಮಾ ಸಾಹಿತ್ಯಕ್ಕೆ ವಿರೋಧವಾಗುತ್ತದೆ.

## ಕೆಡುಕನ ಸಲಹೆಗಳುಂಟುಮಾಡುವ ವಿಪತ್ತು
## The Scourge of Evil Suggestions

Church Standard **ಎಂಬ ಪತ್ರಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ಈ ಕೆಳಗಣ ಕೃತಿಯು ಗುರುತರವಾದ ಟೀಕೆಗೆ ಒಳಗಾಯಿತು:**

"ಈ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಒಂದು ಘೋರವಾದ ಆಲೋಚನೆ ಏನೆಂದರೆ ಮಾನವ ನೆನಪಿನಲ್ಲಿ ಸ್ಥಿರವಾಗಿ ಉಳಿದು ಹೋಗಿರುವ ಅಸಹ್ಯಕಾರಿ ಅಭಿಪ್ರಾಯಗಳು. ಅನೇಕ ವರ್ಷಗಳ ಹಿಂದೆ-ಎಷ್ಟೆಂಬುದು ಮುಖ್ಯವಲ್ಲ, ದೇಶದಲ್ಲಿಯೋ ವಿದೇಶದಲ್ಲಿಯೋ ಎಂದು ಹೇಳುವ ಅಗತ್ಯವೂ ಇಲ್ಲ – ಒಬ್ಬ ಸಭ್ಯ ಸ್ತ್ರೀ ತನ್ನ ಮರಣದ ಹಾಸಿಗೆಯಲ್ಲಿದ್ದಳು. ಆಕೆಗೆ ಹೆಚ್ಚೇನೂ ವಯಸ್ಸಾಗಿರಲಿಲ್ಲ, ಆಶ್ರಯದ ಜೀವಿತಕ್ಕಿಂತ ಸ್ವಲ್ಪ ಹೆಚ್ಚುಕಾಲ ಜೀವಿಸಿದ್ದಳು. ಅವಳು ಪ್ರತಿಯೊಂದು ಕಾರ್ಯ ಮತ್ತು ಮಾತಿನಲ್ಲಿ ಶುದ್ಧತ್ವವು ಮೂರ್ತರೂಪವಾಗಿತ್ತು. ಆಕೆಯ ಜೀವಮಾನದಲ್ಲಿ ಆಕೆಗೆ ಒಮ್ಮೆಯಾದರೂ ಅಸಹ್ಯಕಾರಕ ಶಬ್ದವನ್ನು ಕೇಳುವ ಸಂಧರ್ಭ ಒದಗಿಬಂದಿರಲಿಲ್ಲ. ಹೀಗಿದ್ದರೂ ಆಕೆಯ ಚಿತ್ತಭ್ರಮೆಯಲ್ಲಿ ಆಕೆಯ ಸ್ನೇಹಿತರು ಮತ್ತು ಉಪಚಾರಕರುಗಳ ಅವಾಚ್ಯ ಶಾಪಭರಿತವಾದ ಬೈಯ್ಗಳಗಳು ಆಕೆಯ ಕಿವಿಗೆ ಸುರಿದುಬಂದು ಆಕೆಯನ್ನು ಬೆಚ್ಚಬೆರಗಾಗಿಸಿತು. ಆಕೆಯು ಇಂತಹ ಮಾತುಗಳನ್ನು ಈ ಹಿಂದೆ ಎಲ್ಲಿ ಕೇಳಿದ್ದಿರಬಹುದೆಂದು ಊಹಿಸಲು ಸಾಧ್ಯವಿದ್ದಿಲ್ಲ ಮತ್ತು ಅವುಗಳನ್ನು ಆಕೆ ಈವರೆಗೆ ಎಲ್ಲಿಯೂ ಕಲಿತದ್ದಿಲ್ಲ. ಆದರೆ ಈ ಕಾರಣದಿಂದ ಆಕೆ ಗುಪ್ತವಾಗಿ ಅವುಗಳನ್ನು ಪ್ರೀತಿಸಿ, ಆಸೆಯಿಂದ ಕಂಡಿದ್ದಿರಬಹುದೋ? ಹಾಗೇನೂ ಇಲ್ಲ. ನಿಜವಾದ ಅನುಮಾನವೇನೆಂದರೆ, ಯಾವುದೋ ಕೆಟ್ಟ ಘಳಿಗೆಯಲ್ಲಿ ಆಕೆ ಅವುಗಳನ್ನು ಕೇಳಿಸಿಕೊಂಡಿದ್ದು, ಆಕೆಯು ಅವುಗಳನ್ನು ಸ್ಪಷ್ಟಮಾತುಗಳಿಂದ ತಿರಸ್ಕರಿಸಿದ್ದಿರಬಹುದು. ಅವನ್ನು ಮರೆಯುವ ಪ್ರಯತ್ನದಲ್ಲಿ, ಆಕೆಯು ಅವನ್ನು ತನ್ನ ನೆನಪಿನಾಳದಲ್ಲಿ ಹುದುಗಿಸಿಕೊಂಡಿದ್ದಾಳೆ ಮತ್ತು ಅವುಗಳು ಆಕೆಯ ಮರಣದ ಘಳಿಗೆಯವರೆಗೂ ಆಕೆಯಲ್ಲಿ ಮನೆಮಾಡಿತ್ತು. ಇದೊಂದೇ ಉದಾರವಾದ ದೃಷ್ಟಿಕೋನವಲ್ಲ. ಇದೊಂದು ನೋಟ ಮಾತ್ರ, ಆದರೆ ಸಮಂಜಸವಾದ ನೋಟ, ಆದರೆ ಇದು ಯಾವಾಗಲೂ ಉಳಿಯುವಂತದ್ದಲ್ಲ. ಮನಸ್ಸು ಮತ್ತು ಊಹೆಗಳನ್ನು ಹಲವು ಘಂಟೆಗಳ ಕಾಲ ಅಥವಾ ಹಲವು ದಿನಗಳ ಕಾಲ ಅಶುದ್ಧವಾದ ಆಲೋಚನೆಗಳಿಗೆ, ಅಶ್ಲೀಲ ಚಿತ್ರಗಳ ಚಿಂತನೆಗೆ ತೆರೆದಿಟ್ಟಾಗ, ಅಂತಹ ಮಾನಸಿಕ ಸಹವಾಸದ ನೀತಿಭ್ರಷ್ಟ ಪರಿಣಾಮಗಳು ಎಷ್ಟರಮಟ್ಟಿಗಿರಬಹುದೆಂದು ಹೇಳಲು ಯಾರಿಗೆ ಸಾಧ್ಯ? ಕೆಡುಕರಿಂದಲೇ ತುಂಬಿರುವ ಈ ಲೋಕದ ಎಲ್ಲಾ ಕೆಟ್ಟ ಸಂಗತಿಗಳಲ್ಲಿ ಯಾವುದೂ ಸಹಾ ಅವುಗಳ ಗೂಢತೆ ಮತ್ತು ಭ್ರಷ್ಟ ಪ್ರಭಾವವನ್ನು ಸ್ಥಿರಪಡಿಸುವಲ್ಲಿ ಒರ್ವ ಪ್ರತಿಭಾಶಾಲಿ ಬರೆದ ಪುಸ್ತಕದಷ್ಟು ಘೋರವಾಗಿ ದಿಗಿಲುಗೊಳಿಸಲಾರದು"

ಮಕ್ಕಳ ಮನಸ್ಸಿನಲ್ಲಿರುವ ಧರ್ಮ ಎಂಬ ಅಂಶದ ಬಗ್ಗೆ ವಿಶೇಷವಾದ ತರಬೇತಿಯ ಅಗತ್ಯವಿದೆ. ಇದರಲ್ಲಿ ಕ್ರೈಸ್ತ ತಂದೆತಾಯಿಗಳೇ ಇದರ ಶಿಕ್ಷಕರಾಗಬೇಕು. ಧಾರ್ಮಿಕ ಸಂಗತಿಗಳ ಬಗ್ಗೆ ಪ್ರಸ್ತುತ ಲೋಕದಲ್ಲಿರುವ ಗೊಂದಲದ ಪರಿಸ್ಥಿತಿಯಲ್ಲಿ ಮತ್ತು ಹುದುವಾದ ಶಾಲೆ ಮತ್ತು ಸಾರ್ವಜನಿಕ ಶಿಕ್ಷಣದಲ್ಲಿನ ಬಹಳಷ್ಟು ಮುಂದುವರೆದ ಮನೋವೃತ್ತಿಯಲ್ಲಿ ಯಾವುದೇ ಧರ್ಮದ ಬಗ್ಗೆ ಬೋಧಿಸುವ ಯಾವುದೇ ಪ್ರಯತ್ನವೂ ಕೆಲವು ಹಿತಾಸಕ್ತಿಗಳ ಪೂರ್ವಕಲ್ಪಿತ ಅಭಿಪ್ರಾಯಗಳಿಗೆ ಅಥವಾ ಧರ್ಮಶೀಲವಾದ ದೃಢನಿಶ್ಚಯಗಳಿಗೆ ವಿರೋಧವಾಗುವುದು ನಿಶ್ಚಯ. ಈ ಕಾರಣದಿಂದ ಸಾರ್ವಜನಿಕ ಶಾಲೆಗಳು ಎಲ್ಲಾ ವಿಧವಾದ ಧಾರ್ಮಿಕ ವರ್ಣದಿಂದ, ಶಿಕ್ಷಣದಿಂದ, ಸ್ವರೂಪದಿಂದ ಮತ್ತು ಆಚಾರವಿಧಿಗಳಿಂದ ಮುಕ್ತವಾಗಿರಬೇಕೆಂದು ನ್ಯಾಯವು ಹಕ್ಕಿನಿಂದ ಕೇಳಿಕೊಳ್ಳುತ್ತದೆ. ಸತ್ಯವೇದವು ದೇವರ ವಾಕ್ಯವಾಗಿದೆ ಎಂಬ ನಮ್ಮ ಪೂಜ್ಯಭಾವನೆಯನ್ನು ಎದುರಿಸಲಾಗದೆ, ಯೆಹೂದ್ಯರು ಹೊಸಒಡಂಬಡಿಕೆಯ ಬೋಧನೆಗಳನ್ನು ವಿರೋಧಿಸುತ್ತಾರೆ ಎಂದು ನಾವು ನಂಬುತ್ತೇವೆ. ಮೇಲ್ಮಟ್ಟದ ಟೀಕೆಗಳ ಪ್ರಭಾವಕ್ಕೆ ಒಳಗಾಗಿ ಬಹಳಷ್ಟು ಜನರು ಸತ್ಯವೇದದ ಹಳೆ ಮತ್ತು ಹೊಸಒಡಂಬಡಿಕೆಗಳೆರಡರ ಹೆಚ್ಚು ಭಾಗವನ್ನು ವಿರೋಧಿಸುತ್ತಾರೆ. ಕೆಲವು ನಾಸ್ತಿಕರು, ಧರ್ಮನಿಂಧಕರು, ಬೌದ್ಧರು, ಥಿಯೋಸಾಫಿಸ್ಟ್‌ಗಳು ಇವೇ ಮುಂತಾದವರು ಸತ್ಯವೇದವನ್ನು ಸಂಪೂರ್ಣವಾಗಿ ವಿರೋಧಿಸುತ್ತಾರೆ. ಮತ್ತೆ ಕೆಲವರು ಹುದುವಾದ ಭಾಷಾಂತರವನ್ನು ವಿರೋಧಿಸುತ್ತಾರೆ – ಈ ಎಲ್ಲಾ ವರ್ಗದವರೂ ಶಾಲೆಯ ಬೆಂಬಲಕ್ಕಾಗಿ ತೆರಿಗೆ ಕಟ್ಟುತ್ತಾರೆ ಮತ್ತು ಅದರ ಅನುಕೂಲತೆಗಳನ್ನು ಪಡಕೊಳ್ಳುತ್ತಿದ್ದಾರೆ ಎಂಬ ಸತ್ಯದ ದೃಷ್ಟಿಯಿಂದ – ಶಾಲೆಗಳಲ್ಲಿ ಧಾರ್ಮಿಕ ಅಭ್ಯಾಸವನ್ನು ಕೈಬಿಡುವುದು ಮತ್ತು ಸತ್ಯವೇದವನ್ನು ಒಂದು ಧಾರ್ಮಿಕ ಪುಸ್ತಕವನ್ನಾಗಿ ಲಕ್ಷಿಸದೇ ಇರುವುದು, ಅದನ್ನು ಬಲವಂತವಾಗಿ ಒಳನುಗ್ಗಿಸದೇ ಇರುವುದು ನ್ಯಾಯವೂ, ಬುದ್ಧಿವಂತಿಕೆಯೂ ಆಗಿದೆ. ಹಾಗೇ ಮಾಡಲೇಬೇಕಿದ್ದಲ್ಲಿ ನಮ್ಮೊಡನೆ ಒಪ್ಪದಿರುವ ಅನೇಕರ ವಿರೋಧವನ್ನು ಎದುರಿಸದಿರುವಂತೆ ಅದನ್ನು ಕೇವಲ ಒಂದು ಪುರಾತನವಾದ ಇತಿಹಾಸದ ಪುಸ್ತಕವೆಂದು ಪರಿಚಯಿಸಬಹುದು.

ಸತ್ಯವೇದವು ದೈವಸ್ಪೂರ್ತಿಯಿಂದೊಡಗೂಡಿದ ದೇವರ ವಾಕ್ಯ ಎಂಬ ನಮ್ಮ ಪೂಜ್ಯಭಾವನೆಯ ದೃಷ್ಟಿಯಿಂದ ಮೇಲಿನ

ನಮ್ಮ ಸಲಹೆಯು ಕೆಲವರಿಗೆ ವಿಚಿತ್ರವಾಗಿ ಕಂಡುಬರಬಹುದು; ಆದರೆ ಸ್ವರ್ಣನಿಯಮದ ಸಾಮರಸ್ಯದಲ್ಲಿ ನಾವು ಅದೇ ಸರಿಯಾದ ಕ್ರಮವೆಂದು ನಂಬುತ್ತೇವೆ. ನಿಜವಾಗಿ ನಾವು ಚಿಕ್ಕ ಹಿಂಡು, ಅಲ್ಪಸಂಖ್ಯಾತರೂ ಆಗಿದ್ದು ನಾವು ನಮ್ಮ ಪ್ರಭಾವವನ್ನು ಬೀರಲು ಬಯಸಿದಲ್ಲಿ ಅದು ಶಕ್ತಿಹೀನವಾಗುತ್ತದೆ. ನೂತನ ಸೃಷ್ಟಿಗಳು ಇತರ ನೀತಿ ಸುಧಾರಕರಿಗಿಂತ ಮಿಗಿಲಾಗಿ ತಾವು ಇದರ ಪ್ರತಿಪಾದಕರಾಗುವುದು ತಮ್ಮ ಕರ್ತವ್ಯವೆಂದು ಪರಿಗಣಿಸುವುದಿಲ್ಲ. ಎಲ್ಲಾ ನೂತನ ಸೃಷ್ಟಿಗಳಿಗೆ ನೂತನ ಸೃಷ್ಟಿಯ ಅಭಿವೃದ್ಧಿಯ ಬಗ್ಗೆ ಇನ್ನೂ ಹೆಚ್ಚಾದ, ಭವ್ಯವಾದ ನಿಯೋಗವಿದೆ. ಆದಕಾರಣ ಅವರು ಅಂತಹ ಎಲ್ಲಾ ನೀತಿ ಸುಧಾರಣೆಗಳನ್ನು ಪರಲೋಕ್ಯರಾಜ್ಯವು ಸಿದ್ಧಿಗೆ ಬರುವವರೆಗೆ ಪ್ರಸ್ತುತದಲ್ಲಿ ಈ ಪ್ರಪಂಚದವರಿಗೆ ಬಿಟ್ಟುಕೊಡಲು ಸಿದ್ಧರಾಗುತ್ತಾರೆ. ಪರಂತು, ನಮ್ಮ ಮನೋಭಾವನೆಗಳನ್ನು ವ್ಯಕ್ತಪಡಿಸುವ ಅವಕಾಶಗಳು ನಮಗೆ ಎಂದೂ ದೊರೆಯದೇ ಹೋದರೂ ನಾವುಗಳು ಶಾಂತ ಮನಸ್ಸಿನ ಚೈತನ್ಯವನ್ನು ಹೊಂದಿರುವುದು, ನ್ಯಾಯಕ್ಕೆ ತಕ್ಕಂತೆ ಇರುವುದು ಉತ್ಕೃಷ್ಟವಾಗಿದೆ.

ಯಾವುದೇ ಘಟನೆಯಲ್ಲಿಯೂ ವಾರದ 5 ದಿನಗಳಲ್ಲಿಯೂ ದಿನಕ್ಕೆ ಆರು ಘಂಟೆಗಳ ಕಾಲ, ಜೀವನದಲ್ಲಿ ಆರುವರ್ಷ ಗಳಿಗಿಂತಲೂ ಕಡಿಮೆಯ ಕಾಲ ನಮ್ಮ ಮಕ್ಕಳ ಮೇಲೆ ಹೊರೆಯಾಗಿರುವ ಬಹಳಷ್ಟು ಪ್ರಾಪಂಚಿಕ ಪಾಠಗಳಿಗೆ ಮೀಸಲಿಡುವುದು ಅಲ್ಪ ಸಮಯವಾಗಿದ್ದು ಅದು ಸಾಕಾಗುವುದಿಲ್ಲ. ಈ ರೀತಿಯಲ್ಲಿ ಸಮಯವನ್ನು ಪ್ರಾಪಂಚಿಕ ಅಧ್ಯಯನಗಳಿಗೆ ಮೀಸಲಿಡುವುದು ತಂದೆತಾಯಿಗಳಿಗೆ ಮತ್ತು ಅವರು ಆಯ್ದ ಆಧ್ಯಾತ್ಮಿಕ ಮಾರ್ಗದರ್ಶಿಗಳಿಗೆ ಮಕ್ಕಳಿಗೆ ಅತ್ಯುತ್ತಮವೆನಿಸುವ ಧಾರ್ಮಿಕ ಶಿಕ್ಷಣ ನೀಡಲು ಬಹಳಷ್ಟು ಸಮಯವನ್ನು ಬಿಟ್ಟುಕೊಡುತ್ತದೆ. ಪ್ರತಿಯೊಂದು ವಾರದ 168 ಘಂಟೆಗಳಲ್ಲಿ ಲೌಕಿಕ ಶಿಕ್ಷಣಕ್ಕೆ ಖಂಡಿತವಾಗಿಯೂ ವಾರಕ್ಕೆ 30 ಘಂಟೆಗಳು ಮೀಸಲಿಡಬೇಕಾಗುತ್ತದೆ. ಯಾಕೆಂದರೆ ನಾವು ಜೀವಿಸುವ ಈ ಪರಿಶ್ರಮದ ಕಾಲದಲ್ಲಿ ಮೂರು ವರ್ಷಕ್ಕಿಂತಲೂ ಹೆಚ್ಚಾಗಿ ಮಗುವು ಅಂತಹ ಶಿಕ್ಷಣವನ್ನು ಪಡೆಯಲು ಅಗಾಗ ತಡೆಯುಂಟಾಗುತ್ತಿರುತ್ತದೆ.

## ಭಾನುವಾರ ಶಾಲೆಗಳ ಪ್ರಭಾವ

## The Influence of Sunday Schools

ಕ್ರೈಸ್ತ ಸಾಮ್ರಾಜ್ಯದಲ್ಲಿ ಭಾನುವಾರ ಶಾಲೆಯು ಇಂದು ಒಂದು ಬೃಹತ್ ಸಂಸ್ಥೆಯಾಗಿದೆ. ಅದನ್ನು ವಾರಕ್ಕೊಮ್ಮೆ ಅವರನ್ನು ಒಂದುಗೂಡಿಸಿ ಅವರ ಮನಸ್ಸನ್ನು ಸಾಧಾರಣ ದೈನಂದಿಕ ಕೆಲಸಗಳ ವಾಹಿನಿಯಿಂದ ಹೊರಕ್ಕೆ ಅಂದರೆ ಧಾರ್ಮಿಕ ಮತ್ತು ಸಾರ್ವಜನಿಕವಾದ ಸಾಮಾಜಿಕ ಹಾದಿಯಲ್ಲಿ ಹರಿಸುವ ಮಕ್ಕಳ ಒಂದು ಸಾಮಾಜಿಕ ಕೂಟದ ಬೆಳಕಿನಲ್ಲಿ ಪರಿಗಣಿಸುವುದಾದರೆ ಅದು ಈ ಲೋಕದಲ್ಲಿ ವಿಶೇಷವಾಗಿ ಸಮಾಜದಲ್ಲಿನ ಕೆಳವರ್ಗದವರಿಗೆ ಸಾಕಷ್ಟು ಯಶಸ್ವಿಯಾಗಿದೆ ಎಂಬ ಸದಭಿಪ್ರಾಯ ಉಂಟಾಗುತ್ತದೆ. ವಿಶ್ವಾಸಿಗಳ ಮಕ್ಕಳಿಗೆ ಅದು ಉಂಟುಮಾಡುವ ಪರಿಣಾಮಗಳ ಬಗ್ಗೆ ಹೇಳುವುದಾದರೆ ಇದು ಹಾನಿಕರವಾಗಿದೆ ಎಂದು ನಾವು ಹೇಳುತ್ತೇವೆ. ಇದಕ್ಕೆ ನಾವು ನೀಡುವ ಕಾರಣಗಳನ್ನು ಮೆಚ್ಚಿಕೊಳ್ಳುವವರೆಗೂ ಈ ರೀತಿಯ ಅಭಿಪ್ರಾಯವು ಅತಿರೇಕವಾದುದೆಂದು ಕಂಡುಬರುತ್ತದೆ. ಅವುಗಳೆಂದರೆ :–

1. ಭಾನುವಾರ ಶಾಲೆಗಳು ತಂದೆತಾಯಿಗಳಿಗೆ ಹಾನಿಕರ. ಯಾಕೆಂದರೆ ಇದರಿಂದಾಗಿ ಅವರು ಕರ್ತನಿಂದ ತಮಗೆ ವಹಿಸಲ್ಪಟ್ಟ ಜವಾಬ್ದಾರಿಗಳಿಂದ ನಾವು ಮುಕ್ತರಾಗಿದ್ದೇವೆಂದು ತಿಳಿಯುತ್ತಾರೆ. ಕೆಲವೊಮ್ಮೆ ಭಾನುವಾರ ಶಾಲೆಯು ಉಪಾಧ್ಯಾಯರು ಅಂತಹ ಜವಾಬ್ದಾರಿಯನ್ನು ನಿರ್ವಹಿಸುವಷ್ಟು ಸಮರ್ಥರಿರುವುದಿಲ್ಲ. ಮಕ್ಕಳ ಮತ್ತು ಅವರ ಸರಿಯಾದ ತರಬೇತಿಯ ವಿಷಯದಲ್ಲಿ ಅನನುಭವಿಗಳೂ ಆಗಿರುತ್ತಾರೆ – ಸಂಪೂರ್ಣ ಪ್ರತಿಷ್ಠೆಯ ಬಗ್ಗೆ, ಪವಿತ್ರಾತ್ಮನನ್ನು ಹೊಂದಿಕೊಳ್ಳುವ ಬಗ್ಗೆ ಬಹಿರಂಗವಾಗಿ ತಿಳಿಸುವವರು ಬಲು ಅಪರೂಪ. ಅಂಥವರಿಗೆ ತಂದೆತಾಯಿಗಳ ಸ್ಥಾನದಲ್ಲಿ, ತಂದೆತಾಯಿಗಳ ಬಹು ಮುಖ್ಯ ಕರ್ತವ್ಯವನ್ನು ನೀಡಲಾಗುತ್ತದೆ. ಇದರಿಂದ ಕ್ರೈಸ್ತ ತಂದೆತಾಯಿಗಳಿಗೆ ಉಂಟಾಗುವ ನಷ್ಟವನ್ನು ಲೆಕ್ಕಮಾಡಲು ಸಾಧ್ಯವಿಲ್ಲ. ಆತ್ಮೀಕ ಸಂಗತಿಗಳಲ್ಲಿ ಅಂಗೀಕೃತವಾದ ತತ್ವವೇನೆಂದರೆ "ಇತರರಿಗೆ ನೀರೆರೆಯುವರು ತಾವೂ ನೀರೆರೆಸಿಕೊಂಡವರಾಗಿರಬೇಕು". ಆದುದರಿಂದ ತಮ್ಮ ಮಕ್ಕಳಿಗೆ ನೈತಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಪರಿಶ್ರಮದಿಂದ ಬೋಧಿಸುವ ಮತ್ತು ಮಾರ್ಗದರ್ಶನ ನೀಡುವ ತಂದೆತಾಯಿಗಳು ಅವರಿಗೆ ಆಶೀರ್ವಾದಗಳನ್ನು ಬರಮಾಡುವವರಲ್ಲದೆ ತಾವೂ ಸಹಾ ಈ ಸೇವೆಯ ಸಂಬಂಧದಲ್ಲಿ ಹೆಚ್ಚಾದ ಆಶೀರ್ವಾದಗಳನ್ನು ಪಡಕೊಳ್ಳುವರು. ಇಂದು ದೈವಿಕ ವ್ಯವಸ್ಥೆಯಿಂದ ಅರಿವಿಲ್ಲದೇ ದೂರಹೋಗಿರುವ ಕಾರಣ ಈ ರೀತಿಯ ಆಶೀರ್ವಾದಗಳನ್ನು ಹೊಂದಿದ ತಂದೆತಾಯಿಗಳು ಕಾಣೆಯಾಗಿದ್ದಾರೆ.

2. ಭಾನುವಾರ ಶಾಲೆಯು ಕ್ರೈಸ್ತ ತಂದೆತಾಯಿಗಳ ಮಕ್ಕಳಿಗೆ ಒಂದು ರೀತಿಯಲ್ಲಿ ನಿರ್ಧಾರಿತವಾದ ಅನಾನುಕೂಲವಾಗಿದೆ. ಯಾಕೆಂದರೆ ಅವರು ಬುದ್ಧಿವಂತ ಮತ್ತು ಧರ್ಮಶೀಲ ತಂದೆತಾಯಿಗಳು ಕೊಡಬಹುದಾದ ಮತ್ತು ಕೊಡಲೇಬೇಕಾದ ಬೋಧನೆಗಳನ್ನು ಕೊಡಲಾರರು.

3 ಭಾನುವಾರ ಶಾಲೆಯ ವ್ಯವಸ್ಥೆಯು ತಂದೆತಾಯಿಗಳು ಮತ್ತು ಮಕ್ಕಳು ಇವರಿಬ್ಬರಿಗೂ ಮತ್ತೊಂದು ದೃಷ್ಟಿಕೋನದಲ್ಲಿ ಸಹಾ ಅನಾನುಕೂಲವಾಗಿ ಪ್ರವರ್ತಿಸುತ್ತದೆ; ಅದು ಮಕ್ಕಳಿಗೆ ತಮ್ಮ ತಂದೆತಾಯಿಯರ ಬಗ್ಗೆ ಇರಬೇಕಾದ ಗೌರವವನ್ನು ಕಡಿಮೆ ಮಾಡುವುದಾಗಿದೆ. ಈ ರೀತಿಯಲ್ಲಿ ತಂದೆತಾಯಿಗಳ ಘನತೆಯನ್ನು ಒಂದು ಕಡೆಯಲ್ಲಿ, ಮಕ್ಕಳ ಧರ್ಮಕ್ಕೆ ಉಚಿತವಾದ ಗೌರವವನ್ನು ಮತ್ತೊಂದೆಡೆ ಕೊರತೆಗೊಳಿಸುವುದಾಗಿದೆ. ನಿಸ್ಸಂದೇಹವಾಗಿ ಇದು ಇಂದು "ಕ್ರೈಸ್ತ ಪ್ರಪಂಚ' ಎಂದು ಕರೆಯಲಾಗುತ್ತಿರುವ ಪರಿಸ್ಥಿತಿಯಲ್ಲಿ ತಂದೆತಾಯಿಗಳಿಗೆ ತೋರುವ ಅವಿಧೇಯತೆ, ಕುಟುಂಬಕ್ಕೆ ಅಧೀನರಾಗದಿರುವುದು ಇವೇ ಮುಂತಾದುವುಗಳಲ್ಲಿ ಬಹಳಷ್ಟು ಮಾಡುವುದಿದೆ. ಮಾನವ ಮನಸ್ಸಿನ ಧಾರ್ಮಿಕ ಅಂಗಗಳು ಮೆದುಳಿನ ಮೇಲ್ಗಡೆಯಲ್ಲಿಯೇ ಇರುತ್ತವೆ. ಅವುಗಳು ಕ್ರೀಯಾಶೀಲವಾದಾಗ ಮತ್ತು ಉಚಿತವಾದ ರೀತಿಯಲ್ಲಿ ಬೆಳೆದುಬಂದಾಗ ಹೆಚ್ಚು ಪ್ರಬಲವಾಗಿ ಕಂಡುಬರುತ್ತವೆ. ಅತ್ಯಂತ ಆದರವು ಇವುಗಳಲ್ಲಿ ಒಂದಾಗಿದ್ದು ಇದಕ್ಕೆ ಸೂಕ್ತ ನಿದರ್ಶನಬೇಕಾಗುತ್ತದೆ. ಮಕ್ಕಳು ತಮ್ಮ ತಂದೆತಾಯಿಗಳು ದೇವರಿಗೆ ಮತ್ತು ಆತನ ವಾಕ್ಯಕ್ಕೆ ಗೌರವ ತೋರುವುದನ್ನು ನೋಡಿದರೆ. ಈ ಮೂಲದಿಂದ ಅವರನ್ನು

ನಿರ್ದೇಶಿಸುವುದಾದರೆ, ಅವರಿಗೆ ಅವರ ಮುಂದೆ ಒಂದು ವಸ್ತುನಿಷ್ಟ ಪಾಠವು ದೊರೆಯುತ್ತದೆ ಮತ್ತು ಇದು ಅವರ ಜೀವಮಾನ ಕಾಲವಿಡೀ ಅಮೂಲ್ಯವೆನಿಸುತ್ತದೆ ಮತ್ತು ಕಾಲಕ್ರಮದಲ್ಲಿ ಅದು ಅವರ ಮಕ್ಕಳವರೆಗೂ ಮುಂದುವರೆಯುತ್ತದೆ; ಆದರೆ ಅವರು ತಂದೆತಾಯಿಗಳ ಗೌರವವು ದೇವರಿಂದ ಮತ್ತು ಆತನ ವಾಕ್ಯಗಳಿಂದ ವಿಮುಖಗೊಂಡು ಕ್ರೈಸ್ತ ಪಾದ್ರಿ ವರ್ಗಗಳೆಡೆಗೆ ತಿರುಗಿ ಅವರಿಂದ ದೈವಿಕ ಸಂದೇಶವೆಂದು ಯಾವುದೇ ವಿವೇಚನೆ ಅಥವಾ ಅಭ್ಯಾಸವಿಲ್ಲದೆ ಮತ್ತು ದೇವರ ವಾಕ್ಯವನ್ನು ಧ್ಯಾನಿಸದೆ ಪಡಕೊಳ್ಳುವುದನ್ನು ಕಂಡರೆ ಮಕ್ಕಳ ಮೇಲೆ ಮೂಢನಂಬಿಕೆಯ ಪ್ರಭಾವವುಂಟಾಗುತ್ತದೆ ಮತ್ತು ಅವರು ಪಾದ್ರಿಗಳವರ್ಗಕ್ಕೆ ಅಧೀನರಾಗುತ್ತಾರೆ. ಇದು ಆತ್ಮೀಕ ಬೆಳವಣಿಗೆಗೆ ತೊಡಕನ್ನುಂಟುಮಾಡುವ ಅನಾರೋಗ್ಯಕರ ಪರಿಸ್ಥಿತಿಯಾಗಿದೆ.

ಇದರೊಟ್ಟಿಗೆ ಮಕ್ಕಳನ್ನು ಭಾನುವಾರ ಶಾಲೆಯ ಉಪಾಧ್ಯಾಯರ ಬಳಿಗೆ ಸತ್ಯವೇದ ಬೋಧನೆ ಪಡಕೊಳ್ಳಲು ಕಳುಹಿಸಿದ್ದೇ ಆದಲ್ಲಿ ಚಿಕ್ಕ ಮಕ್ಕಳ ಮನದಲ್ಲಿ ತಮ್ಮ ತಂದೆತಾಯಿಗಳು ಈ ಬೊಧನೆಯನ್ನು ಖುದ್ದಾಗಿ ನೀಡಲು ಅಶಕ್ತರು ಎಂಬ ಭಾವನೆಯುಂಟಾಗುತ್ತದೆ; ಮತ್ತು ತಂದೆತಾಯಿಗಳು ತಮಗಿಂತ ಶ್ರೇಷ್ಟರು ಎಂದು ತಿಳಿದ, ಆದರೆ ಬೇರೆ ಸ್ವಭಾವ ಹೊಂದದ ಪಾದ್ರಿಗಳಿಂದಲೇ ಬೋಧನೆ ಪಡೆದವರಾದ್ದರಿಂದ, ಮಕ್ಕಳು ಸಹಾ ತಮ್ಮ ಭಾನುವಾರ ಶಾಲೆಯ ಉಪಾಧ್ಯಾಯರನ್ನು ಅದೇ ದೃಷ್ಟಿಯಿಂದ ಕಾಣುವರು. ಈ ಎಲ್ಲಾದರ ಪರಿಣಾಮ ತಂದೆತಾಯಿಗಳ ಬಗ್ಗೆ ಮಕ್ಕಳಿಗಿರುವ ಗೌರವ ಮತ್ತು ಸದಭಿಪ್ರಾಯಗಳನ್ನು ಕಸಿದುಕೊಳ್ಳುವುದೇ ಆಗಿದೆ.

ಇದಕ್ಕೆ ವ್ಯತಿರಿಕ್ತವಾಗಿ, ಸತ್ಯವೇದದ ದೃಷ್ಟಿಕೋನದಿಂದ ಯೋಗ್ಯರೀತಿಯಲ್ಲಿ ಮಕ್ಕಳಿಗೆ ದೇವರು ತನ್ನ ವಾಕ್ಯಗಳ ಮೂಲಕ ನಮ್ಮ ಸಂಗಡ ಮಾತನಾಡುವವನಾಗಿದ್ದಾನೆ ಮತ್ತು ಆತನು ತನ್ನ ಮಕ್ಕಳಲ್ಲಿ ಕೆಲವರನ್ನು ಈ ವಾಕ್ಯಗಳನ್ನು ವಾಖ್ಯಾನಿಸಲು, ಅರ್ಥಮಾಡಿಸಲು ವ್ಯವಸ್ಥೆ ಮಾಡಿದ್ದಾನೆ, ಇವರಲ್ಲಿ ತಂದೆತಾಯಿಗಳು ಸಹಾ ಇದ್ದಾರೆ ಮತ್ತು ಅವರು ಕುಟುಂಬದಲ್ಲಿ ದೇವರಿಂದ ಪೂರ್ಣವಾದ ಅಧಿಕಾರ ಪಡೆದ ಬೋಧಕರುಗಳಾಗಿದ್ದಾರೆ ಎಂಬುದನ್ನು ತಿಳಿಸಿದ್ದೇ ಆದಲ್ಲಿ ಮಕ್ಕಳು, ದೇವರು ಉದ್ದೇಶಿಸುವ ಧಾರ್ಮಿಕ ಗೌರವಗಳಿಗೆ ಅರಿವಿಲ್ಲದೆ ಅಂಟಿಕೊಳ್ಳುತ್ತಾರೆ. ಈ ರೀತಿಯಲ್ಲಿ ದೇವರ ವ್ಯವಸ್ಥೆಯು ತಂದೆತಾಯಿಗಳಿಗೆ ತಮ್ಮ ಮಕ್ಕಳ ಮೇಲೆ ಅತಿಯಾದ ಹಿತಕರ ಪ್ರಭಾವವನ್ನು ಜೀವನದ ಅಂತ್ಯದವರೆಗೂ ಬೀರುವಂತೆ ಮಾಡುತ್ತದೆ. ಇದಕ್ಕೂ ಹೆಚ್ಚಾಗಿ, ತಂದೆತಾಯಿಗಳು ವಾಕ್ಯದ ಪಾಠಗಳನ್ನು ಬೋಧಿಸಿದ ನಂತರ, ದೇವರ ವಾಕ್ಯದಿಂದ ಜೀವನದ ದೈವಿಕ ಮಟ್ಟದ ಬಗ್ಗೆ, ಗುಣನಡತೆಗಳ ಬಗ್ಗೆ, ಆಲೋಚನೆ, ಕಾರ್ಯಗಳು, ದೇವರ ಸುವರ್ಣ ನಿಯಮಗಳು ಇವುಗಳ ಸೂಕ್ತ ಸೂಚನೆಗಳನ್ನು ನೀಡಿದ ನಂತರ ಅಂಥಹ ತಂದೆತಾಯಿಗಳು ದೇವರ ವಾಕ್ಯವನ್ನು ಬೋಧಿಸುವ ತಮ್ಮ ಸ್ವಂತ ಅಭ್ಯಾಸದಲ್ಲಿ ಬಲಹೊಂದುವಿಕೆಯನ್ನು ಕಂಡುಕೊಳ್ಳುತ್ತಾರೆ. ತಮ್ಮ ಬೋಧನೆಗಳಿಗೆ ತಾವೇ ಉತ್ತಮ ಉದಾಹರಣೆಗಳಾಗಿರಬೇಕೆಂದು ಬಯಸುತ್ತಾರೆ ಮತ್ತು ಶಿಶುಗಳ ಮನಸ್ಸು ಸಹಾ ತಮ್ಮ ದೈನಂದಿಕ ಜೀವನದಲ್ಲಿ ಧರ್ಮದ ನಿಯಮಗಳನ್ನು ಪಾಲಿಸಬಲ್ಲದು ಎಂಬುದನ್ನು ಗ್ರಹಿಸಿಕೊಳ್ಳುತ್ತದೆ.

ಅಂತಹ ತಂದೆತಾಯಿಗಳು ದೈವಿಕವೆಂದು ತಾವು ಘೋಷಿಸಿದ ಮಟ್ಟಕ್ಕೆ ಹತ್ತಿರ ಹತ್ತಿರವಾಗಿ ಜೀವಿಸಲು ಬಯಸುತ್ತಾರೆ; ಯಾವುದಾದರೂ ಒಂದು ವಿಶೇಷ ಶ್ರೇಣಿಯಲ್ಲಿ ವಿಫಲರಾದಲ್ಲಿ ಅವರ ಈ ವಿಫಲತೆಯನ್ನು ಅದರ ತಿಳುವಳಿಕೆಯುಳ್ಳವರ ಮುಂದೆ ಒಂದು ವೇಳೆ ಅವರು ತಮ್ಮ ಮಕ್ಕಳೇ ಆದರೂ ಅವರ ಮುಂದೆ ಅರಿಕೆಮಾಡುವುದರಿಂದ ಆಶೀರ್ವಾದವನ್ನು ಪಡಕೊಳ್ಳುತ್ತಾರೆ. ಈ ರೀತಿಯಲ್ಲಿ ಎಲ್ಲಾ ತಂದೆತಾಯಿಗಳೂ, ಮಕ್ಕಳೂ ದೈವೀಕ ಮಟ್ಟವನ್ನು ಮೆಚ್ಚಿಕೊಳ್ಳಲು ಮತ್ತು ಕರ್ತನ ಕರುಣೆ ಮತ್ತು ಕ್ಷಮಾಪಣೆಗಳನ್ನು ಕಂಡುಕೊಳ್ಳಲು ಹೆಚ್ಚು ಹೆಚ್ಚಾಗಿ ಕಲಿತುಕೊಳ್ಳುತ್ತಾರೆ. ಈ ರೀತಿಯಲ್ಲಿ ಅನಿಯಮಿತವಾಗಿ ಸಂಭವಿಸುವ ತಂದೆ ತಾಯಿಗಳ ಕೊರತೆಗಳು ಮಕ್ಕಳಿಗೆ ನಮ್ರತೆಯಲ್ಲಿ ಮತ್ತು ದೇವರ ನಿಯಮಗಳಿಗೆ ಬದ್ಧರಾಗುವ ಒಂದು ಪಾಠವಾಗಿ ಬಿಡುತ್ತದೆ.

(4) ಭಾನುವಾರ ಶಾಲೆಯ ಯೋಗ್ಯವಾದ ಕಾರ್ಯಗಳ ಬಗ್ಗೆ ಅನೇಕರು ಬಹಳ ದೊಡ್ಡ ತಪ್ಪನ್ನು ಸ್ಪಷ್ಟವಾಗಿ ಮಾಡುತ್ತಾರೆ. ಅವರ ಆಲೋಚನೆಯ ಪ್ರಕಾರ ಕರ್ತನು ಮತ್ತು ಅಪೋಸ್ತಲರುಗಳು ಸಭೆಗಳನ್ನು ಇಂದಿನ ಭಿನ್ನ ಪಂಥಗಳನ್ನಾಗಿ ಸ್ಥಾಪಿಸದೇ ತಪ್ಪುಮಾಡಿದ್ದಾರೆ. ಅವರು ಕ್ರಿಸ್ತನ ಸಭೆಯನ್ನು ವಿಭಾಜಿಸುವುದರಿಂದ ತಾವೊಂದು ಬಲು ವಿವೇಕಯುತ ಕಾರ್ಯವನ್ನೆಸಗಿದ್ದೇವೆ ಎಂದು ಅವರು ಊಹಿಸುತ್ತಾರೆ; ವಿವಿಧ ಪಂಗಡಗಳಿಂದ ಮತ್ತು ವಿಶ್ವಾಸದರಿಕೆಯ ವ್ಯತ್ಯಾಸಗಳಿಂದ "ಒಬ್ಬನೇ ಕರ್ತನು, ಒಂದೇ ನಂಬಿಕೆ, ಒಂದೇ ದೀಕ್ಷಾಸ್ನಾನ" ಒಂದೇ ಸಭೆ ಎಂಬ ಕರ್ತನ ಯೋಜನೆಯನ್ನು ಅನುಸರಿಸುವುದಕ್ಕಿಂತ ಇನ್ನೂ ಹೆಚ್ಚಿನ ಫಲವನ್ನು ಪಡೆಯಬಹುದೆಂದು ಅವರು ತಿಳಿಯುತ್ತಾರೆ.

ಮೊದಲು ಪ್ರಾರಂಭಗೊಂಡ ಭಾನುವಾರ ಶಾಲೆಯು ಸಾಕಷ್ಟು ಅನುರೂಪವಾಗಿಯೇ ಇತ್ತು. ಇಂಗ್ಲೆಂಡ್ ದೇಶದ Gloucesterನಲ್ಲಿ ಅದೊಂದು ಹರಕ ಬರಕವಾದ ಶಾಲೆಯ ರೂಪದಲ್ಲಿ ಕ್ರಿ.ಶ. 1781ರಲ್ಲಿ ಪ್ರಾರಂಭಗೊಂಡಿತು Gloucester Journalನ ಸಂಪಾದಕರಾಗಿದ್ದ Robert Raikes ಎಂಬ ಕ್ರೈಸ್ತ ವ್ಯಕ್ತಿಯೊಬ್ಬರು ನಾಲ್ಕುಮಂದಿ ಕ್ರೈಸ್ತ ಮಹಿಳೆಯರನ್ನು ಹತ್ತರಿಂದ ಹದಿನಾಲ್ಕು ವರ್ಷ ಪ್ರಾಯದ ಮಕ್ಕಳಿಗೆ ಓದುವ, ಬರೆಯುವ, ಹೊಲಿಯುವ ಇತ್ಯಾದಿ ಶಿಕ್ಷಣವನ್ನು ಭಾನುವಾರ ಬೆಳಿಗ್ಗೆ ಹತ್ತು ಘಂಟೆಯಿಂದ ಸರಿ ಮಧ್ಯಾಹ್ನದ ವರೆಗೆ ಕೊಡುವಂತೆ ನೇಮಿಸಿದರು. ಮಧ್ಯಾಹ್ನದ ನಂತರ ಅವರಿಗೆ ಸತ್ಯವೇದ ಸಂಬಂಧಿತವಾದ ಪ್ರಶ್ನೋತ್ತರ ಬೋಧನೆಯನ್ನು ನೀಡಿ ದೇವಾಲಯಕ್ಕೆ ಕರಕೊಂಡು ಹೋಗಬೇಕಿತ್ತು. ಇಂತಹ ಅಲ್ಪ ಆರಂಭದಿಂದ ಇಂದಿನ ಮಹಾ ಭಾನುವಾರ ಶಾಲೆಗಳು ಬೆಳೆದುಬಂದವು. ಇದರ ಯೋಜನೆಯು ಸ್ಪಷ್ಟವಾಗಿ ಒಳ್ಳೆಯದೇ ಆಗಿತ್ತು ಮತ್ತು ಕರ್ತನು ಮತ್ತು ಆತನ ಅಪೋಸ್ತಲರುಗಳ ಅಚಾರ ಪದ್ಧತಿಗಳ ವಿರುದ್ಧವಾಗಿ ಇರಲೇ ಇಲ್ಲ. ಯಾವಾಗ ಕ್ರೈಸ್ತ ತಂದೆತಾಯಿಗಳನ್ನು ಕ್ರಿಸ್ತ ಶಿಕ್ಷಕ ಸ್ಥಾನದಿಂದ ಸ್ಥಾನಪಲ್ಲಟಗೊಳಿಸಿದಾಗಲೇ ಸಾಮರಸ್ಯವು ಹದಗೆಟ್ಟಿದ್ದು.

ನೂತನ ಸೃಷ್ಟಿಯ ಪ್ರತಿಯೊಬ್ಬ ಸದಸ್ಯರಿಗೂ ನಮ್ಮ ಬುದ್ಧಿಮಾತೇನೆಂದರೆ, ತಮ್ಮ ಸ್ವಂತ ಮಕ್ಕಳ ಬಗ್ಗೆ ತಂದೆತಾಯಿಗಿರುವ ಧಾರ್ಮಿಕ ಜವಾಬ್ದಾರಿಗಳನ್ನು ನಿರ್ಲಕ್ಷಿಸಿರುವ ಬಗ್ಗೆ ಈ ಹಿಂದೆ ಯಾವುದೇ ತಪ್ಪುಗಳಾಗಿರಲಿ ಅವರುಗಳು ಈ ಜವಾಬ್ದಾರಿಗಳನ್ನು ಗ್ರಹಿಸಿಕೊಂಡವರಾಗಿ ಈ ಕೂಡಲೇ ಅವುಗಳನ್ನು ನಿಭಾಯಿಸುವುದರಲ್ಲಿ ತೊಡಗಬೇಕು. ಮಕ್ಕಳ ಪ್ರಾಯಕ್ಕನುಸಾರ ಬದಲಾಗುವ ಪರಿಸ್ಥಿತಿ ಮುಂತಾದವುಗಳು ಮತ್ತು ತಂದೆತಾಯಿಗಳಿಗೆ ಅಧೀನರಾಗದೇ ಇರುವುದು ಮತ್ತು ಈಗಾಗಲೇ ಅವರು ಪ್ರಾರಂಭಿಸಿರಬಹುದಾದ ಮಾರ್ಯಾದೆ ತೋರದಿರುವಿಕೆ ಇವೇ ಮುಂತಾದ ತಪ್ಪಿಗೆ ದೇವರು ನೇಮಿಸಿದ ತಂದೆತಾಯಿಗಳ ಜವಾಬ್ದಾರಿಗಳನ್ನು ನಿರ್ಲಕ್ಷಿಸಿದ್ದೇ ಕಾರಣ ಎಂಬ ಸತ್ಯವನ್ನು ನೆನಪಿನಲ್ಲಿಟ್ಟುಕೊಂಡು ಅವುಗಳನ್ನು ಸಾವಕಾಶವಾಗಿ, ಕ್ರಮೇಣವಾಗಿ ಮತ್ತು ಪ್ರೀತಿಯಿಂದ ಕಿತ್ತೊಗೆಯಬೇಕು. ನಾವಾಗಲೀ, ಬೇರೆ ಯಾರೇ ಆಗಲಿ ದೇವರಿಗಿಂತ ಹೆಚ್ಚು ಬುದ್ಧಿವಂತರಲ್ಲ. ನಾವಾಗಲೀ ಇತರರಾಗಲೀ ಸಭಾ ಶಿರಸ್ಸಾಗಿರುವಾತನು ಮತ್ತು ನಮ್ಮ ಶಿಕ್ಷಕರನ್ನಾಗಿ ಆತನೇ ನೇಮಿಸಿದ ಹನ್ನೆರಡು ಮಂದಿ ಅಪೋಸ್ತಲರುಗಳು ಹಾಕಿಕೊಟ್ಟ ಸಾಮಾನ್ಯ ತತ್ವಗಳ ಸುಧಾರಣೆ ಮಾಡಬಲ್ಲೆವು ಎಂದು ಭಾವಿಸಲಾಗದು. ಆದುದರಿಂದ ನಾವು ಮಾನವರು ಸ್ಥಾಪಿಸಿದ ಸಂಸ್ಥೆಗಳನ್ನು ಅವುಗಳು ಎಷ್ಟೇ ಆಳವಾಗಿ ಬೇರೂರಿದ್ದರೂ, ಅವುಗಳು ಎಷ್ಟೇ ಭವ್ಯವಾಗಿದ್ದು ಅವುಗಳ ತೋರಿಕೆಯು, ಹೇಳಿಕೊಳ್ಳುವಿಕೆಗಳು ಎಷ್ಟೇ ಉನ್ನತವಾಗಿ ಕಂಡುಬಂದರೂ ಅವನ್ನು ಶಾಶ್ವತಗೊಳಿಸಿ ಗೌರವಿಸಕೂಡದು. ಅವುಗಳೆಲ್ಲವನ್ನೂ ದೇವರ ವಾಕ್ಯವೆಂಬ ಒಂದೇ ನಿರ್ಧಿಷ್ಟ ಪ್ರಮಾಣದಲ್ಲಿ ನಿರ್ಣಯಿಸಬೇಕು. ಅವುಗಳು ದೇವರ ವಾಕ್ಯವನ್ನು ಒಪ್ಪದೇ ಹೋದಲ್ಲಿ "ಅವುಗಳಲ್ಲಿ ಬೆಳಕಿಲ್ಲ' ಏಕೆಂದರೆ ಅವು ದೇವರವುಗಳಲ್ಲ (ಯೆಶಾಯ 8:20 ನೋಡಿರಿ).

## ಮಕ್ಕಳ ಆತ್ಮಭರವಸೆ

## The Confidence of Children

ತಂದೆತಾಯಿಗಳು ರಾಜವಂಶಸ್ಥ ಯಾಜಕತ್ವದ ಸದಸ್ಯರು ಎಂಬ ಆತ್ಮ ಭರವಸೆಯು ಮಕ್ಕಳಲ್ಲಿ ಬೇರೂರಿರುವುದಾದರೆ, ದೇವ ಮಗುವು ಮತ್ತು ಅದರ ತಂದೆತಾಯಿಗಳು ಪ್ರಾರ್ಥನೆಯ ಮೂಲಕ ದೇವರೊಂದಿಗೆ ಸಾಂಗತ್ಯ ಹೊಂದಿಕೊಂಡಿರುತ್ತಾರೆ ಮತ್ತು ದೇವರ ವಾಕ್ಯಗಳ ಶಿಕ್ಷಣ ಹೊಂದಿರುತ್ತಾರೆ – ದೇವರ ಸೇವಕರು ದೇವರ ವಾಕ್ಯಗಳನ್ನು ಅರ್ಥಮಾಡಿಸುವಲ್ಲಿ ಕೇವಲ ಸಹಾಯಕರುಗಳು ಮಾತ್ರವೇ ಆಗಿದ್ದಾರೆ. ಇದರೊಂದಿಗೆ, ಮನೆಯಲ್ಲಿ ಪ್ರಸರಿಸಿರುವ ಮತ್ತು ವಿವಿಧ ನಾಲೆಯ ಮೂಲಕ ಹರಿಯುತ್ತಿರುವ ಪ್ರೀತಿಯ ಆತ್ಮ ಮತ್ತು ಸಾಧುತ್ವದ ವಿವಿಧ ಕೃಪೆಗಳು, ತಾಳ್ಮೆ ಮತ್ತು ಕರುಣೆ ಇವುಗಳು ಮತ್ತು ತಂದೆತಾಯಿಗಳು ಶುದ್ಧವೂ, ಶಾಂತಿದಾಯಕವೂ, ಕರುಣೆಯಿಂದ ಕೂಡಿದ್ದೂ ಆಗಿದ್ದು ಮೇಲಿನಿಂದ ಬರುವ ವಿವೇಕವನ್ನು ಬಯಸಿ ಅವುಗಳನ್ನು ಅಭ್ಯಾಸಿಸಿದ್ದರೆ ಮಕ್ಕಳ ಆತ್ಮ ವಿಶ್ವಾಸವು ಜೀವನದ ಎಲ್ಲಾ ಸಂಗತಿಗಳಲ್ಲಿಯೂ ಸ್ವಾಭಾವಿಕವಾಗಿ ಅಂತಹ ತಂದೆತಾಯಿಗಳಲ್ಲಿ ನೆಲೆಗೊಳ್ಳುತ್ತದೆ. ನಂತರ ತೆರೆದ ಮನಸ್ಸಿಗೆ ಧಾರ್ಮಿಕ, ನೈತಿಕ, ಐಹಿಕ, ಸಾಮಾಜಿಕ ಮತ್ತು ಭೌತಿಕವಾದ ಅನೇಕ ಪ್ರಶ್ನೆಗಳು ಸ್ವಭಾವಿಕವಾಗಿ ಕಾಣಿಸಿಕೊಳ್ಳುತ್ತವೆ ಮತ್ತು ಸ್ವಾಭಾವಿಕವಾಗಿ ಅಂತಹ ತಂದೆತಾಯಿಗಳಿಗೆ ಸಾಗುತ್ತದೆ.

ಅಂತಹ ಪ್ರಶ್ನೆಗಳನ್ನು ನಿರೀಕ್ಷಿಸಬೇಕು ಮತ್ತು ಆಹ್ವಾನಿಸಬೇಕು ಹಾಗೂ ಅವುಗಳಿಗೆ ಮಕ್ಕಳ ಪ್ರಾಯಕ್ಕನುಸಾರವಾಗಿ ವಿವೇಕಯುತವಾದ, ಗೌರವ ಯುತವಾದ ಉತ್ತರಗಳನ್ನು ನೀಡಬೇಕು. ರಹಸ್ಯದಿಂದಕೂಡಿದ ಪ್ರಶ್ನೆಗಳನ್ನು ಎಂದೂ ಹಗುರವಾಗಿ ಪರಿಗಣಿಸಬಾರದು. ಇಲ್ಲವಾದಲ್ಲಿ ಭರವಸೆಯು ಮುರಿದು ಬೀಳುತ್ತದೆ. ಅನೇಕ ತಂದೆತಾಯಿಗಳು ಮಕ್ಕಳ ಭಾವನೆಗಳನ್ನು, ಗುಪ್ತ ಸಂಗತಿಗಳನ್ನು ಹಗುರವಾಗಿ ಕಾಣುವುದರ ಮೂಲಕ ಅವರ ಭವಿಷ್ಯದ ಭರವಸೆಗಳಿಗೆ ಮುಟ್ಟುಗೋಲು ಹಾಕುತ್ತಾರೆ. ಎಲ್ಲಾ ಪ್ರಶ್ನೆಗಳಿಗೂ ಪ್ರಾಯದ ಪರಿಗಣನೆಯಿಲ್ಲದೆ ಪೂರ್ಣವಾಗಿ ಉತ್ತರಿಸಬೇಕೆಂದು ನಾವು ಹೇಳುವುದಿಲ್ಲ. ವಿಷಯಕ್ಕೆ ಸಂಬಂಧಪಟ್ಟ ಪೂರ್ಣ ವಿವರಣೆಯನ್ನು ನಂತರದಲ್ಲಿ ತಿಳಿಸಲಾಗುವುದು "ನಾನು ನಿನಗೆ 13 ವರ್ಷಗಳಾದಮೇಲೆ ನಿನ್ನ ಮನಸ್ಸು ಮತ್ತು ಗುಣಲಕ್ಷಗಳು ಹೆಚ್ಚು ಪಕ್ವವಾದ ನಂತರ ಇದಕ್ಕೆ ಇನ್ನೂ ಹೆಚ್ಚಿನ ವಿವರಣೆಗಳುಳ್ಳ ಉತ್ತರ ನೀಡುತ್ತೇನೆ. ಆಗ ನೀನು ಮತ್ತೊಮ್ಮೆ ಇದೇ ಪ್ರಶ್ನೆಯೊಂದಿಗೆ ನನ್ನ ಬಳಿಗೆ ಬರಬಹುದು, ಅದುವರೆಗೆ ಇದನ್ನು ನಿನ್ನ ಮನಸ್ಸಿನಿಂದ ಸಂಪೂರ್ಣ ವಾಗಿ ಕಿತ್ತುಹಾಕು" ಎಂಬ ಸಲಹೆಯಿಂದೊಡಗೂಡಿದ ಪಾರ್ಶ್ವ ಉತ್ತರಗಳೂ ಕೆಲವೊಮ್ಮೆ ಬುದ್ಧಿವಂತಿಕೆಯವುಗಳಾಗಿರುತ್ತವೆ.

ಸರಿಯಾದ ರೀತಿಯಲ್ಲಿ ತರಬೇತಿಗೊಳಿಸಿದ ಮಕ್ಕಳಿಗೆ ಈ ಕ್ರಮವು ತಕ್ಷಣವೇ ಒಪ್ಪಿಗೆಯಾಗುತ್ತದೆ. ಯಾವುದೇ ಸಂಧರ್ಭದಲ್ಲಿಯೂ ಅವರು ತಂದೆತಾಯಿಗಳ ಮಾತುಗಳು ಸಕಾರಾತ್ಮಕವಾದುದು ಮತ್ತು ಅವುಗಳನ್ನು ಪ್ರಭುದ್ಧ ಪರಿಗಣನೆಯಿಲ್ಲದೆ ನೀಡಿರುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ. ಒಮ್ಮೆ ಕೊಟ್ಟ ಮೇಲೆ ಆ ವಿಷಯದಲ್ಲಿ ತಂದೆತಾಯಿಗಳ ನಿರ್ಣಯಕ್ಕೆ ಅನುಸಾರವಾದ ಹೆಚ್ಚಿನ ಮಾಹಿತಿ ದೊರೆಯುವವರೆಗೆ ಅದು ನಿಲ್ಲಬೇಕು, "ನಿಮ್ಮ ಹೌದುಗಳು ಹೌದಾಗಿರಲಿ, ಇಲ್ಲಗಳು ಇಲ್ಲವಾಗಿರಲಿ" ಎಂಬ ನಿಮ್ಮ ಕರ್ತನ ಮಾತುಗಳನ್ನು ಸರಿಯಾದ ರೀತಿಯಲ್ಲಿ ಅನುಸರಿಸಿದಲ್ಲಿ ಅನೇಕ ತಂದೆತಾಯಿಗಳಿಗೆ ತೊಂದರೆಗಳು ತಪ್ಪುತ್ತವೆ ಮತ್ತು ಮನೆಯ ಶಾಂತಿ ಮತ್ತು ಕ್ರಮಗಳು ಪ್ರವರ್ಧಮಾನಕ್ಕೆ ಬರುತ್ತವೆ. ಮಕ್ಕಳು ತಮ್ಮ ಅತಿ ಎಳೆಯ ವಯಸ್ಸಿನಿಂದಲೇ ಅಪ್ಪಣೆಯ ಯಾವುದೇ ಪುನರಾವರ್ತನೆಗೆ ಅವಕಾಶವಿಲ್ಲದಂತೆ ವಿಧೇಯತೆಯನ್ನು ಕಲಿತುಕೊಳ್ಳಬೇಕು. ಬದಲಾಗಿ ಇದು ತಂದೆತಾಯಿಗಳ ಜವಾಬ್ದಾರಿಗಳನ್ನು ಗ್ರಹಿಸುವುದಾಗಿದೆ ಎಂಬ ಅಭಿಪ್ರಾಯವನ್ನು ನೀಡುತ್ತದೆ ಮತ್ತು ಮಕ್ಕಳ ಎಲ್ಲಾ ಸಮಂಜಸವಾದ ಅಗತ್ಯತೆಗಳನ್ನು ಪರಿಸ್ಥಿತಿಯು ಅನುಮತಿಸುವಂತೆ ಪೂರೈಸುವ ಬಯಕೆಯನ್ನು ವ್ಯಕ್ತಪಡಿಸುವುದಾಗಿದೆ. ತಂದೆತಾಯಿಗಳ ಶಕ್ತಿ ಮತ್ತು ಅಧಿಕಾರಗಳನ್ನು ಮನೆಗೆ ಮತ್ತು ಅದರ ಎಲ್ಲಾ ಸದಸ್ಯರುಗಳಿಗೆ ಅಮೂಲ್ಯವನ್ನಾಗಿ ಮಾಡುವಂತೆ ಪ್ರೀತಿ, ವಿವೇಕ ಮತ್ತು ನ್ಯಾಯ ಇವುಗಳು ಅವರಲ್ಲಿ ಒಂದುಗೂಡಿರಬೇಕು.

## ಮಕ್ಕಳ ತರಬೇತಿಯಲ್ಲಿ ಸಲಹೆಯ ಪ್ರಾಭಲ್ಯತೆ

## The Power of Suggestion in Child Training

ಆರೋಗ್ಯ, ಅನಾರೋಗ್ಯ, ನೋವು ನಲಿವುಗಳಲ್ಲಿ, ವಿಧೇಯತೆ ಮತ್ತು ಅವಿಧೇಯತೆ, ಕ್ರಮ ಅಕ್ರಮ ಮಾಡುವುದು ಇತ್ಯಾದಿಗಳಲ್ಲಿ ಜೀವನದ ಪ್ರತಿಯೊಂದು ಕಾರ್ಯ, ಮಾತು ಮತ್ತು ಆಲೋಚನೆ ಮಾನವ ಚಿತ್ತದ ಪ್ರಾಧಾನ್ಯತೆಯನ್ನು ನಿಜವಾಗಿಯೂ ಜೀವನ ಪರ್ಯಂತದ ಕ್ರಿಯೆಗಳಲ್ಲಿ ಕೆಲವರು ಮಾತ್ರವೇ ಗ್ರಹಿಸುತ್ತಾರೆ. ಮತ್ತು ಮಕ್ಕಳ ಮನಸ್ಸು ಜೀವನದ ಸಂಗತಿಗಳಿಗೆ ತೆರೆದು ಕೊಳ್ಳುವಾಗ ಮತ್ತು ಅವರ ಗುಣನಡತೆಗಳ ಅಸ್ತಿವಾರವು ಹಾಕಲ್ಪಡುವಾಗ ಮಕ್ಕಳ ಚಿತ್ತ, ಅಭಿಪ್ರಾಯ ಮತ್ತು ಸಲಹೆಗಳು ವಿಶೇಷವಾಗಿ ಗಮನಾರ್ಹವಾಗಿದೆ. ಸಲಹೆಗಳು ಮತ್ತು ಮನಸ್ಸಿನ ಅಭಿಪ್ರಾಯಗಳು ಅತೀಂದ್ರೀಯ ದೃಷ್ಟಿಗೆ, ಸಮ್ಮೋಹಕ್ಕೆ ಮತ್ತು ಕ್ರೈಸ್ತ ವಿಜ್ಞಾನಿಗಳು ಅಭ್ಯಾಸಿಸುವ ಮಾರ್ಮಿಕವಾದ ಪ್ರಭಾವಕ್ಕೆ ಸಂಬಂಧಿಸಿರುತ್ತವೆ–ಆದರೆ ನಾವು ಮಕ್ಕಳ ಚಿತ್ತವನ್ನು ಬಲಪಡಿಸುವ ಸತ್ಯಪೂರ್ಣವಾದ, ಸಹಾಯಕಾರಿಯಾದ, ಮಕ್ಕಳ ಚಿತ್ತವನ್ನು ಬಲಗೊಳಿಸುವ, ದೇವರ ವಾಕ್ಯಗಳಿಗೆ ಅನುಸಾರವಾದ ಸಲಹೆಗಳನ್ನಷ್ಟೇ ಪ್ರತಿಪಾದಿಸುತ್ತೇವೆ,

ಸತ್ಯವೇದವು ಬಹಳಷ್ಟು ಸಲಹೆಗಳಿಂದ ತುಂಬಿದೆ – ಎಲ್ಲಾ ಯುಕ್ತವಾದ ಬೋಧನೆಗಳೂ ಸಲಹೆಯ ರೂಪದಲ್ಲಿವೆ – ಪಾಪ ಮತ್ತು ಸ್ವಾರ್ಥ ಆಲೋಚನೆ ಮತ್ತು ಕ್ರಿಯೆಗಳೆಲ್ಲವೂ ದೈವಿಕ ಅವಕೃಪೆಯನ್ನು ತರುವುದಲ್ಲದೆ ಮತ್ತು ನಮ್ಮ ಅನಾನುಕೂಲತೆಗಾಗಿ ಪ್ರತಿಕ್ರಿಯಿಸುತ್ತವೆ; ಆದರೆ ಪ್ರೀತಿಯ ಆಲೋಚನೆಗಳು ಮಾತು ಮತ್ತು ಕ್ರಿಯೆಗಳು ಆಶೀರ್ವಾದದಾಯಕ ಫಲಗಳನ್ನು ಇಂದಿಗೂ, ಭವಿಷ್ಯಕ್ಕಾಗಿಯೂ ನಮಗಾಗಿ ಮತ್ತು ಇತರರಿಗಾಗಿಯೂ ಕೊಡುತ್ತವೆ. ಅಪೋಸ್ತಲನು ಯಾವ ರೀತಿಯಲ್ಲಿ ಇಚ್ಛಾಪೂರ್ವಕ ಪಾಪದ ಫಲವಾದ ಎರಡನೆಯ ಮರಣದ ಬಗ್ಗೆ ಪ್ರಸ್ತಾಪಿಸುತ್ತಾ, ತಿರುಗಿಕೊಂಡು ಸಲಹಾಪೂರ್ವಕವಾಗಿ ಪ್ರಕಟಿಸುತ್ತಾನೆ ಎಂಬುದನ್ನು ಗುರುತಿಸಿ, ಈ ಕಾರಣದಿಂದ ಅವು ಅನೇಕರಿಗೆ ಸಹಾಯವಾಗಿವೆ–"ನಾವಾದರೋ ಹಿಂದೆಗೆದವರಾಗಿ ನಾಶವಾಗುವವರಲ್ಲ. ನಂಬುವವರಾಗಿ ಪ್ರಾಣರಕ್ಷಣೆಯನ್ನು ಹೊಂದುವವರಾಗಿದ್ದೇವೆ" (ಇಬ್ರಿಯ10:39). ಕ್ರೈಸ್ತ ವಿಜ್ಞಾನದ ಸಲಹೆಯು ಇದಕ್ಕೆ ವ್ಯತಿರಿಕ್ತವಾಗಿದೆ ಮತ್ತು ಸುಳ್ಳಾಗಿದೆ– "ಪಾಪವೆಂಬುದು ಇಲ್ಲ, ಕಾಯಿಲೆ ಇಲ್ಲ, ನೋವು ಇಲ್ಲ, ಮರಣವಿಲ್ಲ"; ಇದರ ಪರಿಣಾಮವಾಗಿ ವಿಮೋಚನೆಯಿಲ್ಲ, ರಕ್ಷಕನಿಲ್ಲ, ಮತ್ತೆ ಪ್ರಾಯಶ್ಚಿತ್ತವೆಂಬುದಿಲ್ಲ. ಅಂತಹ ಸುಳ್ಳು ಸಲಹೆಗಳಿಗೂ ಮತ್ತು ದೇವರ ವಾಕ್ಯದಲ್ಲಿನ ತಕ್ಕ ಸಲಹೆಗಳಿಗೂ, ಮತ್ತು ದೇವರ ಸಂದೇಶಕರು ಪ್ರಸ್ತುತ ಪಡಿಸಿರುವ ಸತ್ಯದ ಸಲಹೆಯ ಬಗ್ಗೆ ಸಲಹೆ ದೇವರ ಪ್ರೀತಿ ಮತ್ತು ಆತನಲ್ಲಿ ಇಚ್ಛಾಪೂರ್ವಕ ವಿಧೇಯತೆ ತೋರುವವರೆಲ್ಲರಿಗೂ ಕ್ರಿಸ್ತನಲ್ಲಿ ಕರುಣಾ ಪೂರ್ವಕವಾದ ಒದಗಿಸುವಿಕೆಗಳಿಗೂ ಅಗಾಧವಾದ ವ್ಯತ್ಯಾಸವಿದೆ.

ಈ ಒಳ್ಳೆಯ ಮತ್ತು ಸತ್ಯಪೂರ್ವಕವಾದ ಸಲಹೆಯನ್ನು ಮಕ್ಕಳಿಗೆ ಅನ್ವಯಿಸುವುದು ತಂದೆತಾಯಿಗಳ ಸುಪ್ತವಾದ ಜಯವಾಗಿದೆ* (*ಮುಂದಿನ ಪುಟದಡಿಯಲ್ಲಿರುವ ಟಿಪ್ಪಣಿ) ಕೆಲವು ತಂದೆತಾಯಿಗಳು ಈ ತತ್ವಗಳನ್ನು ತಮ್ಮ ಅರಿವಿಲ್ಲದೆ ನಿರಂತರವಾಗಿ ಅನ್ವಯಿಸುತ್ತಿದ್ದಾರೆ. ಅವರುಗಳು ಯಶಸ್ವಿ ತಂದೆತಾಯಿಗಳಾಗಿದ್ದಾರೆ. ಉದಾಹರಣೆಗೆ ತನ್ನ ಮಗುವನ್ನು ಪ್ರತಿ ಬೆಳಿಗ್ಗೆ ನಗುಮುಖದಿಂದ, ಸಿಹಿ ಮಾತುಗಳಿಂದ ಅಭಿನಂದಿಸುವ ತಾಯಿಯು ತನ್ನ ಮಗುವಿಗೆ ಸಂತೋಷದ ಸಲಹೆಯನ್ನು ನೀಡುವವಳಾಗಿದ್ದಾಳೆ. ಇದು ಅದರ ಮನಸ್ಸಿಗೂ, ದೇಹಕ್ಕೆ ಒಳ್ಳೆಯದನ್ನುಂಟು ಮಾಡುವುದಾಗಿದೆ ಮತ್ತು ಮಗುವಿಗೆ ಪೋಶಾಕು ತೊಡಿಸುವಾಗ, ಸುಂದರ ಮಟಾಣಿ ಹಕ್ಕಿಗಳ ಬಗ್ಗೆ ಮತ್ತು ಕಿಟಕಿಯಾಚೆ ಕಾಣುತ್ತಿರುವ ಸೂರ್ಯನನ್ನು ತೋರಿಸಿ, ಎಲ್ಲರನ್ನೂ ಎದ್ದೇಳಿಸಿ, ಒಳ್ಳೆಯದಾಗಲೀ ಎಂದು ಸಂತೋಷ ಭರಿತವಾಗಿ ಹೇಳುವ ಒಂದು ಚಿಕ್ಕ ಮಾತಿನಿಂದ ಮಗುವು ದೇವರ ಬಗ್ಗೆ ಹೆಚ್ಚಿನ ಪಾಠಗಳನ್ನು ಕಲಿತುಕೊಳ್ಳುತ್ತದೆ. ಮತ್ತು ಪರಸ್ಪರ ಸಹಾಯಕವಾಗಿರುತ್ತವೆ, ಇವುಗಳು ಹೆಚ್ಚುವರಿ ಲಾಭದಾಯಕ ಸಲಹೆಗಳಾಗಿವೆ; ಹಾಗಲ್ಲದಿದ್ದರೆ ಬಿಸಿಲಿನ ಬೇಗೆಯ ದಿನದ ಬಗ್ಗೆ ದೂರುವುದು, ಸೆಕೆ, ಕ್ಲೇಶ ಮತ್ತು ಅಸಮಧಾನ ಬೇಸರಿಕೆಯನ್ನು ಪೋಷಿಸಿದಂತಾಗುವುದು.

ಸೂರ್ಯಪ್ರಕಾಶವಿಲ್ಲದೆ ಮಳೆ ಮತ್ತು ಕತ್ತಲು ಕವಿದ ವಾತಾವರಣವಿರುವಾಗ, ಆ ದಿನ ಮಂಕಾಗಿಯೇ ಆಲೋಚಿಸುವ ಮತ್ತು ಇತರರಿಗೆ ಮಂಕು ತುಂಬಿದ ಆಲೋಚನೆಗಳನ್ನು ನೀಡಿದರೆ ಆ ವಿಷಯವು ಇನ್ನೂ ಕೆಟ್ಟದ್ದಾಗಿರುತ್ತದೆ. ಮಳೆಯ ದಿನಗಳು ನಮಗಾಗಿ ಮತ್ತು ಇತರರಿಗಾಗಿ ತಮ್ಮದೇ ಆದ ಆಶೀರ್ವಾದಗಳನ್ನು ಹೊಂದಿರುತ್ತವೆ ಮತ್ತು ನಮ್ಮ ಮನಸ್ಸುಗಳು ಇದನ್ನು ಗುರುತಿಸಿ ಮತ್ತು ಸಲಹೆಗಳನ್ನು ಸಹವಾಸಿಗಳಿಗೆ ದಾಟಿಸುವಂತೆ ಚುರುಕಾಗಿರಬೇಕಾಗುತ್ತದೆ. ತಾಯಿಯು ಮಗುವಿನ ನಿರಾಶೆಯನ್ನು ಪೂರ್ವಭಾವಿಯಾಗಿ ನಿರೀಕ್ಷಿಸಿ ಅದನ್ನು ಹೋಗಲಾಡಿಸುವಂತೆ ದೇವರು ಸುಂದರವಾದ ಮಳೆಯ ಮೂಲಕ ನೀಡಲಿರುವ ಹಣ್ಣು ಹೂವುಗಳ ಬಗ್ಗೆಯೂ, ಕುಡಿಯಲು, ಚೈತನ್ಯದಾಯಕವಾದ ಸ್ನಾನ ಮಾಡಲು ನೀಡುವ ನೀರಿನ ಬಗ್ಗೆ ಹಾಗೂ ಮಳೆ ನಮಗೆ ಪ್ರಕಾಶವಾದುದು ಸಂತೋಷಪಡಿಸುವಂತದ್ದೂ ಆಗಿದ್ದು, ಪಶುಗಳಿಗೂ ಕುಡಿಯಲು ಮತ್ತು ಮೀಯಲು ನೀರು ಒದಗುವುದೆಂಬುದರ ಬಗ್ಗೆ ಅದರ ಗಮನವನ್ನು ಸೆಳೆಯಬೇಕು. ಈ ಮೂಲಕ ಎಲ್ಲರೂ ಸಂತೋಷದಿಂದಲೂ, ಶುದ್ಧತೆಯಿಂದಲೂ ಕೂಡಿದವರಾಗಿ ದೇವರನ್ನು ಪ್ರೀತಿಸುವಂತೆ, ಸ್ತುತಿಸುವಂತೆ ಮತ್ತು ಆತನ ಸೇವೆಮಾಡುವಂತೆ ತಿಳಿಹೇಳಬೇಕು. ಮತ್ತೊಂದು ಸಹಾಯಕ ಸಲಹೆಯನ್ನು ಸಹಾ ಬಹುಶಃ ಪರಿಚಯಿಸಬಹುದು. ಅದೇನೆಂದರೆ, ಚಳಿಗಾಲದ ದಪ್ಪ ಉಡುಪುಗಳನ್ನು, ಭಾರವಾದ ಪಾದರಕ್ಷೆಗಳನ್ನು ತೊಡುವ ಸಮಯವು ಇದೇ ಆಗಿದ್ದು ನಾವುಗಳು ಇವುಗಳನ್ನಲ್ಲದೆ ಮಳೆಯನ್ನು ತಡೆಯಬಲ್ಲ ಮನೆಗಳನ್ನು, ಶಾಲೆಗಳನ್ನು ಹೊಂದಿರುವುದಕ್ಕಾಗಿ ದೇವರಿಗೆ ಸ್ತೋತ್ರ ಸಲ್ಲಿಸಬೇಕಾಗಿದೆ ಎಂಬ ಸಲಹೆಯನ್ನೂ ನೀಡಬಹುದು. ಅಥವಾ "ನಮ್ಮ ಪ್ರಿಯ ಮಗ ಮತ್ತು ಮಗಳನ್ನು ಕೆಸರು ಮತ್ತು ಕೊಚ್ಚೆಗುಂಡಿಗಳಿಂದ ದೂರವಿರಿಸಲು ಸಾಕಷ್ಟು ಜಾಗ್ರತೆ ವಹಿಸಬೇಕು. ಸದಾ ಅಚ್ಚುಕಟ್ಟಾಗಿ, ಚೊಕ್ಕವಾಗಿ ಇರಬೇಕು, ಕೆಸರನ್ನು ಮನೆ ಅಥವಾ ಶಾಲೆಯ ಒಳಗಡೆ ತರಕೂಡದು. ಹಂದಿಗಳಿಗೆ ಕೆಸರಿನಲ್ಲಿ ಹೊರಳಾಡುವುದೆಂದರೆ ತುಂಬ ಖುಷಿ,

ಅವುಗಳಿಗೆ ಯಾವುದರ ಬಗ್ಗೆಯೂ ಸ್ವಲ್ಪವೂ ಬುದ್ದಿಯಿಲ್ಲ. ಆದುದರಿಂದ ಅವುಗಳನ್ನು ಕೊಟ್ಟಿಗೆಯಲ್ಲಿ ಕೂಡಿ ಹಾಕಬೇಕಾಗುತ್ತದೆ. ಆದರೆ ದೇವರು ನಮಗೆ ಸುಂದರ ಮತ್ತು ಶುದ್ಧವಾದವುಗಳನ್ನು ಮೆಚ್ಚಿಕೊಳ್ಳುವ ವಿವೇಚನೆ ಮತ್ತು ಶಕ್ತಿಯನ್ನು ದಯಪಾಲಿಸಿದ್ದಾನೆ. ಆದುದರಿಂದ ನಾವು ಹಂದಿಗಳನ್ನಾಗಲೀ, ಕೊಳಚೆಯಲ್ಲಿರುವ ಇತರೆ ಕೀಳು ಪ್ರಾಣಿಗಳನ್ನಾಗಲೀ ನಕಲು ಮಾಡುವುದು, ನಮ್ಮ ಸೃಷ್ಟಿಕರ್ತನಿಗೆ ಅಗೌರವವನ್ನು ಉಂಟುಮಾಡಿ ಕೆಳದರ್ಜೆಗೆ ತಳ್ಳುವುದಾಗಿದೆ. ಯಾವುದಾದರೂ ಉಪಯೋಗದ ಮತ್ತು ಅಗತ್ಯವಾದ ಉದ್ಯೋಗದಲ್ಲಿ ಕೊಳೆಯಾಗುವುದು ಗೌರವಯುತವಾಗಿದೆ. ಆದರೆ ಅಗತ್ಯಕ್ಕಿಂತ ಹೆಚ್ಚಾಗಿ ಯಾರೂ ಕೊಳೆಯಾಗಬಾರದು ಅಥವಾ ಶುಚಿಗೊಳ್ಳುವವರೆಗೆ ವಿಶ್ರಾಂತಿ ಪಡೆಯಬಾರದು" ಎಂಬ ಸಲಹೆಗಳನ್ನೂ ನೀಡಬಹುದು. ಈ ಸಲಹಾ ಪಾಠಗಳು ಎಷ್ಟರಮಟ್ಟಿಗೆ ಲಾಭದಾಯಕವಾಗಿ ರುಜುವಾತುಗೊಳ್ಳುತ್ತವೆ ಎಂದು ನಾವು ತಂದೆತಾಯಿಗಳಿಗೆ ಮಾತ್ರವಲ್ಲ ಮಕ್ಕಳಿಗೂ ಸಹಾ ತೋರಿಸಿಕೊಡುವ ಅಗತ್ಯವಿಲ್ಲ**. ಅತೃಪ್ತಿಯು ಇಂದಿನ ಗುರುತರವಾದ ಅನಿಷ್ಟವಾಗಿದೆ. ಇದು ಪ್ರತಿಯೊಬ್ಬರೂ ಸಂತೋಷದಾಯಕ ಸಲಹೆಗಳನ್ನು ತಮಗೂ ಹಾಗೂ ಪರಸ್ಪರರಿಗೆ ನೀಡಲು ಉದ್ದೇಶಿಸುವ ಕುಟುಂಬಗಳನ್ನು ಸ್ವಲ್ಪಮಟ್ಟಿಗಾದರೂ ಉತ್ತೇಜಿಸುವುದಿಲ್ಲ.

ಇದೇ ಪದ್ದತಿಯನ್ನು ಮಗುವಿನ ಅನಾರೋಗ್ಯ, ಮತ್ತು ಆರೋಗ್ಯದಲ್ಲಿ ನೀಡುವ ಆಹಾರ ಪದ್ಧತಿಯ ಮಾರ್ಗದರ್ಶನಕ್ಕೂ ಅನ್ವಯಿಸಬೇಕು. ಮಗುವಿಗೆ ಎಂದೂ ವೇದನೆ ಮತ್ತು ನೋವಿನ ಸಲಹೆ ನೀಡಬಾರದು. ಯಾಕೆಂದರೆ ಅವುಗಳ ಮನಸ್ಸು ಹೆಚ್ಚುಕಡಿಮೆ ನಿಶ್ಚಿತವಾಗಿ ಇವುಗಳಿಗೆ ಭದ್ರಗೊಂಡಿರುತ್ತವೆ. ಯಾವುದೇ ಬಲಹೀನತೆ ಅಥವಾ ನೋವಿಗೆ ಉದ್ರೇಕಿಸಲ್ಪಡುತ್ತದೆ. ನೋವು ಮತ್ತು ಕಾಯಿಲೆಗಳನ್ನು ವಿಶೇಷವಾಗಿ ಮೇಜಿನ ಮೇಲೆ ಮಾತುಕತೆಯ ವಿಷಯವನ್ನಾಗಿ ಮಾಡಿಕೊಳ್ಳಬಾರದು. ಅಲ್ಲಿ ಮಾಡುವ ಆಲೋಚನೆಗಳೆಲ್ಲವೂ ಉಲ್ಲಾಸಕರವೂ, ಅರೋಗ್ಯಕರವೂ ಆಗಿರತಕ್ಕದ್ದು. ಒಳ್ಳೆಯ ಸಲಹೆಗಳನ್ನು ಮುಂಚಿತವಾಗಿಯೇ ನೀಡಬೇಕಾಗಿದೆ ಮತ್ತು ಅವುಗಳನ್ನು ಆಗಾಗ್ಗೆ ಪುನರುಚ್ಚಿಸಬೇಕು "ನನ್ನ ಮುದ್ದು ಮಗನು ಈ ಬೆಳಿಗ್ಗೆ ಸಂತೋಷವಾಗಿ ಇರುವನೋ? ಆತನು ಅಪ್ಪ, ಅಮ್ಮ, ಅಕ್ಕ, ಅಣ್ಣಂದಿರನ್ನೂ, ನಾಯಿಮರಿಯನ್ನೂ ಪ್ರೀತಿಸುತ್ತಾನೋ? ಹೌದು, ಅದು ಸರಿ – ನಾನು ಹಾಗೆಯೇ ಭಾವಿಸುತ್ತೇನೆ. ಆತನು ಒಂದು ಸ್ವಾಧಿಷ್ಟವಾದ ಬೆಳಗಿನ ಉಪಹಾರಕ್ಕಾಗಿ ಹಸಿದಿದ್ದಾನೋ? – ಒಂದು ರುಚಿಕರವಾದ ಸಕ್ಕರೆ ಮತ್ತು ಹಾಲು ಒಡಗೂಡಿದ ಅಂಬಲಿಗಾಗಿ ಮತ್ತು ಬಿಸ್ಕತ್ತು, ಬ್ರೆಡ್ಡು, ಬಟರ್ ಜಾಮ್ ಇವುಗಳಿಗಾಗಿ ಹಂಬಲಿಸುತ್ತಿದ್ದಾನೋ? ಇಂದು ನಾವು ಯಾವುದೇ ಸೌತೆಕಾಯಿ ಅಥವಾ ಮಾಗದ ಸೇಬನ್ನು ತಿನ್ನಬಾರದೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇವುಗಳು ನನ್ನ ಪುಟ್ಟ ಕಂದನಿಗೆ ಹೊಟ್ಟೆನೋವನ್ನುಂಟುಮಾಡುತ್ತವೆ. ಬದಲಾಗಿ ನಾವು ಆತನಿಗೆ ವಿಶೇಷವಾಗಿ ಒಳಿತನ್ನುಂಟು ಮಾಡುವ ಮತ್ತೇನನ್ನಾದರೂ ಕೊಡೋಣ. ಅದು ಚೆನ್ನಾಗಿರುತ್ತಲ್ಲವೇ? ಇಂದು ಮೇಜಿನ ಮೇಲೆ ಕಾರ್ನ್ ಇರುತ್ತದೆ, ಆದರೆ ನನ್ನ ಪುಟ್ಟಕಂದನಿಗೆ ಯಾವುದು ಒಳ್ಳೆಯದಲ್ಲವೋ ಅದು ಆತನ ಮುಂದೆ ದಾಟಿಹೋಗುವಾಗ "ನೋ, ಥಾಂಕ್ಸ್" ಎಂದು ಆತನೇ ಹೇಳುತ್ತಾನೆ. ಆತನು ದೇವರು ಬಯಸುವಂತೆ, ಆತನ ಅಪ್ಪ ಅಮ್ಮ ಆತನನ್ನು ನೋಡಲಿಚ್ಚಿಸುವಂತೆ ಒಳ್ಳೆಯವನೂ, ಶಕ್ತಿವಂತನೂ ಆಗಬೇಕಾಗಿದೆ.". ಸ್ವಾರ್ಥತ್ಯಾಗಕ್ಕೆ ಇದೊಂದು ಒಳ್ಳೆಯ ಪಾಠವಾಗಿದೆ. ಈ ದೊಡ್ಡ ಪಾಠವನ್ನು ತಮ್ಮ ಪುಟ್ಟ ಕಂದ ಕಲಿತುಕೊಳ್ಳುವಾಗ ಅಪ್ಪ, ಅಮ್ಮನಿಗೆ ಸಂತೋಷವಾಗುತ್ತದೆ. ಇದು ನಿಜವಾದ ಪುರುಷ, ಸ್ತ್ರೀಯರಾಗಲು ಅತಿ ಅವಶ್ಯ. ಪಾಪಗಳ ವಿಷಯದಲ್ಲಿ ಮತ್ತು ಯಾವ ಪ್ರಮಾಣದಲ್ಲಿಯಾದರೂ ನಮ್ಮ ಒಳಿತಿಗೆ ತಡೆಯನ್ನುಂಟು ಮಾಡುವುದರ ವಿಷಯಗಳಲ್ಲಿಯೂ ಪ್ರತಿಯೊರ್ವ ಕ್ರೈಸ್ತನೂ ಸ್ವಾರ್ಥ ತ್ಯಾಗವನ್ನು ಅಭ್ಯಸಿಸಬೇಕೆಂದು ದೇವರು ಬಯಸುತ್ತಾನೆ. ಯಾವ ಮನುಷ್ಯನು ತನ್ನ ವಾಂಛೆಗೆ ದಾಸನಾಗಿರುತ್ತಾನೋ ಆತನು ಶೋಚನೀಯವಾಗಿ ಪುರುಷತ್ವ ಅಥವಾ ಸ್ತ್ರೀಯತ್ವದಲ್ಲಿ ಬಲಹೀನರು ಎಂಬುದನ್ನು ಲೋಕದ ಜನರು ಸಹಾ ಗ್ರಹಿಸುತ್ತಾರೆ. ಈಗ ಅಪ್ಪ, ಅಮ್ಮ ತಮ್ಮ ಪುಟ್ಟ ಕಂದನ ಇಚ್ಛಾಶಕ್ತಿಯು ಎಷ್ಟು ಪ್ರಭಲವಾಗಿದೆಯೆಂದು ಗಮನಿಸುತ್ತಾರೆ. ಆ ಮಗುವು ಧೀರತೆಯಿಂದ ಜಯಗಳಿಸುತ್ತಾನೆಂಬ ನಿಶ್ಚಯತ್ವ ನಮಗಿದೆ. ದೇವರು ಎಷ್ಟರಮಟ್ಟಿಗೆ ಸ್ವಯಂ ನಿಯಂತ್ರಣವನ್ನು ಮೆಚ್ಚುತ್ತಾನೆಂಬುದು ಈ ದೇವರ ವಾಕ್ಯದಲ್ಲಿ ನಮಗೆ ಕಂಡು ಬರುತ್ತದೆ – "ತನ್ನನ್ನು ಆಳುವವನು ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಟ" (ಜ್ಞಾನೋಕ್ತಿ 16: 32).

ಸಲಹೆಗಳ ಮೂಲಕವಾದ ನೀತಿ ಪ್ರಶ್ನೆಯ ಪಾಠಗಳು ಒಳ್ಳೆಯದಕ್ಕೂ, ಕೆಟ್ಟದ್ದಕ್ಕೂ ಸಮವಾಗಿ ಸಮರ್ಥವಾಗಿವೆ. "ನಾವು ಕೆಟ್ಟದ್ದನ್ನು ಮಾಡೋಣ" ಎಂಬುದು ಕೆಟ್ಟಕಾರ್ಯಗಳ ಪ್ರೋತ್ಸಾಹಕವಾಗಿದೆ. "ನಾವು ಒಳ್ಳೆಯವುಗಳನ್ನು ಮಾಡೋಣ" ಎಂಬುದು ಒಳ್ಳೆ ಕಾರ್ಯಗಳ ಪ್ರಭಲವಾದ ಪ್ರೋತ್ಸಾಹಕವಾಗಿದೆ. ಆದುದರಿಂದ ಸರಿ ಮತ್ತು ತಪ್ಪು, ಒಳ್ಳೆಯದು ಮತ್ತು ಕೆಟ್ಟದ್ದು, ಸತ್ಯ ಮತ್ತು ಅಸತ್ಯ, ಕುಲೀನ ಮತ್ತು ತುಚ್ಛ ಇವುಗಳನ್ನು ಪ್ರತಿನಿತ್ಯವೂ, ಎಲ್ಲಕ್ಕೂ ಆಗಾಗ ಅನ್ವಯಿಸುತ್ತಿರಬೇಕು. ಸತ್ಯ,

* ಯಜಮಾನರುಗಳು, ವ್ಯವಸ್ಥಾಪಕರುಗಳು, ಶಿಕ್ಷಾರ್ಹ ಮತ್ತು ಸುಧಾರಣ ಸಂಸ್ಥೆಗಳ ಮೇಲ್ವಿಚಾರಕರುಗಳು ನಿಜವಾಗಿ ಎಲ್ಲರೂ ಈ ಒಳ್ಳೆಯ, ಸತ್ಯ ಮತ್ತು ಭವ್ಯವಾದ ಹಾಗೂ ಪ್ರಾಮಾಣಿಕವಾದ ಸಲಹೆಯನ್ನು ತಮ್ಮ ಪ್ರಭಾವದ ಅಡಿಯಲ್ಲಿ ಮತ್ತು ತಮ್ಮ ಮನಸ್ಸಿಗೂ ಈ ತತ್ವವನ್ನು ಲಾಭಧಾಯಕವಾಗಿ ಅನ್ವಯಿಸಬಹುದಾಗಿದೆ. ನಿಜವಾಗಿಯೂ ಜೀವನದಲ್ಲಿ ಯಶಸ್ವಿಗೊಂಡ ಅನೇಕರು ಈಗಾಗಲೇ ಇದನ್ನು ಅಭ್ಯಾಸಮಾಡುತ್ತಿದ್ದಾರೆ. ಆದರೆ ತಮಗೆ ಇದರ ಅರಿವಿಲ್ಲದಂತೆ. ನಿರೀಕ್ಷೆ ಮತ್ತು ಮೆಚ್ಚತಕ್ಕ ಅಕಾಂಕ್ಷೆ ಆದರೆ ಮಾನಸಿಕ ಸಲಹೆಗಳಲ್ಲದೆ ಬೇರೇನು?

** ಈ ರೀತಿಯಲ್ಲಿ ತಮ್ಮ ಮಕ್ಕಳಿಗೆ ಶುಭಹಾರೈಸುವ ತಂದೆತಾಯಿಗಳು ಮೊದಲಿಗೆ ಈ ಸಂತೋಷದಾಯಕ ಸಲಹೆಗಳನ್ನು ಸ್ವಲ್ಪಮಟ್ಟಿಗಾದರೂ ತಮ್ಮ ಹೃದಯಗಳಲ್ಲಿ ಬೆಳೆಸಿಕೊಂಡಿರಬೇಕು; ಇದು ನಿಜವಾದಲ್ಲಿ, ಇಂತಹ ಒಳ್ಳೆಯ ಮತ್ತು ಸಂತೋಷಕರ ಸಲಹೆಯು ಮಕ್ಕಳಿಗೆ ಮಾತ್ರ ಸೀಮಿತವಾಗಿರದೆ, ಅದೇ ರೀತಿಯಲ್ಲಿ ಹೆಂಡತಿಗೂ, ಮಕ್ಕಳಿಗೂ, ನೆರೆಯವರು, ಕೆಲಸಕ್ಕಿರುವವರು ಮುಂತಾದವರೆಲ್ಲರಿಗೂ ಅನ್ವಯಿಸುತ್ತದೆ. ಮೂಕ ಪ್ರಾಣಿಗಳು ಸಹಾ ಇದರಿಂದ ಆಶೀರ್ವಾದ ಹೊಂದಿಕೊಳ್ಳುತ್ತವೆ. ಸ್ವಾಭಾವಿಕ ಪುರುಷ ಮತ್ತು ಸ್ತ್ರೀಯರು ಇದನ್ನು ಕೆಲಮಟ್ಟಿಗೆ ಅಭ್ಯಾಸಿಸಬಹುದಾಗಿದೆ. ಆದರೆ ಸತ್ಯದ ಆತ್ಮನಿಂದ ಪಡಕೊಂಡವರು ಮಾತ್ರವೇ ದೇವರ ಪ್ರೀತಿಯನ್ನು ಹೆಚ್ಚಿನ ಜಯದೊಡನೆ ಈ ನೂತನ ಜೀವನದಲ್ಲಿ ಶ್ರೇಷ್ಟಮಟ್ಟದಲ್ಲಿ ನಿರೀಕ್ಷಿಸಬಹುದಾಗಿದೆ. ಎಲ್ಲೆಡೆ ಆಶೀರ್ವಾದಗಳು ಈಗಲೇ ಸೈತಾನನ ರಾಜ್ಯದಲ್ಲಿ ಪ್ರಾರಂಭವಾಗಿ, ಮೆಸ್ಸೀಯನ ರಾಜ್ಯಾಧಿಕಾರದಲ್ಲಿ " ಭೂಮಿಯ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವದು."

ಕುಲೀನತೆ ಮತ್ತು ಸರಿ ಇವುಗಳು ಭವ್ಯತೆಯಿಂದ ತೋರಿಬರುತ್ತವೆ. ಅವುಗಳು ನಮ್ಮ ಸೃಷ್ಟಿಕರ್ತನಾದ ದೇವರ ಅಂಗೀಕಾರ ಪಡೆದವುಗಳಾಗಿರುವುದು ಮಾತ್ರವಲ್ಲ, ನಾವು ಅನುಸರಿಸಬೇಕಾದ ಉತ್ತಮ ಹಾಗೂ ಶ್ರೇಷ್ಠ ಸ್ತ್ರೀ ಪುರುಷರುಗಳಿಂದಲೂ ಅಂಗೀಕರಿಸಲ್ಪಟ್ಟಿವೆ. ಈ ರೀತಿಯಲ್ಲಿ ಮಕ್ಕಳ ಮನಸ್ಸು ಬಲು ಬೇಗ ಮತ್ತು ದೃಢವಾಗಿ ಉದಾತ್ತವಾದ ಮತ್ತು ಸತ್ಯವಾದ ಸಂಗತಿಗಳನ್ನು ಮೆಚ್ಚಿಕೊಳ್ಳಲು ಕಲಿತುಬಿಡುತ್ತವೆ. ಸರ್ವಸಾಮಾನ್ಯವಾಗಿ ಕೀಳಾದ ಮತ್ತು ಅಗೌರವದ ನಡೆತೆಗಳ ವಿರುದ್ಧವಾಗಿ ಅವುಗಳ ಮನಸ್ಸಿನ ಮೂಲೆಯಲ್ಲಿ ಬುರುಜೊಂದು ನಿಜವಾಗಿ ಉಂಟಾಗುತ್ತದೆ. ಸತ್ಯದಿಂದ ಎಂದೂ ಸಂಸ್ಕರಿಸಲ್ಪಡದಿದ್ದರೆ, ಆತ್ಮನಿಂದ ಎಂದೂ ಪಡಕೊಳ್ಳಲಿಲ್ಲವಾದರೆ, ಆತನು ಅದನ್ನು ಪುರುಷತ್ವ ಅಥವಾ ಸ್ತ್ರೀಯತ್ವಕ್ಕೆ ಅಗತ್ಯವಾದ ಗುಣನಡತೆಯಲ್ಲಿ ಆಳವಾಗಿ ಹೂತಿದ್ದಾನೆ. ಸಂಸ್ಕರಿಸಿದ್ದಲ್ಲಿ ಅಥವಾ ಆತ್ಮನಿಂದ ಪಡಕೊಂಡಿರುವಲ್ಲಿ ಆತನಿಗೆ ಅಥವಾ ಆಕೆಗೆ ಹೆಚ್ಚಾದ ಸೇವೆಗೆ ಇನ್ನೂ ವಿಶಾಲವಾದ ಅವಕಾಶಗಳು ಅವರ ಪ್ರಸ್ತುತ ಮತ್ತು ಭವಿಷ್ಯತ್ ಜೀವನದಲ್ಲಿ ಒದಗಿಬರುತ್ತವೆ.

ಮಗುವಿನ ಅವಿಧೇಯತೆಯ ಘಟನೆಯಲ್ಲಿ ಅದಕ್ಕೆ ಗದರಿಕೆ ಅಥವಾ ತಿದ್ದುವಿಕೆ ಬೇಕಾಗುವಾಗ ಅದಕ್ಕೆ ಸಹಾನುಭೂತಿಯ ದೃಷ್ಟಿಯಿಂದ ಮತ್ತು ಅದರ ಒಳ್ಳೆಯ ಉದ್ದೇಶಗಳ ಭರವಸೆಯಿಟ್ಟು ಬುದ್ಧಿ ಹೇಳಬೇಕಾಗುತ್ತದೆ. – "ನಾನು ಬಹಳವಾಗಿ ಪ್ರೀತಿಸುವ ಮತ್ತು ಸತತವಾಗಿ ಸಂತೋಷವಾಗಿಡಲು ಮತ್ತು ದೇವರು ಬಯಸುವ ರೀತಿಯಲ್ಲಿ ತರಬೇತುಗೊಳಿಸಲು ಹೆಣಗುತ್ತಿರುವ ಈ ಮುದ್ದು ಕಂದಳು ಇಚ್ಛಾ ಪೂರ್ವಕವಾಗಿ ನನಗೆ ಅವಿಧೇಯತೆ ತೋರಿಲ್ಲವೆಂದು ನನಗೆ ತಿಳಿದದೆ. ಈ ಅವಿಧೇಯತೆಗೆ ಅವಳು ಬೇರೆಯವರ ಮಾದರಿಯನ್ನು ಅನುಸರಿಸಿದ್ದೇ ಕಾರಣ ಎಂದು ಖಚಿತವಾಗಿದೆ. ಆಕೆ ತನ್ನ ಅಮ್ಮ ಹೇಳಿದಂತೆ ಮಾಡಲು ತನ್ನ ಚಿತ್ತವನ್ನು ಇಲ್ಲಿ ಸರಿಯಾಗಿ ಉಪಯೋಗಿಸಿಲ್ಲ. ಈ ಬಾರಿ ನಾನು ನಿನ್ನನ್ನು ಕ್ಷಮಿಸುತ್ತೇನೆ ಮತ್ತು ಈ ರಾತ್ರಿ ನಾನು ಈ ವಿಷಯ ನಿನ್ನ ಮನಸ್ಸಿನಲ್ಲಿ ಅಚ್ಚಳಿಯುವಂತೆ ಕೇವಲ ನಿನಗೆ "ಗುಡ್ ನೈಟ್' ಮುದ್ದನ್ನು ನೀಡದಿರುವುದು ಬಿಟ್ಟರೆ ಬೇರೆ ಯಾವ ಶಿಕ್ಷೆಯನ್ನೂ ನೀಡುವುದಿಲ್ಲ, ನನ್ನ ಪ್ರಿಯಳೇ, ಮುಂದಿನ ಸಾರಿ ನೀನು ಸ್ವಯಂ ನಿಯಂತ್ರಣವನ್ನು ಪ್ರಯೋಗಿಸಲು ಇನ್ನೂ ಕಷ್ಟಪಡು ಎಂದು ನಾನು ನಿನಗೆ ನಿರ್ದೇಶಿಸುತ್ತೇನೆ, ಆಯಿತಾ ಪ್ರಿಯ ಮಗುವೇ? ಖಂಡಿತವಾಗಿ ನೀನು ಹಾಗೆಯೇ ಮಾಡುತ್ತೀ" ಮುಂದಿನ ಸಲ ಇಂತಹ ಸಂಗತಿಗಳನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳಿ. ಆದರೆ ಮಗುವಿನ ಉಚಿತವಾದ ಉದ್ದೇಶ ಮತ್ತು ಬಯಕೆಗಳನ್ನು ಪ್ರಶ್ನಿಸದಿರಿ – "ನನ್ನ ಮುದ್ದು ಮಗಳು ಮತ್ತೊಮ್ಮೆ ಸೋತಿದ್ದಕ್ಕೆ ನನಗೆ ಖೇದವಾಗುತ್ತಿದೆ. ನಾನು ನಿನ್ನ ಒಳ್ಳೆಯ ಉದ್ದೇಶಗಳ ಬಗ್ಗೆ ಸಂಶಯಪಡುವುದಿಲ್ಲ. ಪ್ರಿಯಳೇ, ನೀನು ನಿನ್ನ ಮನಸ್ಸಿನ ಇಚ್ಛಾಶಕ್ತಿಯನ್ನು ಸರಿಯಾದ ರೀತಿಯಲ್ಲಿ ಬಳಸದೇ ಇರುವುದಕ್ಕಾಗಿ ದುಃಖಿಸುತ್ತೇನೆ ನೀನು ಸರಿಯಾಗಿ ಬಳಸಬಹುದೆಂಬ ಖಚಿತತೆ ನನಗಿತ್ತು, ನೀನು ಮುಂದೆಯಾದರೂ ಇದನ್ನು ಮಾಡುವಿ ಎಂದು ನಾನು ಪ್ರಾಮಾಣಿಕವಾಗಿ ಅಪೇಕ್ಷಿಸುತ್ತೇನೆ. ಇದು ಕೇವಲ ಅಗತ್ಯವಾಗಿದೆ ಮಗಳೇ, ನಾನು ನನ್ನ ಕರ್ತವ್ಯವನ್ನು ಮಾಡುತ್ತಾ ಈ ಬಾರಿ ನಿನ್ನನ್ನು ಶಿಕ್ಷಿಸುತ್ತೇನೆ. ಆದರೆ ನಿನಗೆ ಈ ರೀತಿ ಮಾಡುವುದು ನನ್ನ ಸಂತೋಷಕ್ಕೆ ದೂರವಾದುದು. ಇಂತಹ ಅಕ್ರಮಗಳನ್ನು ಮಾಡದೆ ನೀನು ಜಯಗಳಿಸಿದಕ್ಕಾಗಿ ಮುಂದೊಮ್ಮೆ ನಾನು ನಿನ್ನೊಡನೆ ಸಂತೋಷವನ್ನು ಹಂಚಿಕೊಳ್ಳುತ್ತೇನೆ ಎಂಬ ನಂಬಿಕೆ ನನಗಿದೆ. ನೀನು ಈ ರೀತಿಯ ಅವಿಧೇಯತೆಯಲ್ಲಿ ನೇರವಾಗಿ ಭಾಗವಹಿಸಿದಕ್ಕಿಂತ ಹೆಚ್ಚಾಗಿ ಈ ಸಂಗತಿಯು ಪರಿಣಾಮವನ್ನು ಬೀರುವುದಾಗಿದೆ. ಇದು ನಿನ್ನ ಮುಂದಣ ಬದುಕಿನ ಎಲ್ಲಾ ಭವಿಷ್ಯದಲ್ಲಿ ಪರಿಣಾಮ ಬೀರುತ್ತದೆ. ನೀನು ಬರುವ ದುಷ್ಪ್ರೇರಣೆಗಳಿಗೆ "ಇಲ್ಲ'ವೆಂದು ಹೇಳಲು ಈಗ ಕಲಿಯದಿದ್ದರೆ ನೀನು ಭವಿಷ್ಯದಲ್ಲಿ ನಿನ್ನ ಜೀವನದಲ್ಲಿ ಕಾಣಿಸಿಕೊಳ್ಳಲಿರುವ ಇನ್ನೂ ಹೆಚ್ಚು ಮುಖ್ಯವಾದ ಮತ್ತು ಭಾರವಾದ ಪ್ರಶ್ನೆಗಳಲ್ಲಿಯೂ ಸೋತುಹೋಗುವಿ. ಆದರೆ ನನ್ನ ಪ್ರೀತಿ ಮತ್ತು ಭರವಸೆಗಳು ಮತ್ತು ಶಿಕ್ಷಣವು ಉತ್ತಮವಾದ ಫಲಗಳನ್ನು ಕೊಡುತ್ತವೆಂಬ ಆತ್ಮವಿಶ್ವಾಸ ನನಗಿದೆ. ಈಗ ನಿನಗಾಗಿರುವಂತೆ ನಾವು ನಮ್ಮ ಚಿತ್ತವನ್ನು ಸರಿಪಡಿಸಿಕೊಂಡು ಸರಿಯಾದ ಮಾರ್ಗದಲ್ಲಿ ಮುಂದುವರೆಯುವುದಾದರೆ ನಮ್ಮ ಪ್ರತಿಯೊಂದು ಸೋಲುಗಳು ಸಹಾ ನಮಗೆ ಸಹಾಯ ಮಾಡಬಹುದಾಗಿದೆ ಎಂಬುದನ್ನು ನೆನಪಿನಲ್ಲಿಟ್ಟುಕೋ ಪ್ರಿಯ ಮಗಳೇ, ನಾವು ಎಲ್ಲಿ ಬಲಹೀನರಾಗಿದ್ದೇವೆಂದು ಅನುಭವದಿಂದ ತಿಳಿದಿದ್ದೇವೋ ಅಂಥ ಕಡೆಗಳಲ್ಲಿ ನಾವು ವಿಶೇಷವಾದ ಎಚ್ಚರಿಕೆ ವಹಿಸಬೇಕೆಂದು ಕಲಿಯಬೇಕು. ನಾವು ದೇವರ ಮುಂದೆ ಬಾಗಿ ಈ ವಿಫಲತೆಯು ನಿನಗೆ ಲಾಭದಾಯಕ ಪಾಠವಾಗುವಂತೆ ಆತನ ಆಶೀರ್ವಾದಗಳಿಗಾಗಿ ಬೇಡಿಕೊಳ್ಳೋಣ. ಮತ್ತು ಅವುಗಳನ್ನು ನಿನ್ನ ಹೃದಯಗಳಲ್ಲಿ ಇಟ್ಟುಕೊಳ್ಳಲು ಆಗುವಂತೆ ಆತನ ಸಹಾಯಕ್ಕಾಗಿ ಕೇಳಿಕೊಳ್ಳೋಣ. ಇದರಿಂದಾಗಿ ಮುಂದೆ ದುಷ್ಪ್ರೇರಣೆಗಳು ನಿನ್ನನ್ನು ದಾಳಿ ಮಾಡುವಾಗ ನಿನ್ನ ನಡತೆಯು ಆತನಿಗೆ ಹೆಚ್ಚುಸಂತೋಷವನ್ನುಂಟು ಮಾಡುವಂತಾಗಲಿ".

ಎಲ್ಲಾ ಸಲಹೆಗಳಲ್ಲಿ ದೇವರನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು – ಪ್ರತಿಯೊಂದು ಮನೆಯಲ್ಲಿಯೂ ಕಂಡುಬರುವ "ಕರ್ತನ ಭಯವೇ (ಭಯಭಕ್ತಿ) ಜ್ಞಾನಕ್ಕೆ ಮೂಲ" ಎಂಬ ಸತ್ಯವೇದ ವಚನದ ಹಲಗೆಯು ತಂದೆತಾಯಿಗಳಿಗೆ ಮತ್ತು ಮಕ್ಕಳಿಗೆ ಮತ್ತು ಭೇಟಿಕೊಡುವ ಎಲ್ಲಾ ಸ್ನೇಹಿತರುಗಳಿಗೆ ದೇವರ ಚಿತ್ತವು ಮಾತ್ರವೇ ಅಂಗೀಕೃತಗೊಂಡ ನಿರ್ದಿಷ್ಟ ಪ್ರಮಾಣವಾಗಿದೆ ಎಂಬುದನ್ನು ನಿರಂತರವಾಗಿ ನಿಮ್ಮ ನೆನಪಿಗೆ ತರುವುದಾಗಿದೆ. ಕರ್ತನು ನಮ್ಮ ಎಲ್ಲಾ ಕಾರ್ಯಗಳಲ್ಲಿ ತಿಳುವಳಿಕೆ ನೀಡುವವನಾಗಿದ್ದಾನೆ. ದೇವರು ಆತನಿಂದ ನೂತನವಾಗಿ ಪಡಕೊಂಡವರಾದ ಮತ್ತು ನಮ್ರತೆಯಿಂದ ಕೂಡಿದ ನೀತಿವಂತರಾಗಿರುವವರೆಲ್ಲರ ಪರವಾಗಿ ಇದ್ದಾನೆ.

## ಸಂಕಷ್ಟದ ಸಮಯದಲ್ಲಿ ನಮ್ಮ ಮಕ್ಕಳು

## Our Children in the Time of Trouble

ನಾವು "ಸುಗ್ಗಿಯಕಾಲ"ದಲ್ಲಿ ಜೀವಿಸುತ್ತಿದ್ದೇವೆ, ಗೋಧಿ ಮತ್ತು ಹಣಜಿಯ ಬೇರ್ಪಡುವಿಕೆ ಕಾರ್ಯ ಈಗ ಜಾರಿಯಲ್ಲಿದೆ ಅಲ್ಲಿಯವರೆಗೆ ಕಷ್ಟಕಾಲವು ಇಡೀ ಲೋಕದ ಮೇಲೆ ವಿಶೇಷವಾಗಿ ಹೆಸರಿನ ಕ್ರೈಸ್ತ ಸಾಮ್ರಾಜ್ಯದ ಮೇಲೆ ಇರುತ್ತದೆ ಎಂದು ಗ್ರಹಿಸಿರುವ ನೂತನ ಸೃಷ್ಟಿಯವರು ತಮ್ಮ ಮಕ್ಕಳ ಬಗ್ಗೆ ಆಳವಾದ ಆಸಕ್ತಿ ವಹಿಸುತ್ತಾರೆ ಮತ್ತು ಆ ಕಷ್ಟಕಾಲದಲ್ಲಿ ಅವರಿಗೆ

ಬೇಕಾದ ವ್ಯವಸ್ಥೆ ಸಾಧ್ಯವಾದಷ್ಟು ಬುದ್ಧಿವಂತಿಕೆಯಿಂದ ಮಾಡಲು ಬಯಸುತ್ತಾರೆ. ಕಷ್ಟವು ಎಲ್ಲಾ ವರ್ಗದವರಿಗೂ ಒದಗಿಬರುತ್ತದೆ, ಈ ಕಾಲದ ಅಂದರೆ ಆರ್ಥಿಕ, ಸಮಾಜಿಕ, ಧಾರ್ಮಿಕ, ರಾಜಕೀಯ ಮುಂತಾದ ಎಲ್ಲಾ ಸಂಸ್ಥೆಗಳೂ ಇದಕ್ಕೆ ಒಳಪಡುತ್ತವೆ ಎಂಬ ಸತ್ಯವೇದದ ಪ್ರಧಾನ ಹೇಳಿಕೆಯ ದೃಷ್ಟಿಯಲ್ಲಿ ನೂತನ ಸೃಷ್ಟಿಯವರ ಮಕ್ಕಳು ಈ ಕಷ್ಟಗಳಿಂದ ಅದ್ಭುತ ರೀತಿಯಲ್ಲಿ ವಿನಾಯಿತಿ ಪಡಕೊಳ್ಳುತ್ತಾರೆ ಎಂದು ನಿರೀಕ್ಷಿಸುವುದು ಸಮಂಜಸವಲ್ಲ. ಅವರನ್ನು ಈ ಲೋಕದಲ್ಲಿ ಸ್ವಾಭಾವಿಕ ಪರಿಸ್ಥಿತಿಯಲ್ಲಿ ಪ್ರತ್ಯೇಕವಾಗಿ ಇಡಬಹುದಾದ ಸ್ಥಳವನ್ನು ನಾವು ಹುಡುಕಲಾರೆವು. ಸಮಯ ಬರುವಾಗ ಜನರು ತಮ್ಮ ಚಿನ್ನ ಬೆಳ್ಳಿಯನ್ನು ರಸ್ತೆಗಳಿಗೆ ಚೆಲ್ಲುತ್ತಾರೆ ಅವುಗಳು ಅವರನ್ನು ರಕ್ಷಿಸಲಾರವು (ಯೆಹೆ. 7:19 ಮತ್ತು ಚೆಫನ್ಯ 1:18) ಚಿನ್ನ ಮತ್ತು ಬೆಳ್ಳಿ, ರೂಪಾಯಿ ನೋಟುಗಳು, ಬಾಂಡ್‌ಗಳು ಇವುಗಳಲ್ಲಿ ಯಾವುದೂ ಸ್ಪಷ್ಟವಾಗಿ ಬೆಲೆಯುಳ್ಳದ್ದಾಗಿರುವುದಿಲ್ಲ ಮತ್ತು ರಕ್ಷಣೆ ಅಥವಾ ಅನುಕೂಲತೆಗಳು ಅಥವಾ ಬೇರೆ ಯಾವುದೇ ಸುಖಭೋಗಗಳನ್ನು ನೀಡುವಲ್ಲಿ ಇವುಗಳು ವಿಫಲವಾಗುವುವು. ನಾವು ಗ್ರಾಮೀಣ ಪ್ರದೇಶಗಳ ದೃಷ್ಟಿ ಹಾಯಿಸಿದರೆ, ಅಲ್ಲಿ ಆಹಾರವೇನಾದರೂ ದೊರಕೀತೆಂದು ನಿರೀಕ್ಷಿಸಿದರೆ, ನಮಗೆ ಸತ್ಯವೇದದ ಮಾಹಿತಿ ಏನೆಂದರೆ ಆ ಕಾಲದ ದುರವಸ್ಥೆಯು ಗ್ರಾಮೀಣಪ್ರದೇಶ ಹಾಗೂ ಪಟ್ಟಣಗಳಿಗೂ ಪರಿಣಾಮ ಬೀರುವುದಾಗಿದೆ "ಆ ಕಾಲಕ್ಕೆ ಮುಂಚೆ ಮನುಷ್ಯನಿಗಾಗಲೀ ಪಶುವಿಗಾಗಲೀ ದುಡಿತದಿಂದ ಏನೂ ಜೀವನವಾಗುತ್ತಿರಲಿಲ್ಲ; ಹೋಗಿ ಬರುವವರಿಗೆ ಶತ್ರುಗಳ ದೆಸೆಯಿಂದ ಭಯವಿಲ್ಲದೆ ಇರಲಿಲ್ಲ; ಒಬ್ಬರನ್ನೊಬ್ಬರು ಎದುರಿಸುವಂತೆ ಎಲ್ಲರನ್ನೂ ಪ್ರೇರೇಪಿಸುತ್ತಿದ್ದೆನು" (ಜೆಕರ್ಯ 8:10)

ಆ ಸಂಕಷ್ಟದ ಕಾಲದಲ್ಲಿ ನೆರವೇರುವಂತೆ ಕಂಡುಬರುವ ಕೇವಲ ಒಂದು ವಾಗ್ದಾನವುಂಟು ಮತ್ತು ಅದು ಸರ್ವಸಾಮಾನ್ಯವಾಗಿದ್ದು ನಮ್ರರೂ, ನೀತಿವಂತಿಕೆಯನ್ನು ಪ್ರೀತಿಸುವವರೂ ಆದ ಎಲ್ಲರಿಗೂ ಅದು ಅನ್ವಯಿಸುವುದಾಗಿದೆ ಎಂದು ಕಂಡುಬರುತ್ತದೆ. ಈ ವರ್ಗದಲ್ಲಿ ಈ ಲೋಕದಲ್ಲಿ ದೇವರ ಜ್ಞಾನದ ಬಗ್ಗೆ ಸರಿಯಾದ ಶಿಕ್ಷಣ ಹೊಂದಿದ ಪ್ರತಿಷ್ಠೆಗೊಂಡವರ ಎಲ್ಲಾ ಪ್ರಬುದ್ಧ ಮಕ್ಕಳೂ ಒಳಗೊಂಡಿದ್ದಾರೆ. "ಕರ್ತನ ವಾಗ್ದಾನ ಏನಂದರೆ ನಿಯಮವನ್ನು ಕೈಕೊಂಡ ಲೋಕದ ದೀನರೇ, ನೀವೆಲ್ಲರೂ ಕರ್ತನನ್ನು ಆಶ್ರಯಿಸಿರಿ. ಸದ್ಧರ್ಮವನ್ನು ಅಭ್ಯಾಸಿಸಿರಿ, ದೈನ್ಯವನ್ನು ಹೊಂದಿಕೊಳ್ಳಿರಿ; ಕರ್ತನ ಸಿಟ್ಟಿನ ದಿನದಲ್ಲಿ ಒಂದುವೇಳೆ ಮರೆಯಾಗುವಿರಿ" (ಚೆಫನ್ಯ 2:3).

ಕ್ರೈಸ್ತ ತಂದೆತಾಯಿಗಳು ತಾವೂ ಸಹಾ ತೆರೆಯನ್ನು ದಾಟಿದಾಕ್ಷಣ ರೂಪಾಂತರಗೊಂಡು ಪ್ರಥಮ ಪುನರುತ್ಥಾನದ ಬಲದಲ್ಲಿ ಭಾಗಿಗಳಾಗಿ ಕರ್ತನ ಸಂಗಡಲೂ ಆತನ ಪವಿತ್ರರೆಲ್ಲರ ಸಂಗಡಲೂ ಇದ್ದು ಮಹಿಮೆಯಲ್ಲಿ ಪಾಲುಹೊಂದಿ ಕೊಳ್ಳುವರೆಂಬ ಭರವಸೆ ಇದ್ದರೂ ಕೆಲವೊಮ್ಮೆ ತಮಗೆ ಪ್ರಿಯರಾದವರನ್ನು ಬಿಡಲು ಇಚ್ಛೆ ಇಲ್ಲದವರಾಗಿರುತ್ತಾರೆ. ನೂತನ ಮನಸ್ಸು ಈ ರೀತಿಯಲ್ಲಿ ಕೆಲವೊಮ್ಮೆ ಅಡಚಣೆಯನ್ನು ಉಂಟುಮಾಡುತ್ತದಲ್ಲದೆ ಹಿಂದೆ ಉಳಿದ ಕುಟುಂಬದ ಸದಸ್ಯರನ್ನು ಈ ರೀತಿಯ ವ್ಯಾಕುಲಕ್ಕೊಳಪಡಿಸುತ್ತದೆ. ಅವರು ತಮ್ಮೊಡನೆ ಸಮಾಲೋಚನೆ, ಸಹಾಯ ಮತ್ತು ಮಾರ್ಗದರ್ಶನದಲ್ಲಿ ಮುಂದುವರೆಯುವುದನ್ನು ಬಯಸುತ್ತಾರೆ. ಅಂಥವರು ಗ್ರಹಿಸಿಕೊಳ್ಳಬೇಕಾದುದೇನೆಂದರೆ, ಕರ್ತನಿಗೆ ಎಲ್ಲವನ್ನೂ ಒಪ್ಪಿಸಿಕೊಟ್ಟಮೇಲೆ, ಅವರನ್ನು ಅಂಗೀಕರಿಸುವಲ್ಲಿ ಕರ್ತನು ಅವರ ಹಿತಾಸಕ್ತಿಗಳನ್ನೆಲ್ಲವನ್ನೂ ಅಂಗೀಕರಿಸಿಕೊಂಡಿದ್ದಾನೆ; ಅವರು ಬುದ್ಧಿವಂತಿಕೆಯಿಂದ ಪ್ರಪಂಚದ ಎಲ್ಲಾ ಚಿಂತನೆಗಳಲ್ಲಿ ಆತನ ಪ್ರೀತಿಯ ಪಾಲನೆಗೆ ಬದ್ಧರಾಗಬೇಕು. ದೇವರ ಪ್ರೀತಿಯ ಉದ್ದ, ಅಗಲ. ಎತ್ತರ, ಆಳ ಇವುಗಳ ಬಗ್ಗೆ ಮತ್ತು ಆದಾಮನ ಸಂತತಿಯ ಪ್ರತಿಯೊರ್ವ ಸದಸ್ಯರಿಗೆ ಅಂತಿಮವಾಗಿ ಯಾವ ರೀತಿಯಲ್ಲಿ ಮಹಾ ವಿಮೋಚನೆಯ ಲಾಭವು ವಿಸ್ತರಿಸಲ್ಪಡುತ್ತದೆ ಎಂಬುದನ್ನು ಅವರು ಹೆಚ್ಚು ಹೆಚ್ಚಾಗಿ ಕಲಿತುಕೊಳ್ಳುವಾಗ ಅವರಿಗೆ ಹೆಚ್ಚಿನ ಆತ್ಮವಿಶ್ವಾಸ ಮತ್ತು ತಮ್ಮ ಪ್ರಿಯರ ಬಗ್ಗೆ ಕರ್ತನಲ್ಲಿ ನಂಬಿಕೆಯುಂಟಾಗುತ್ತದೆ. ಇದರೊಂದಿಗೆ ಅವರು ತಾವು ಸಹಾ ತೆರೆಯ ಆಚೆ ಬದಿಯಲ್ಲಿ ಇದ್ದೇವೆ ಮತ್ತು ನಾವು ಪ್ರಿಯರ ಹಿತಾಸಕ್ತಿಯನ್ನು ಗಮನಿಸುವ ಅವಕಾಶಗಳು ನಮಗಿದೆ ಮಾತ್ರವಲ್ಲದೆ ಅವರ ಬಗ್ಗೆ ಕಾಪಾಡುವ ಕಾತರವನ್ನು ವಿಸ್ತರಿಸಬಹುದಾದ ಇನ್ನೂ ಹೆಚ್ಚಿನ ಅವಕಾಶಗಳು ತಮಗಿದೆ ಎಂಬುದನ್ನು ಅವರು ನೆನಪಿಗೆ ತಂದುಕೊಳ್ಳಬೇಕು. ಅಂದರೆ ಅವರ ಸಂಗತಿಗಳಲ್ಲಿ ದೇವರ ಜ್ಞಾನದ ಅಡಿಯಲ್ಲಿ ದೈವಯುಕ್ತವಾದ ಮಾರ್ಗದರ್ಶನ. ಇದರಿಂದ ಅವರು ಆಗ ನಿರ್ಬಂಧವಿಲ್ಲದೆ ಸಮ್ಮತಿಸುತ್ತಾರೆ.

ಹಾಗಾದರೆ, ನೂತನ ಸೃಷ್ಟಿಗಳು ತಮ್ಮ ಮಕ್ಕಳಿಗೆ ದೇಹಕ್ಕನುಸಾರವಾದ ಅತ್ಯುತ್ತಮವಾದ ಯಾವ ಮುನ್ನೇರ್ಪಾಡುಗಳನ್ನು ಒದಗಿಸಬಹುದು? ಆ ಅತ್ಯುತ್ತಮವಾದ ಮುನ್ನೇರ್ಪಾಡುಗಳು ಅವರುಗಳ ತರಬೇತಿಯಲ್ಲಿವೆ ಎಂಬುದಾಗಿ ನಾವು ಉತ್ತರಿಸುತ್ತೇವೆ. ಈಗಾಗಲೇ ತೋರಿಸಿರುವಂತೆ ಇದರಲ್ಲಿ ಸಾಮಾನ್ಯವಾದ ಶಾಖೆಗಳಲ್ಲಿ ಪರಿಜ್ಞಾನವುಳ್ಳ ವಿದ್ಯಾಭ್ಯಾಸ ಮತ್ತು ದೇವರಿಗೆ ಸಂಬಂಧಿಸಿದ ವಿಷಯಗಳಲ್ಲಿ ನಿರ್ದಿಷ್ಟವಾದ ತರಬೇತಿ ಮತ್ತು ಶಿಕ್ಷಣ – ಆತನ ಬಗ್ಗೆ ಮತ್ತು ಆತನ ಮಾತುಗಳ ಬಗ್ಗೆ ಪೂಜ್ಯಭಾವನೆ, ಆತನ ವಾಗ್ದಾನಗಳ ಬಗ್ಗೆ ನಂಬಿಕೆ ದೇವರ ವಾಕ್ಯಗಳಲ್ಲಿ ಮತ್ತು ಸ್ವರ್ಣ ನಿಯಮದಲ್ಲಿ ಸೂಚಿಸಿರುವ ವಿಶೇಷ ಗುಣ ಲಕ್ಷಣಗಳನ್ನು ಬೆಳೆಸಿಕೊಳ್ಳುವುದು ಇತ್ಯಾದಿಗಳು ಒಳಗೊಂಡಿರುತ್ತವೆ. ಅಂತಹ ಮಕ್ಕಳನ್ನು ಈ ಲೋಕದ ಐಶ್ವರ್ಯದಲ್ಲಿ ಒಂದು ರೂಪಾಯಿ ಸಹಾ ನೀಡದೆ ಬಿಟ್ಟುಬಿಟ್ಟರೂ ಅವರು ಐಶ್ವರ್ಯವಂತರಾಗಿಯೇ ಇರುತ್ತಾರೆ. ಯಾಕೆಂದರೆ, ಅವರ ಹೃದಯದಲ್ಲಿ, ತಲೆಯಲ್ಲಿ, ಅವರಲ್ಲಿ ಅಚ್ಚೊತ್ತಲ್ಪಟ್ಟ ಗುಣನಡತೆಗಳಲ್ಲಿ ಒಂದು ರೀತಿಯ ಐಶ್ವರ್ಯವಿದ್ದು ಅದು ಹುಳು ಹಿಡಿಯುವುದಿಲ್ಲ, ತುಕ್ಕುಹಿಡಿಯುವುದಿಲ್ಲ ಅಥವಾ ಅರಾಜಕತೆ ಅಥವಾ ಲೋಕದ ಮತ್ಯಾವುದೇ ಸಂಗತಿಗಳಾಗಲೀ ಅವರಿಂದ ಕಿತ್ತುಕೊಳ್ಳಲು ಸಾಧ್ಯವಿಲ್ಲ. ಅಪೊಸ್ತಲನು ಹೇಳುವಂತೆ ಅವರು ದೇವರ ಸಂಬಂಧದಲ್ಲಿ ಐಶ್ವರ್ಯವಂತರಾಗಿಯೇ ಇದ್ದಾರೆ. ಆತನು ಪುನಃ ಪ್ರಕಟಿಸುವುದೇನೆಂದರೆ –"ಸಂತುಷ್ಟಿಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ" (1ತಿಮೋ. 6:6). ಇದು ಬಲು ದೊಡ್ಡ

ಐಶ್ವರ್ಯವಾಗಿದೆ. ದೇವರ ಕೃಪೆಯಿಂದ ಪ್ರಾಮಾಣಿಕವಾಗಿ ಪ್ರಯಾಸ ಪಡುತ್ತಾ ಆ ಮೂಲಕ ತಮ್ಮ ಮಕ್ಕಳಿಗೆ ಎಲ್ಲಾ ತುರ್ತುಪರಿಸ್ಥಿತಿಗಳಲ್ಲಿ ಈಗಿನ ಜೀವನ ಮತ್ತು ಮುಂದೆ ಬರುವ ಜೀವನಕ್ಕೆ ಬೇಕಾದುದನ್ನು ಸಜ್ಜುಗೊಳಿಸಿ, ಅವರನ್ನು ಯೋಗ್ಯರನ್ನಾಗಿ ಮಾಡುವುದರ ಮೂಲಕ ನೂತನ ಸೃಷ್ಟಿಗಳು ಎಲ್ಲಾ ಐಹಿಕ ಹಿತಾಸಕ್ತಿಗಳಿಂದ ತುಲನಾತ್ಮಕವಾಗಿ ಮುಕ್ತರಾಗಿದ್ದೇವೆಂದು ಭಾವಿಸುತ್ತಾರೆ. ಈ ಹಿಂದೆ ಅಗತ್ಯವಾದವುಗಳನ್ನು, ಸಮಯೋಚಿತವಾದವುಗಳನ್ನು ತಮಗೆ ಒದಗಿಸಿಕೊಟ್ಟ ಅದೇ ಕರ್ತನು ತನ್ನ ಮೇಲ್ವಿಚಾರಿಕೆಯನ್ನು, ಮುನ್ನೇರ್ಪಾಡುಗಳನ್ನು ಅಂದಿನ ಮತ್ತು ಇಂದಿನ ಎಲ್ಲಾ ಪರಿಸ್ಥಿತಿಗಳಿಗೆ ಹೊಂದುವಂತೆ ಆತನನ್ನು ಪ್ರೀತಿಸಿ ಆತನಲ್ಲಿ ವಿಶ್ವಾಸವಿಡುವವರಿಗೆ ಈಗಲೂ ಮುಂದುವರಿಸಲು ಶಕ್ತನೂ, ಇಚ್ಛೆಯುಳ್ಳವನೂ ಆಗಿದ್ದಾನೆ ಎಂಬುದನ್ನು ನೆನಪುಮಾಡಿಕೊಳ್ಳಬೇಕು.

## ಸರಿಯಾದ ವಿನೋದಗಳು

## Proper Amusements

ಉಲ್ಲಾಸ ಮತ್ತು ಹಾಸ್ಯ ಇವುಗಳು ನಮ್ಮ ಮಾನವ ಸ್ವಭಾವದ ಅಂಶಗಳಾಗಿವೆ. ಅನೇಕ ಸಾರಿ ಇವುಗಳು ಬಹಳ ಗಂಭೀರವಾದ ಮತ್ತು ಪ್ರಯೋಜನಕಾರಿ ಗುಣಗಳ ಅನುಪಾತದಲ್ಲಿ ಹೆಚ್ಚು ಸಂಸ್ಕಾರವುಳ್ಳದ್ದಾಗಿ ಕಂಡುಬರುತ್ತವೆ. ಚಿಕ್ಕ ಮಕ್ಕಳನ್ನು ಅವರ ತೃಪ್ತಿಯು ನಾಶವಾಗುವವರೆಗೆ ಅವರು ವಿನೋದಕ್ಕಾಗಿ ಕೂಗುವವರೆಗೆ ನಿರಂತರವಾದ ವಿನೋದದ ಭಾವೋದ್ವಿಗ್ನತೆಯಲ್ಲಿಟ್ಟು ಹಾಳುಮಾಡಲಾಗುತ್ತಿದೆ. ವಿನೋದದ ಈ ಆಲೋಚನೆಯು ಬಾಲ್ಯಪ್ರಾಯದಲ್ಲಿ ಮುಂದುವರೆಯುತ್ತದೆ. ಮಕ್ಕಳು ಆಗ ಜೀವನ ಸಂಗತಿಗಳನ್ನು ವಿಚಾರಣೆಮಾಡುತ್ತಾ ತಮ್ಮನ್ನು ತಾವೇ ಮನೋರಂಜನೆಗೊಳಿಸಿಕೊಳ್ಳುತ್ತಿರುತ್ತವೆ. ತಮ್ಮ ತಂದೆತಾಯಿಗಳ ಬಗ್ಗೆ ಅಥವಾ ಪುಸ್ತಕಗಳ ಬಗ್ಗೆ ವಿವರಣೆಗಳನ್ನು ಕೇಳುತ್ತಿರುತ್ತವೆ. ವಿನೋದಗೊಳ್ಳುವ ಬಯಕೆಯು ಈ ರೀತಿಯಲ್ಲಿ ಬೆಳೆಯುತ್ತದೆ. ಮತ್ತು ತಕ್ಕ ಸಮಯದಲ್ಲಿ ಪ್ರದರ್ಶನ ಶಾಲೆಗಳನ್ನೂ, ಹಾಸ್ಯಗಾರರ ಮೂರ್ಖತೆಯನ್ನು ಹಂಬಲಿಸುತ್ತಾರೆ. ನೂತನ ಸೃಷ್ಟಿಯವರು ಆರಂಭದಿಂದ ಅಂತ್ಯದವರೆಗೆ ತಮ್ಮ ಸಂತತಿಯವರನ್ನು ವಿರುದ್ಧ ದಿಕ್ಕಿನಲ್ಲಿ ಜೀವನವೆಂಬ ಮಹಾ ನಾಟಕದಲ್ಲಿ ನಟರಾಗುವಂತೆ, ಕಪಟವನ್ನು ತಿರಸ್ಕರಿಸುವಂತೆ, ಪ್ರಯೋಜಕಾರಿಯಾದ ಕೃತ್ಯಗಳನ್ನು ಮಾತ್ರವೇ ನಡೆಸುವಂತೆ ಮತ್ತು ಪ್ರಪಂಚವೆಂಬ ರಂಗಮಂದಿರದಲ್ಲಿ ತಮ್ಮ ತಲಾಂತುಗಳು ಮತ್ತು ಅವಕಾಶಗಳಿಗೆ ತಕ್ಕಂತೆ ಪರೋಪಕಾರಿಯಾಗಿ ಕಂಡುಬರುವಂತೆ ಅವರನ್ನು ತರಬೇತುಗೊಳಿಸಬೇಕು.

## ನೂತನ ಸೃಷ್ಟಿಗಳ ಮಕ್ಕಳ ವಿವಾಹಗಳು

## Marriage of the Children of New Creatures

ನೂತನ ಸೃಷ್ಟಿಗಳಿಗೆ ಅಪೋಸ್ತಲನ ಪ್ರತಿಬಂಧಕಾಜ್ಞೆಯ ಬಗ್ಗೆ ನಾವೀಗಾಗಲೇ ಗಮನಿಸಿದ್ದೇವೆ. ಮದುವೆಯಾದವರು ಒಳ್ಳೆಯದನ್ನೇ ಮಾಡಿದ್ದಾರೆ, ಮದುವೆಯಾಗದೇ ಇರುವವರು ಇನ್ನೂ ಒಳ್ಳೆಯದನ್ನೇ ಮಾಡಿದ್ದಾರೆ, ಈ ಬುದ್ಧಿಮಾತುಗಳು ಹೇಗೂ ಅವರ ಪ್ರತಿಷ್ಠಿತರಲ್ಲದ ಮಕ್ಕಳಿಗೆ ಅನ್ವಯಿಸುವುದಿಲ್ಲ. ಎರಡನೆಯವರ ಬಗ್ಗೆ ಅಪೋಸ್ತಲನು ಹೀಗೆ ಬರೆಯುತ್ತಾನೆ– "ಆದುದರಿಂದ ಪ್ರಾಯದ ಮಹಿಳೆಯರು (ಕೂಡಿಬಂದವರು ಆದರೆ ಸಭೆಯವರಲ್ಲ–ವಿಶ್ವಾಸಿಗಳು ಆದರೆ ಪ್ರತಿಷ್ಠೆಗೊಂಡವರಲ್ಲ ಅಥವಾ ವಿಮೋಚನೆಗೊಂಡವರಲ್ಲ) ಮದುವೆ ಮಾಡಿಕೊಂಡು ಮಕ್ಕಳನ್ನು ಹೆತ್ತು ಮನೆಯ ಯಜಮಾನಿಯಾಗಿರುವುದು ನನಗೆ ಒಳ್ಳೆಯದಾಗಿ ತೋಚುತ್ತದೆ. ಹಾಗೆ ಮಾಡುವುದರಿಂದ ವಿರೋಧಿಗಳ ನಿಂದೆಗೆ ಆಸ್ಪದ ಕೊಡದೆ ಇರುವರು" (1 ತಿಮೋ. 5:14).

ನೂತನ ಸೃಷ್ಟಿಯಲ್ಲಿ ಅನೇಕರು ಉದ್ದೇಶ ಪೂರ್ವಕವಲ್ಲದಿದ್ದರೂ ಈ ವಿಷಯದಲ್ಲಿ ಗುರುತರವಾದ ತಪ್ಪು ಮಾಡುತ್ತಾರೆಂದು ನಾವು ನಂಬುತ್ತೇವೆ. ಹೆಚ್ಚಿನ ಪ್ರಕರಣಗಳಲ್ಲಿ ವಿವಾಹವು ಹೆಚ್ಚಿನ ಜವಾಬ್ದಾರಿಗಳನ್ನು ತರುವುದೆಂದೂ, ಆದರೆ ಕಹಿಯಾದ ನಿರಾಶೆಗಳನ್ನೂ, ದುಃಖವನ್ನೂ, ಹೃದಯ ಬೇನೆಯನ್ನೂ ಸಹಾ ತರುವುದೆಂಬುದನ್ನು ಅವರು ಗ್ರಹಿಸುತ್ತಾರೆ. ಆದರೆ ಅವರ ಮಗ ಅಥವಾ ಮಗಳು ವಿವಾಹ ಅರ್ಹ ವಯಸ್ಸನ್ನು ತಲುಪಿದಾಗ ಮತ್ತು ತಮ್ಮ ಮನಸ್ಸುಗಳನ್ನು ವಿವಾಹದಲ್ಲಿ ಕರ್ತನಿಗೆ ಕೊಡದೇ ಇರುವಾಗ ಅವರು ನೂತನಸೃಷ್ಟಿಗಳಿಗೆ ಮಾತ್ರವೇ ಕೊಡಲ್ಪಟ್ಟ "ಅವರು ದಮೆಯಿಲ್ಲದವರಾದರೆ ಮದುವೆ ಮಾಡಿಕೊಳ್ಳಲಿ. ಕಾಮತಾಪ ಪಡುವುದಕ್ಕಿಂತ ಮದುವೆ ಮಾಡಿಕೊಳ್ಳುವುದು ಉತ್ತಮವಷ್ಟೆ" (1ಕೊರಿ. 7:9) ಎಂಬ ಅಪೋಸ್ತಲನ ಬುದ್ಧಿ ಮಾತುಗಳನ್ನು ಕೇಳಲು ಸಿದ್ಧರಿರುವಲ್ಲಿ ಅಂಥವರು ಮದುವೆ ಮಾಡಿಕೊಳ್ಳುವುದು ಉತ್ತಮ.

ದೇವರು ಸ್ವಭಾವಿಕ ಸ್ತ್ರೀ ಪುರುಷರಾದ ಆದಾಮ ಹವ್ವರಿಗೆ ಪಾಪವು ಈ ಲೋಕಕ್ಕೆ ಪ್ರವೇಶಿಸುವ ಮುನ್ನವೇ ವಿವಾಹವನ್ನು ನೇಮಿಸಿದನೆಂಬುದನ್ನು ನಾವು ನೆನಪು ಮಾಡಿಕೊಳ್ಳೋಣ. ಆದಾಗ್ಯೂ ಸರ್ವೇ ಸಾಮಾನ್ಯವಾಗಿ ಈ ವಿವಾಹ ಸಂಬಂಧವನ್ನು ಇತರೇ ಸರಿಯಾದ ಕಾರಣ ಮತ್ತು ಬೇರೆ ಎಲ್ಲಾ ಸಂಗತಿಗಳನ್ನು ದುರುಪಯೋಗಪಡಿಸಿಕೊಂಡಂತೆ ಹಾಗೂ ಸಾಮಾನ್ಯವಾಗಿ ಇದನ್ನೂ ಭಯಂಕರವಾಗಿ ದುರುಪಯೋಗಪಡಿಸಿ ಕೊಂಡಿದ್ದಾಗ್ಯೂ ಇದು ವಿವಾಹದ ವ್ಯವಸ್ಥೆಯ ತಪ್ಪಲ್ಲ, ಅದನ್ನು ದುರುಪಯೋಗ ಪಡಿಸಿಕೊಳ್ಳುವುದು ತಪ್ಪು. "ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರೂ ಎಣಿಸಬೇಕು; ಗಂಡಹೆಂಡಿರ ಸಂಬಂಧವು ನಿಷ್ಕಳಂಕವಾಗಿರಬೇಕು. ಜಾರರಿಗೂ, ವ್ಯಭಿಚಾರಿಗಳಿಗೂ ದೇವರು ನ್ಯಾಯ ತೀರಿಸುವನೆಂದು ತಿಳುಕೊಳ್ಳಿರಿ" (ಇಬ್ರಿಯ 13:3–4).

ಈ ಪ್ರಸ್ತಾಪದ ಬಗ್ಗೆ ತಂದೆತಾಯಿಗಳ ಅತ್ಯುತ್ತಮವಾದ ಬುದ್ಧಿಮಾತುಗಳನ್ನು ಕೇಳುವ ಒಲವಿಲ್ಲದಿರುವಿಕೆಯು ಬೆಳೆದ ಮಕ್ಕಳಲ್ಲಿ ಸ್ವಾಭಾವಿಕ – ಸ್ವಭಾವದ ಸಮಗ್ರ ಒಲವು ವಿರುದ್ಧ ದಿಕ್ಕಿನಲ್ಲಿರುತ್ತದೆ; ಇದರೊಂದಿಗೆ ಅವರಿಗೆ ಅವರ ತಂದೆತಾಯಿಗಳ ಉದಾಹರಣೆಯೂ ಇರುತ್ತದೆ. ದೇವರಿಗೆ ತಮ್ಮನ್ನು ಒಪ್ಪಿಸಿಕೊಳ್ಳುವ ಈ ಸಲಹೆಯನ್ನು ತಿರಸ್ಕರಿಸುವುದಾದರೆ, ಹಾಗೂ ತಮ್ಮ ಜೀವನದ ಅನುಭವದ ಮೂಲಕ ಪಾಠ ಕಲಿತುಕೊಳ್ಳುತ್ತೇವೆ ಎಂಬದಾಗಿ ತೀರ್ಮಾನಿಸಿದರೆ, ವಿಳಂಬ ಮಾಡದೆ ಆದಷ್ಟು ಮಟ್ಟಿಗೆ ಬೇಗ ಪ್ರಾರಂಭಿಸುವುದು ಒಳಿತು. ಜೀವನದ ಅನೇಕ ಪಾಠಗಳನ್ನು

ವೈವಾಹಿಕ ಅನುಭವಗಳಿಂದ ಕಲಿತುಕೊಳ್ಳಬಹುದು ಮತ್ತು ಈ ದಿಸೆಯಲ್ಲಿ ನೂತನ ದಂಪತಿಗಳು ತಮ್ಮ ಸ್ವಂತ ಸಂಪನ್ಮೂಲಗಳಿಗೆ ಜೋತುಬೀಳುತ್ತಾರೆ. ಅಂದರೆ ಅವರಿಗೆ ಅವರದೇ ಆದ ಸ್ವಂತ ಮನೆಯೊಂದನ್ನು ಮಾಡಿಕೊಳ್ಳಲು ಪ್ರೋತ್ಸಾಹಿಸಬೇಕು. ಈ ರೀತಿಯಲ್ಲಿ ಅವರು ಸ್ವಾವಲಂಬನೆಯನ್ನು, ಮನಸ್ಥೈರ್ಯ, ತಾಳ್ಮೆ, ಕಷ್ಟಸಹಿಷ್ಣುತೆ ಮತ್ತು ಸಹಕಾರ ಇವುಗಳನ್ನು ಬಲು ಬೇಗ ಮೆಚ್ಚಿಕೊಳ್ಳಲು ಪ್ರಾರಂಭಿಸುತ್ತಾರೆ.

ಅಪೋಸ್ತಲನು "ಈಗಿನ ಕಷ್ಟಕಾಲ' (1 ಕೊರಿಂಥ 7:26) ಎಂದು ಯಾವುದನ್ನು ಸೂಚಿಸುತ್ತಾನೋ ಅದರಡಿಯಲ್ಲಿ ನಾವು ಮದುವೆ ಎಂಬ ಆಯ್ಕೆಯಲ್ಲಿ ಪಕ್ವವಾದ ವಯಸ್ಸು ಯೋಗ್ಯವೆಂದು ಪರಿಗಣಿಸುವುದನ್ನು ಸಹಾ ಒಪ್ಪಿಕೊಳ್ಳಬಹುದು. ಗಂಡಿಗೆ 21 ವರ್ಷ, ಹೆಣ್ಣಿಗೆ 18 ವರ್ಷ ಎಂಬುದನ್ನು ನಾವು ಕೆಲವು ಕಾರಣಕ್ಕೆ ಪಕ್ವವಾದ ವಯಸ್ಸುಗಳೆಂದು ಪರಿಗಣಿಸುತ್ತೇವೆ. ಹಿಂದಿನ ಆಲೋಚನೆ ಮತ್ತು ನಡತೆಯ ಸ್ವಭಾವಗಳು ಆ ವೇಳೆಗೆ ಸ್ಥಿರಗೊಂಡಿರುತ್ತದೆ. ವಿವಾಹವಾದ ದಂಪತಿಗಳು ಪರಸ್ಪರ ಸಂಯಮಗೊಳ್ಳಬೇಕು; ಈ ಕಾರಣದಿಂದ ವಿಶೇಷವಾಗಿ ಹೆಣ್ಣಿನ ಕಡೆಯಲ್ಲಿ ಚಿತ್ತವೃತ್ತಿಗೆ ಮಣಿಯುವುದು ಅಪೇಕ್ಷನೀಯ. ಆಕೆಯನ್ನು ಕೇವಲ ಭಯಭಕ್ತಿಯುಳ್ಳ, ಅಂಗೀಕರಿಸಿದ ತತ್ವಗಳು ಅನುಮತಿಸಿದಂತೆ ನೋಡಿಕೊಳ್ಳುವ ಮತ್ತು ಶರಣಾಗುವ ಜೊತೆಗಾರ್ತಿಯೆಂದು ಅಂಗೀಕರಿಸಬೇಕು. ಇದರ ಹೊರತಾಗಿ, ಚಿಕ್ಕಪ್ರಾಯದ ತಾಯಿಯ ದೈಹಿಕ ಜೋಡಣೆಯ ಆಕೆಯ ಹೆಚ್ಚಾದ ಸ್ಥಿತಿಸ್ಥಾಪಕತ್ವವು ಆಕೆಗೆ ಬಂದ ಶಾಪವನ್ನು (ಆದಿಕಾಂಡ 3:16) ತಡಕೊಳ್ಳಲು ವಿಶಿಷ್ಟ ರೀತಿಯ ವರದಾನವಾಗಿದೆ. ಪ್ರತಿಯೊರ್ವ ಯೋಗ್ಯ ತಂದೆತಾಯಿಗೂ ತಮ್ಮ ಮಕ್ಕಳ ಪಾಲನೆ ಮತ್ತು ತರಬೇತಿಯ ಪ್ರಯತ್ನದಲ್ಲಿ ಅಧಿಕವಾಗಿ ದೊರೆಯುವ ಅಮೂಲ್ಯ ಅನುಭವಗಳನ್ನು ನಾವು ಮರೆಯದೆ ಇರೋಣ. ಈ ಪಾಠಗಳು ಅವರನ್ನು ಪರಲೋಕದ ತಂದೆಯ ಬಳಿಗೆ ಬೇರೆಯವುಗಳಿಗಿಂತ ತ್ವರಿತವಾಗಿ ಸೆಳೆಯುತ್ತವೆ. ನೂತನ ಸೃಷ್ಟಿಯವರು ಎಲ್ಲರಿಗಿಂತ ಹೆಚ್ಚಾಗಿ ತಮ್ಮ ಸಂತಾನಕ್ಕೆ ಇದನ್ನೇ ಬಯಸುತ್ತಾರೆ.

ವಿವೇಕಿ ತಂದೆತಾಯಿಗಳು ತಮ್ಮ ಮಕ್ಕಳ ವಿವಾಹದ ಬಗೆಗಿನ ಸ್ವಾಭಾವಿಕ ಆಕಾಂಕ್ಷೆಗಳಿಗೆ ಅಡ್ಡಿಪಡಿಸುವುದಿಲ್ಲ. ಆದರೆ ಬುದ್ಧಿವಂತಿಕೆಯಿಂದ ಸಹಕರಿಸುತ್ತಾ ಸರಿಯಾದ ಜೋಡಿಯ ಸಹವಾಸ ಮಾಡುವಂತೆ ಹೊಂದಿಸಲು ಹೆಣಗುತ್ತಾರೆ. ಸರಿಯಾದ ರೀತಿಯ ತರಬೇತಿ ಪಡೆದ ಮಕ್ಕಳು ತಮ್ಮ ಸ್ವಾಭಾವಿಕ ಜೀವನದ ಬಹುಮುಖ್ಯ ಕಾರ್ಯದಲ್ಲಿ ಪ್ರೀತಿಯ ತಂದೆತಾಯಿಗಳ ಬುದ್ದಿವಾದವನ್ನು ನಿರ್ಲಕ್ಷಿಸಲಾರರು. ಹೀಗಿದ್ದಾಗ್ಯೂ, ಅಂತಹ ಕ್ಷಣದಲ್ಲಿ ದಯಾಪರ ತಂದೆತಾಯಿಗಳು ಜೊತೆಗೂಡುವಿಕೆಯು ಈಗಾಗಲೆ ವ್ಯವಸ್ಥೆಪಡಿಸಿರುವಂತೆ ಒಂದೇ ಸಮತಲದಲ್ಲಿ ಅಂದರೆ ಅವಿಶ್ವಾಸಿಗಳು ಅವಿಶ್ವಾಸಿಗಳೊಂದಿಗೆ, ನೀತಿನಿರ್ಣಯ ಹೊಂದಿದವರು ನೀತಿನಿರ್ಣಯ ಹೊಂದಿದವರೊಡನೆ, ಸಂಸ್ಕರಣೆ ಹೊಂದಿದವರು ಸಂಸ್ಕರಣೆ ಹೊಂದಿದವರೊಟ್ಟಿಗೆ ಇತ್ಯಾದಿಯಾಗಿ ಇರಬೇಕೆಂಬುದನ್ನು ಮರೆಯಬಾರದು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅವರ ಮಗ ಅಥವಾ ಮಗಳು ಪ್ರತಿಷ್ಠೆಹೊಂದಿಕೊಳ್ಳಲಿಲ್ಲವಾದರೆ ಅವರನ್ನು ಕರ್ತನಲ್ಲಿ ಮಾತ್ರವೇ ವಿವಾಹವಾಗ ಬೇಕಾಗಿರುವ ನೂತನ ಸೃಷ್ಟಿಗಳೊಂದಿಗೆ ಜೋಡಿಮಾಡಲು ಹವಣಿಸಬಾರದು; ವಿವಿಧ ಸ್ವಭಾವದವರ ಒಟ್ಟುಗೂಡುವಿಕೆಯು ಬಹುಶಃ ಇಬ್ಬರಿಗೂ ಅನಾನುಕೂಲವಾಗಬಹುದು ಮತ್ತು ಎಲ್ಲಾ ಸಂಗತಿಗಳಲ್ಲಿ ಅದು ದೈವೇಚ್ಛೆಗೆ ವಿರೋಧವಾಗಿದೆ. ಯಾಕೆಂದರೆ ಆತನ ಜನರು "ಕರ್ತನಲ್ಲಿ ಮಾತ್ರವೇ' ವಿವಾಹವಾಗುತ್ತಾರೆ.

## ನಮ್ಮ ಮಕ್ಕಳ ಆರೋಗ್ಯದ ಪಾರುಪತ್ಯಗಾರಿಕೆ

### Stewardship of Our Children's Health

ತಂದೆತಾಯಿಗಳು ಶುದ್ಧವಾದ ದೇಹಗಳು ತಮ್ಮ ಮಕ್ಕಳ ಮನಸ್ಸನ್ನು ಶುದ್ಧಗೊಳಿಸುವುದರಲ್ಲಿ ಸಹಾಯಕವಾಗುತ್ತದೆ ಎಂದು ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡಿರಬೇಕು. ಹೀಗಾಗಿ ಆರೋಗ್ಯಕರ ದೇಹಗಳು ಆರೋಗ್ಯಕರ ಮನಸ್ಸಿನ ಅಮೂಲ್ಯ ಜೊತೆಯಾಗಿರುತ್ತದೆ. ಪ್ರತಿಯೊಬ್ಬ ನೂತನ ಸೃಷ್ಟಿಯು ತನ್ನ ಸ್ವಸ್ಥವಾದ ಮನಸ್ಸಿನ ಚೈತನ್ಯದೊಡನೆ ತಕ್ಕಷ್ಟು ಮಟ್ಟಿಗೆ ಓರ್ವ ತತ್ವಜ್ಞಾನಿಯೋಪಾದಿಯಲ್ಲಿ ತನ್ನ ಸಂತಾನಕ್ಕೆ ಅವರ ದೇಹಪ್ರಕೃತಿಯು ಅನುಮತಿಸುವಂತೆ ಅವರವರ ದೈಹಿಕ ಆರೋಗ್ಯವನ್ನು ಸಂರಕ್ಷಿಸಿಕೊಳ್ಳಲು ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಮಾಡಬೇಕು. ಶುದ್ಧವಾದ ಗಾಳಿ, ಶುದ್ಧವಾದ ನೀರು, ಶುದ್ಧವಾದ ಆಹಾರ ಮತ್ತು ಶುದ್ಧವಾದ ದೈಹಿಕ ಮತ್ತು ಮಾನಸಿಕ ವ್ಯಾಯಾಮ ಇವುಗಳು ನಮ್ಮ ತಂದೆತಾಯಿಗಳಿಂದ ನಾವು ಪಡೆದಿರುವ ಮತ್ತು ನಾವು ನಮ್ಮ ಮಕ್ಕಳಿಗೆ ರವಾನಿಸಿರುವವುಗಳ ಉತ್ತಮ ಬಳಕೆಮಾಡಲು ಬುನಾದಿಗಳಾಗಿವೆ.

ಮಂಜಿನಿಂದ ಕೂಡಿದ ಗಾಳಿಯು ಶುದ್ಧವಾದುದಲ್ಲ ಎಂಬುದನ್ನು ಪ್ರತಿಯೊರ್ವ ತಂದೆತಾಯಿಗಳೂ ತಿಳಿದಿರಬೇಕು. ಸಾಧ್ಯವಾದಷ್ಟು ಹೊಂದಿಕೆಯಾಗಿರುವ ಸಮಂಜಸವಾದ ವಾತಾವರಣದಲ್ಲಿ ಕಲುಷಿತ ಗಾಳಿಯು ಹೊರಹೋಗುವಂತೆ ಕಿಂಡಿಯನ್ನಿರಿಸಿ (ventilation) ಅದು ಶ್ವಾಸಕೋಶದಿಂದ ಹೊರಹೋಗಬೇಕು; ಒಳಾಂಗಣದ ಕಿಂಡಿ ಸಾಧ್ಯವಾದಷ್ಟು ಸೂರ್ಯನ ಬೆಳಕನ್ನು ಒಳಗೊಂಡಿರಬೇಕು, ಸೂಕ್ಷ್ಮವುಳ್ಳವರು ಬೆಳಗಿನ ಜಾವದ ಮತ್ತು ಸಂಧ್ಯಾಕಾಲದ ತೇವವುಳ್ಳ ಹವೆಯಲ್ಲಿ ಹೊರಗೆ ಹೋಗಬಾರದು. ಅವರು ನೀರು ಸರಬರಾಜು ಮಾಡುವ ಎಲ್ಲಾ ಪಾತ್ರೆ ಮುಂತಾದವುಗಳ ಶುಚಿತ್ವವನ್ನು ಗಮನಿಸಬೇಕು. ಮತ್ತು ಅತ್ಯಂತ ಎಚ್ಚರಿಕೆ ವಹಿಸುವಂತೆ ಪದೇ ಪದೇ ಹೇಳುತ್ತಿರಬೇಕು. ಪ್ರತಿಯೊಂದು ಮಗುವೂ ಅದರ ಪ್ರಾಯ ಮತ್ತು ಶಕ್ತಿಗೆ ಅನುಪಾತವಾಗಿ ಕೆಲವೊಂದು ನಿಗದಿತ ಕಾರ್ಯಗಳನ್ನು ಉತ್ತಮವಾಗಿಯೂ ಜಾಗರೂಕತೆಯಿಂದಲೂ ಮಾಡಬೇಕಾಗುತ್ತದೆ. ಈ ಕಾರ್ಯವು ಸ್ವಲ್ಪಮಟ್ಟಿಗೆ ಮಾನಸಿಕ ಮತ್ತು ದೈಹಿಕವಾಗಿ ಓದುವ ಮತ್ತು ಧ್ಯಾನಿಸುವ ಗುಣಲಕ್ಷಣ, ದೈಹಿಕ ಶ್ರಮಕ್ಕೆ ಕಡಿಮೆಯಿಲ್ಲದಂತಿದ್ದು, ನಿಕಟವಾದ ತಪಾಸಣೆ ಇರಬೇಕಾಗುತ್ತದೆ. ಹಾಗೂ ಮನಸ್ಸು ಮತ್ತು ದೇಹದ ಹೊರಗೆ ಜೀವನದ ಅನೇಕ ಕಾರ್ಯಗಳಿಗೆ ಸಿದ್ಧಪಡುವ ದೆಸೆಯಲ್ಲಿ ಯಥೋಚಿತವಾಗಿ ಸುತ್ತುವಂತೆ ಕಾಲ ಕಾಲಕ್ಕೆ ಬದಲಾಗಬೇಕು. ಮಗುವು ತಂದೆತಾಯಿಗಳಿಗೆ ತನ್ನ ಬಗ್ಗೆ ಇರುವ ಆಸಕ್ತಿಯನ್ನು ಗ್ರಹಿಸತಕ್ಕದ್ದು ಮತ್ತು ಅದರ ಭವಿಷ್ಯದ ಕಲ್ಯಾಣಕ್ಕಾಗಿಯೇ ಅದು ಪ್ರೀತಿಯಿಂದ ಉತ್ತೇಜನಗೊಂಡಿದೆ ಎಂದು ತಿಳಿದು. ಅದು ದೈವಿಕ ಋಣವಾಗಿದೆ ಎಂಬದನ್ನು ಗ್ರಹಿಸಬೇಕು.

ಯುಕ್ತವಾದ ಆಹಾರ ಸೇವನೆಯು ಶೋಚನೀಯವಾಗಿ ತಪ್ಪಾದ ಅರ್ಥಮಾಡಿಕೊಳ್ಳಲಾಗಿದೆ. ದೈಹಿಕ ಮತ್ತು ಮಾನಸಿಕವಾದ ಹೆಚ್ಚಾದ ಕಾಯಿಲೆಗಳಿಗೆ ಇದುವೇ ನಿಸ್ಸಂದೇಹವಾಗಿ ಕಾರಣವಾಗಿದೆ. ಆಹಾರವನ್ನು ಮೂರು ವರ್ಗಗಳನ್ನಾಗಿ ಮಾಡಬಹುದೆಂದು ಪ್ರತಿಯೊಬ್ಬ ತಂದೆತಾಯಿಗಳೂ ತಿಳಿದಿರಬೇಕು :

(1) ಹೆಚ್ಚಾಗಿ ಸಸಾರಜನಕಗೊಳಿಸಿದ ಆಹಾರವು ದೇಹದ ಮಾಂಸ, ಮಾಂಸಖಂಡಗಳು ಮತ್ತು ಸ್ನಾಯುಗಳನ್ನು ಬಲಗೊಳಿಸುತ್ತದೆ. ಇವುಗಳಲ್ಲಿ ಮಾಂಸ, ಮೀನು, ಕೋಳಿ, ಮೊಟ್ಟೆ, ಬೀನ್ಸ್ ಬಟಾಣಿ, ಹೆಸರು ಮುಂತಾದವುಗಳಿರುತ್ತವೆ. ಇಂತಹ ಆಹಾರದಲ್ಲಿ ಪ್ರತಿನಿತ್ಯ ಐದು ಔನ್ಸ್‌ಗಳು ಒಬ್ಬ ಸಾಮಾನ್ಯ ಉದ್ಯೋಗದ ಸಾಮಾನ್ಯ ವ್ಯಕ್ತಿಗೆ ಪೂರ್ಣ ಮಟ್ಟದ ಆಹಾರವೆಂದು ಪರಿಗಣಿಸಲಾಗಿದೆ.–ಮಕ್ಕಳಿಗೆ ಅನುಪಾತವಾಗಿ ಇನ್ನೂ ಕಡಿಮೆಯಾಗುವುದು. ಈ ಆಹಾರವನ್ನು ಹೆಚ್ಚು ಬೇಯಿಸಿದಷ್ಟೂ ಹಾನಿಕರ.

(2) ಈ ಆಹಾರವು ಹೆಚ್ಚಾಗಿ ಹಿಟ್ಟು ಮತ್ತು ಸಕ್ಕರೆಯನ್ನೊಳಗೊಂಡಿರುತ್ತದೆ. ಇವು ನರಗಳಿಗೆ ಸಾಮರ್ಥ್ಯವನ್ನು ಅಂದರೆ ಶಕ್ತಿ, ಚುರುಕುತನ, ಉತ್ಸಾಹ ಮತ್ತು ಶಾಖ ಇವುಗಳನ್ನು ಒದಗಿಸುವವುಗಳಾಗಿವೆ. ಇವುಗಳು ಗೋದಿ, ಆಲೂಗಡ್ಡೆ, ಕಾಳುಗಳು, ಓಟ್ಸ್, ಅಕ್ಕಿ ಮುಂತಾದವುಗಳಿರುತ್ತವೆ. ಅವುಗಳ ವಿವಿಧ ತಯಾರಿಕೆಗಳೆಂದರೆ – ಬ್ರೆಡ್, ಬಿಸ್ಕತ್ತು, ಕೆಲವೊಂದು ಸಿಹಿ ಖಾದ್ಯಗಳು ಮುಂತಾದವುಗಳು. ಇವುಗಳನ್ನು ಚೆನ್ನಾಗಿ ಬೇಯಿಸಬೇಕು. ಇವುಗಳು ಪುಷ್ಟಿದಾಯಕವಾದವುಗಳು, ಸುಲಭವಾಗಿ ಪಚನವಾಗುತ್ತವೆ. ಇವುಗಳನ್ನು ಜೀರ್ಣಶಕ್ತಿಯ ಸ್ವಾಭಾವಿಕ ಬಲಹೀನತೆಗಳ ಅನುಪಾತಕ್ಕೆ ತಕ್ಕಂತೆ ತಯಾರಿಸಬೇಕಾಗುತ್ತದೆ. ನಮ್ಮ ಈ ಯಾಂತ್ರಿಕ ದಿನಗಳಲ್ಲಿನ ಸುಲಭ ಪ್ರಯಾಣಗಳಲ್ಲಿ ನಮ್ಮ ನರಬಲವು ಹೆಚ್ಚಾಗಿ ಸವೆಯುವುದು ಸಾಮಾನ್ಯ. ಆದುದರಿಂದ ಈ ರೀತಿಯ ಆಹಾರಗಳನ್ನು ಮೇಲಿನವುಗಳಿಗಿಂತ ಹೆಚ್ಚಾಗಿ ಸೇವಿಸಬೇಕು. ಸಾಮಾನ್ಯ ಮನುಷ್ಯನು ಸೇವಿಸಬೇಕಾದ ಪ್ರಮಾಣ ದಿನಕ್ಕೆ ಇಪ್ಪತ್ತು ಔನ್ಸ್‌ಗಳು. ಬೆಳೆಯುವ ಮಕ್ಕಳೂ ಅವರ ಮನಸ್ಸು ಮತ್ತು ದೇಹದ ತೀಕ್ಷ್ಣವಾದ ಚಟುವಟಿಕೆಗಳ ಕಾರಣ ಇನ್ನೂ ಹೆಚ್ಚು ಪ್ರಮಾಣದಲ್ಲಿ ಸೇವಿಸುವ ಅಗತ್ಯವಿದೆ

(3) ಹೆಚ್ಚು ನೀರಿನ ಅಂಶವಿರುವ ಹಣ್ಣುಗಳು ಮತ್ತು ತರಕಾರಿಗಳು. ಇವುಗಳಲ್ಲಿ ಬೈಯೋ ಕೆಮಿಕಲ್ ಉಪ್ಪಿನ ಅಂಶವಿರುತ್ತದೆ. ಇದು ಬಹು ಮೌಲ್ಯವುಳ್ಳದ್ದು. ಇವುಗಳು ಸುಣ್ಣದ ಉಪ್ಪು, ಸಸ್ಯಕ್ಷಾರ (ಮರದುಪ್ಪು) ಮುಂತಾದವುಗಳನ್ನು ಉಂಟು ಮಾಡುವುದಲ್ಲದೆ ಎಲುಬುಗಳನ್ನು ಬಲಗೊಳಿಸಲು ಸಹಾಯಕವಾಗಿವೆ ಮತ್ತು ನರಕ್ಕೆ, ಗತಿನಿಯಂತ್ರಣಕ್ಕೆ ಬೇಕಾದ ಆಹಾರವನ್ನು ಸರಬರಾಜುಮಾಡುತ್ತದೆ. ಆದರೆ ನೀರು ತುಂಬಿದ ಅವುಗಳ ನಾರುಗಳು (ಎಲೆಕೋಸು ಮತ್ತು ಮೂಲಂಗಿ ಮುಂತಾದವುಗಳಲ್ಲಿರುವಂತೆ) ನಮ್ಮ ಪುಷ್ಟಿಗೆ ಏನನ್ನೂ ಮಾಡುವುದಿಲ್ಲ. ಇವುಗಳು ಹೊಟ್ಟೆಯ ಒಳಬಾಗ ಮತ್ತು ಕರುಳನ್ನು ಉಜ್ಜಲು ಮತ್ತು ಸ್ವಚ್ಛಗೊಳಿಸಲು ಸಹಾಯಕವಾಗಿವೆ ಮತ್ತು ಹೇರಳವಾದ ಅಹಾರವು ಅಂಟಿಕೊಳ್ಳದಂತೆ ಅವನ್ನು ಒಟ್ಟುಗೂಡಿಸುತ್ತದೆ. ಸ್ಕ್ವಾಶ್, ಬೀಟ್ಸ್, ಸಿಹಿಸೇಬು ಮುಂತಾದವುಗಳಲ್ಲಿಯೂ ಅವುಗಳ ಸಿಹಿಯ ಅನುಪಾತದಲ್ಲಿ ಪೌಷ್ಟಿಕಾಂಶಗಳು ಇರುತ್ತವೆ. ಅವುಗಳಲ್ಲಿ ಕೆಲವು ಪ್ರಭಲ ಆಮ್ಲವುಳ್ಳದ್ದಾಗಿದ್ದು ರಕ್ತವನ್ನು ತೆಳುವಾಗಿಸಲು, ಶುದ್ಧೀಕರಿಸಲು ಸಹಾಯ ಮಾಡುತ್ತವೆ. ಇವುಗಳಲ್ಲಿ ದ್ರಾಕ್ಷಿ, ಹುಳಿಯಾದ ಸೇಬು, ನಿಂಬೆಹಣ್ಣು, ಕಿತ್ತಲೆ ಮುಂತಾದವುಗಳಿರುತ್ತವೆ. ದ್ರವರೂಪದಲ್ಲಿರುವಂತವುಗಳೆಂದರೆ – ಹಾಲು, ಸೂಪು ಅಥವಾ ನೀರುತುಂಬಿದ ಹಣ್ಣುಗಳು, ತರಕಾರಿಗಳು ಅಥವಾ ಶುದ್ಧ ನೀರೂ ಆಗಬಹುದು. ಸಾಮಾನ್ಯ ಮನುಷ್ಯನು ಕನಿಷ್ಠ ಐದು ಪೌಂಡ್ (ಸುಮಾರು ಅರವತ್ತು ಔನ್ಸ್ ಅಥವಾ 1/8 x 5 ಗ್ಯಾಲನ್ಸ್ ) ಗಳಷ್ಟಾದರು ಸೇವಿಸಬೇಕು. ಈ ಆಹಾರದಲ್ಲಿ ಊಟದ ಸಮಯಕ್ಕೆ ಅಗತ್ಯವಾದಷ್ಟು ನೀರು ಇದೆ. ಊಟವಾದ ಒಂದು ಘಂಟೆ ಅಥವಾ ಅದಕ್ಕೂ ಹೆಚ್ಚು ಸಮಯದ ನಂತರ ನೀರು ಕುಡಿಯಬೇಕು. ಈ ಅಂಕಿ ಅಂಶಗಳು ಹೆಚ್ಚು ಜನರು ಬಹಳ ಕಡಿಮೆ ನೀರು ಮತ್ತು ತರಕಾರಿಗಳನ್ನು ಉಪಯೋಗಿಸುತ್ತಾರೆಂಬುದನ್ನು ತೋರಿಸುತ್ತದೆ.

ಮುಂದೆ ಗಮನಿಸಲೇಬೇಕಾದುದೇನೆಂದರೆ, ಹಿಟ್ಟಿನ ಅಂಶವುಂಟೆಂದು ಹೇಳಿದ ಹಲವು ಪದಾರ್ಥಗಳು (ಗೋಧಿ, ಕಾಳುಗಳು, ಓಟ್ಸ್ ಅಥವಾ ಮುಸುಕಿನ ಜೋಳ ಮುಂತಾದವುಗಳು) ಕೇವಲ ಸಸಾರಜನಕ ಅಂಶಗಳನ್ನೊಳಗೊಂಡಿರುತ್ತವೆ. ಆದುದರಿಂದ ಮಿತವ್ಯಯದ ದೃಷ್ಟಿಯಿಂದ ಅಥವಾ ಬೇರೆ ಕಾರಣಗಳಿಂದ ಶುದ್ಧವಾದ ಸಸ್ಯಹಾರಿ ಅಹಾರ ಯೋಜನೆಯನ್ನು ಕುಟುಂಬಕ್ಕೆ ಮೆದುಳು, ಮಾಂಸಖಂಡ ಮತ್ತು ಓಜಸ್ಸಿನ ಒಳಿತಿಗೆ ತಕ್ಕ ಪೋಷಣೆ ಮಾಡುವಂತೆ ಕಡಿಮೆ ವೆಚ್ಚದಲ್ಲಿ ವ್ಯವಸ್ಥೆ ಪಡಿಸಬಹುದು. ಈ ಮೇಲೆ ತಿಳಿಸಿದ ಅಹಾರದಲ್ಲಿ (ವಿಶೇಷವಾಗಿ ಎರಡನೆಯದು) ಇದರ ಮಿತಿ ಮೀರಿದರೆ ಕಾಯಿಲೆಗೆ ಕಾರಣವಾಗಬಹುದು. ಹೆಚ್ಚಾಗಿ ಸೇವಿಸಿದಲ್ಲಿ ರಕ್ತವು ಹೆಚ್ಚು ಫಲವತ್ತಾಗಿ ಮಂದವಾಗಬಹುದು. ಇದರ ಕಾರಣ ಮೊಡವೆಗಳು, ಕುರುಗಳು, ಬೊಕ್ಕೆ, ಹುಣ್ಣು ಮುಂತಾದವುಗಳು ಉಂಟಾಗುತ್ತವೆ ಅಥವಾ ನಾಲಿಗೆಮೇಲೆ ಕಪ್ಪು ಹೊದಿಕೆ ಉಂಟಾಗುತ್ತದೆ. ತಲೆನೋವು, ಸಂಧಿವಾತಗಳುಂಟಾಗುತ್ತವೆ, ಉಸಿರುಕಟ್ಟಿಸುವ ಶೀತ ಮುಂತಾದವುಗಳು ಕಾಣಿಸಿಕೊಳ್ಳುತ್ತವೆ; ಅಥವಾ ಪೌಷ್ಟಿಕಾಂಶಗಳ ಕೊರತೆಯುಂಟಾದಾಗ ಬಲಹೀನತೆ, ನಡುಕ, ನಾಲಿಗೆಯ ಮೇಲೆ ಬಿಳಿ ಹೊದಿಕೆ ಇವುಗಳು ಕಾಣಿಸಿಕೊಳ್ಳುತ್ತವೆ ಮತ್ತು ಶೀತದ ಶೀಘ್ರ ಪ್ರವೃತ್ತಿಯುಂಟಾಗಬಹುದು. ಮಕ್ಕಳು ತಮ್ಮ ರೋಗಲಕ್ಷಣವನ್ನು ಖುದ್ದಾಗಿ ಗುರುತಿಸಿ ಅವಶ್ಯಕ ಆಹಾರವನ್ನು ಸೇವಿಸುವಂತೆ ಮಾಡಬೇಕು. ರೋಗವು ಉಪಕ್ರಮಿಸುವಾಗಲೇ ಅದಕ್ಕೆ ತಡೆಯೊಡ್ಡುವಂತೆ ಊಟದ ಮೇಜಿನಲ್ಲಿ ನಿಗ್ರಹ ಮತ್ತು ಉತ್ತಮ ನಿರ್ಣಯಗಳನ್ನು ಅನುಸರಿಸಿ ಆ ಮೂಲಕ ಅದನ್ನು ಪ್ರತಿಬಂಧಿಸಬಹುದು. ಆದರೆ ಎಲ್ಲರೂ ಅಂತಹ ವಿಷಯಗಳಲ್ಲಿ ದೃಢ ತೀರ್ಮಾನಗಳನ್ನು ಕೈಕೊಳ್ಳುವುದಿಲ್ಲ. ಆದುದರಿಂದ ದೇವರ ಕೃಪೆಯಿಂದ ದೃಢ ಮನಸ್ಸಿನ ಚೈತನ್ಯವಿರುವ ತಂದೆತಾಯಿಗಳು ಆಹಾರ ಸರಬರಾಜನ್ನು ತಕ್ಕಂತೆ ನಿಯಂತ್ರಿಸಿ, ಕ್ರಮಪಡಿಸಬೇಕು. ಈ ರೀತಿಯಲ್ಲಿ ಅದನ್ನು ಸೇವಿಸುವವರು ಹೆಚ್ಚು ಆಯ್ಕೆ ಮತ್ತು ಮುಂಜಾಗ್ರತೆಗಳನ್ನು ವಹಿಸುವ ಅಗತ್ಯಬೀಳುವುದಿಲ್ಲ – ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ಒಂದೇ ಸಾರಿ ನೀಡದೆ

ಒಂದರ ನಂತರ ಒಂದು ನಿಯಮಾವರ್ತನದಲ್ಲಿ ನೀಡಿದರೆ ಒಳಿತು.

ನಾವು ಇಲ್ಲಿ ಯಾವುದೇ "ಭ್ರಮೆ"ಯನ್ನು ಪ್ರತಿಪಾದಿಸುತ್ತಿಲ್ಲ ಅಥವಾ ನೂತನ ಸೃಷ್ಟಿಗಳ ಮನಸ್ಸನ್ನು ಆತ್ಮೀಕ ಆಹಾರದಿಂದ ದೂರ ಕೊಂಡೊಯ್ದು ಅನ್ಯಜನರು ಬಯಸುವಂತೆ ನಾವು ಏನನ್ನು ತಿನ್ನಬೇಕು, ಏನನ್ನು ಕುಡಿಯಬೇಕು ಎಂಬಿವುಗಳನ್ನು ತಿಳಿಸುವುದರ ಮೂಲಕ ಅವರನ್ನು ದೈಹಿಕ ಆರೋಗ್ಯದೊಂದಿಗೆ ಬಂಧಿಸುತ್ತಿಲ್ಲ. ಇಲ್ಲಿ ನಾವು ಮುಖ್ಯವಾಗಿ ಆತ್ಮೀಕವಾದವುಗಳನ್ನೇ ಬಯಸುತ್ತೇವೆ. ಆದರೆ ನಮ್ಮ ಮನಸ್ಸುಗಳು ಮತ್ತು ಸಂಭಾಷಣೆಗಳು ವಿಶೇಷವಾಗಿ ಆತ್ಮೀಕತೆಯ ಬಗ್ಗೆ ವ್ಯವಹರಿಸುತ್ತಿರುವಾಗ, ನಾವು ನಮ್ಮ ಮಕ್ಕಳ ಪಾಲನೆಯಲ್ಲಿ ಹೊಂದಿರುವ ಮತ್ತು ದೇವರ ಅನುಗ್ರಹದಲ್ಲಿ ಹೊಂದಿರುವ ದೃಢವಾದ ನಿರ್ಣಯಗಳನ್ನು ತೆಗೆದುಕೊಳ್ಳುವುದು ನಮ್ಮ ಕರ್ತವ್ಯ.

ಕಡೆಯಲ್ಲಿ ಈ ಆಹಾರ ಪದ್ಧತಿಯ ಬಗ್ಗೆ ಮುಗಿಸುವ ಮುನ್ನ ಒಂದು ಮಾತು. ಕುದುರೆಗಳು ದನಕರುಗಳು ಯಾವುದೇ ಸಹಜವಾದ ಚಿತ್ತಗತಗಳಿಲ್ಲದೆ ತಮ್ಮ ಆಹಾರಗಳನ್ನು ಅವು ಒಳ್ಳೆಯದಿರಲಿ ಇಲ್ಲದಿರಲಿ ಅವುಗಳನ್ನು ಸೇವಿಸುತ್ತವೆ – ಮಾನವ ಕುಟುಂಬದ ಕೆಲವೊಂದು ಪಶುಸ್ವಭಾವದ ಕ್ರೂರರು ಅದರಂತೆಯೇ ಮಾಡುತ್ತಾರೆ, ಆದರೆ ಅವರು ಸ್ವಲ್ಪ ಮಂದಿ. ಹೀಗಾಗಿ ಪ್ರತಿಯೊಂದು ಊಟದಲ್ಲಿಯೂ ಅಹ್ಲಾದಕರವಾದ ಅಥವಾ ಅಹ್ಲಾದಕರವಲ್ಲದ ಚಿತ್ತವೃತ್ತಿಗಳನ್ನು ಉದ್ರೇಕಿಸುವ ಔಚಿತ್ಯಗಳು ಅಂದರೆ ಪ್ರೀತಿ, ಆನಂದ, ಶಾಂತಿ, ನಿರೀಕ್ಷೆ ಮುಂತಾದವುಗಳು ಅಥವಾ ಕೋಪ, ಹಗೆತನ, ದ್ವೇಷ, ಕಜ್ಜಾಟ ಮುಂತಾದವುಗಳು ಇದ್ದೇ ಇರುತ್ತವೆ. ಮಾನಸಿಕ ಸ್ಥಿತಿಗಳು ಈಗ ಜೀರ್ಣಶಕ್ತಿಯ ಮೇಲೆ ಪ್ರಭಲವಾದ ಪ್ರಭಾವವನ್ನು ಬೀರುವುದಾಗಿದೆ ಎಂದು ಗ್ರಹಿಸಲಾಗಿದೆ. ಸ್ಪಷ್ಟವಾಗಿ ಅರ್ಥಮಾಡಿಕೊಳ್ಳದಿರುವ ಯಾವುದೋ ರಾಸಾಯನ ಕ್ರಿಯೆಯಿಂದ ಕೋಪ ಮತ್ತು ಹಗೆಯ ಮಾನಸಿಕ ಸ್ಥಿತಿಗಳ ಉದ್ರೇಕವು ನರಗಳ ಮೇಲೆ ಪರಿಣಾಮವನ್ನುಂಟು ಮಾಡಿ ಪಚನಕ್ರಿಯೆಯ ಮಧ್ಯೆ ಪ್ರವೇಶಿಸುತ್ತದೆ. ಆದರೆ ಉಲ್ಲಾಸ ಮತ್ತು ಆನಂದಕರ ಮಾನಸಿಕ ಸ್ಥಿತಿಗಳು ವಿರುದ್ಧ ದಿಕ್ಕಿನಲ್ಲಿ ಕೆಲಸವಾಡುತ್ತವೆ. ನೂತನ ಸೃಷ್ಟಿಯು ತಾನೇ ಬಹುಸಂಖ್ಯಾತವಾದ ಅನಾನುಕೂಲಕರ ಪರಿಸರಗಳಲ್ಲಿಯೂ ತನ್ನೊಳಗೆ ದೇವರ ಪ್ರೀತಿಯನ್ನು ಕಾಪಾಡಿಕೊಳ್ಳಬಹುದು. ಆದರೆ ಬೇರೆಯವರು ಹಾಗೆ ಮಾಡಲಾರರು. ಆದುದರಿಂದ ಆತನು ಕುಟುಂಬದ ಜವಾಬ್ದಾರಿಯುತ ಯಜಮಾನನೇ ಆಗಿದ್ದರೆ ಮನೆವಾರ್ತೆಯವರ ಶಾಂತಿ ಸಮಾಧಾನಗಳನ್ನು ಊಟದ ಮೇಜಿನಲ್ಲಿ ಧಾರ್ಮಿಕವಲ್ಲದಿದ್ದರೂ ಇತರ ಉಲ್ಲಾಸಕರ ಮತ್ತು ಲಾಭದಾಯಕ ಪ್ರಸ್ತಾಪಗಳ ಸಂಭಾಷಣೆಗಳ ಮೂಲಕ ಕಾಪಾಡಿಕೊಳ್ಳುವುದು ಆತನ ಕರ್ತವ್ಯವಾಗಿದೆ.

ನಮ್ಮ ಸ್ವಂತ ಮತ್ತು ಮಕ್ಕಳ ಆರೋಗ್ಯದ ಹಿತದ ಬಗ್ಗೆ ನಮ್ಮ ಕರ್ತನಿಗೆ ವಚನಬದ್ಧರಾಗಿರುವಾಗ ನಾವು ನಮ್ಮ ಮೇಲೆ ಆಗಲೇ ಸುರಿಸಲ್ಪಟ್ಟಿರುವ ಆತನ ಆಶೀರ್ವಾದ ಮತ್ತು ಸೌಕರ್ಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ವಿನಿಯೋಗಿಸಬೇಕು. ಆಗ ಮಾತ್ರವೇ, ಬೇರೆಯಾಗಿ ಅಲ್ಲ, ನಾವು ಎಲ್ಲಾ ಸಂಗತಿಗಳೂ ನಮ್ಮ ಹಿತಕ್ಕಾಗಿಯೇ ಸಂಭವಿಸುತ್ತಿವೆ ಎಂಬುದನ್ನು ಮೆಚ್ಚಿಕೊಳ್ಳಲು ಸಾಧ್ಯವಾಗುತ್ತದೆ. ■

* * * * * *